ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23 ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695 ಸುದ್ದಿ ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

47

ಏಪ್ರಿಲ್ 26 ಭಾನುವಾರ 2026

ಸಂಪುಟ: 47 | ಸಂಚಿಕೆ: 11

ಪುಟಗಳು: 12

₹4

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com,
website: www.mysurumithra.com

ಮೈಸೂರು ಮಿತ್ರ

ಭಾನುವಾರ 26 ಏಪ್ರಿಲ್ 2026

ವಿಶೇಷ ಮಕ್ಕಳಲ್ಲಿ ಭರವಸೆ ಮೂಡಿಸಿದ ದಿಶಾ



ಡೌನ್ ಸಿಂಡ್ರೋಮ್ ಹೊಂದಿರುವ ಮೈತ್ರಿ ಶಾಲೆ ವಿದ್ಯಾರ್ಥಿ ಎಸ್.ದಿಶಾ ಎಸ್‌ಎಸ್‌ಎಲ್‌ಸಿಯಲ್ಲಿ ತೇರ್ಗಡೆ

ಮೈಸೂರು, ಏ.25 (ವಿಎನ್‌ಎಸ್) –ಮೈಸೂರಿನ ಮೈತ್ರಿ ಶಾಲೆಯ ಡೌನ್ ಸಿಂಡ್ರೋಮ್ ಮತ್ತು ಶೇ. 75ರಷ್ಟು ಅಂಗವೈಕಲ್ಯ ಹೊಂದಿರುವ 17 ವರ್ಷದ ವಿದ್ಯಾರ್ಥಿನಿ ಎಸ್. ದಿಶಾ ಇತ್ತೀಚೆಗೆ ನಡೆದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಯಶಸ್ವಿಯಾಗಿದ್ದಾಳೆ.

ದಿಶಾ ಕನ್ನಡದಲ್ಲಿ 68, ಗಣಿತದಲ್ಲಿ 44, ವಿಜ್ಞಾನದಲ್ಲಿ 44 ಮತ್ತು ಸಮಾಜ ವಿಜ್ಞಾನದಲ್ಲಿ 69 ಅಂಕಗಳನ್ನು ಪಡೆದು ಕೊಂಡಿದ್ದಾಳೆ. ಅಂಗವೈಕಲ್ಯದಿಂದಾಗಿ ಇತರ ಎರಡು ಭಾಷೆಗಳ ಪರೀಕ್ಷೆಗೆ ಹಾಜರಾಗುವುದರಿಂದ ಆಕೆಗೆ ವಿನಾಯಿತಿ ನೀಡಲಾಯಿತು. ಈ ಸಾಧನೆಯು ಅವರ ಪರಿಶ್ರಮ, ಸ್ವಂತ ಕಲಿಕೆಯ ವಿಧಾನದ ಜೊತೆಗೆ ಅವರ ಕುಟುಂಬ ಮತ್ತು ಶಿಕ್ಷಕರ ಅವಿರತ ಪರಿಶ್ರಮ ಪ್ರತಿಬಿಂಬಿಸುತ್ತದೆ. ಮೈತ್ರಿ ಶಾಲೆಯು ಫಲಿತಾಂಶವನ್ನು ಹೆಮ್ಮೆಯ ಕ್ಷಣ ಎಂದು ಬಣ್ಣಿಸಿದೆ. ಇದು ಸಮಗ್ರ ಶಿಕ್ಷಣದ ಮಹತ್ವವನ್ನು ಮತ್ತು ಪ್ರತಿ ಮಗುವೂ ಬೆಂಬಲದಿಂದ ಅಸಾಧ್ಯವಾದುದ್ದನ್ನು ಸಾಧಿಸಬಹುದು ಎಂಬ ನಂಬಿಕೆಯನ್ನು ಬಲಪಡಿಸುತ್ತದೆ ಎಂದು ಅಭಿಪ್ರಾಯ ಪಡಲಾಗಿದೆ. ದಿಶಾ, ಶಂಕರ್ ನಾಯಕ್ ಮತ್ತು ಉಮಾ ಬಾಯಿ ಅವರ ಪುತ್ರಿ. ವಿಶೇಷ ಮಕ್ಕಳಿಗೆ ಸಮಾನ ಅವಕಾಶಗಳನ್ನು ಉತ್ತೇಜಿಸುವಲ್ಲಿ ಈ ಒಂದು ಮೈಲಿಗಲ್ಲು ಪ್ರಮುಖ ಹೆಜ್ಜೆಯಾಗಿದೆ.

ಮಾತೃಮಂಡಲಿ ಪ್ರೌಢಶಾಲೆಗೆ ಶೇ.100 ಫಲಿತಾಂಶ



ಪ್ರಜ್ಞಾ ರಂಜಿನಿ ಕಾವ್ಯಶ್ರೀ ಅನುಪಮ ರಾಧ ಸಂಯಜ್ಞಾ

ಮೈಸೂರು,ಏ.25–2025–26ನೇ ಸಾಲಿನ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಯಲ್ಲಿ ಮೈಸೂರಿನ ವಿವಿ ಮೊಹಲ್ಲಾದ ಮಾತೃಮಂಡಳಿ ಪ್ರೌಢಶಾಲೆಗೆ ಶೇ.100 ಫಲಿತಾಂಶ ಬಂದಿದೆ. ಒಟ್ಟು 55 ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತಿದ್ದು 55 ವಿದ್ಯಾರ್ಥಿಗಳೂ ತೇರ್ಗಡೆ ಹೊಂದಿದ್ದಾರೆ. ಅತ್ಯುನ್ನತ ಶ್ರೇಣಿ–08, ಪ್ರಥಮ ದರ್ಜೆ–39, ದ್ವಿತೀಯ ದರ್ಜೆ–5, ತೃತೀಯ ದರ್ಜೆ–3. ರಂಜಿನಿ ಎಂ–598, ಸಂಯಜ್ಞ ಎಸ್ ಜಿ–589, ರಾಧ ಆರ್.–588, ಕಾವ್ಯಶ್ರೀ ಸಿ.ಎಸ್.–569, ಅನುಪಮ–568, ಅರ್ಚಕ್ ಪ್ರಜ್ಞ–567.

ಆದರ್ಶ ವಿದ್ಯಾಲಯದ ಮಾನಸಗೆ 602 ಅಂಕ



ಮೈಸೂರು, ಏ.25– ನಂಜನಗೂಡು ತಾಲೂಕಿನ ದೇಬೂರು ಗ್ರಾಮದ ಆದರ್ಶ ವಿದ್ಯಾಲಯದ ವಿದ್ಯಾರ್ಥಿನಿ ಎಂ.ಮಾನಸ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 602 ಅಂಕಗಳನ್ನು ಗಳಿಸುವ ಮೂಲಕ ಶಾಲೆಗೆ ಕೀರ್ತಿ ತಂದಿದ್ದಾಳೆ. ಇಂಗ್ಲಿಷ್‌ನಲ್ಲಿ 123, ಕನ್ನಡ 99, ಹಿಂದಿ 99, ಗಣಿತ 96, ವಿಜ್ಞಾನ 93 ಹಾಗೂ ಸಮಾಜ ವಿಜ್ಞಾನದಲ್ಲಿ 92 ಅಂಕ ಗಳಿಸಿದ್ದಾಳೆ. ಈಕೆ ನಂಜನಗೂಡು ತಾಲೂಕಿನ ಹಂಡುವಿನಹಳ್ಳಿ ಎನ್.ಮಲ್ಲೇಶ್ ಮತ್ತು ಪೂರ್ಣಿಮಾ ದಂಪತಿ ಪುತ್ರಿ.

ಎಂ.ಎನ್.ತನುಶ್ರೀಗೆ 590 ಅಂಕ



ಮೈಸೂರು, ಏ. 25– ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಕ್ರೈಸ್ಟ್ ದ ಕಿಂಗ್ ಕಾನ್ವೆಂಟ್ ಶಾಲೆಯ ವಿದ್ಯಾರ್ಥಿನಿ ಎಂ.ಎನ್. ತನುಶ್ರೀಗೆ 2025–26ನೇ ಸಾಲಿನ 10ನೇ ತರಗತಿ ವಾರ್ಷಿಕ ಪರೀಕ್ಷೆಯಲ್ಲಿ 625ಕ್ಕೆ 590 (ಶೇ. 94.4) ಅಂಕಗಳನ್ನು ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಈಕೆ ವಕೀಲರಾದ ನಾಗೇಶ. ಎಂ ಹಾಗೂ ಶ್ರೀಮತಿ ಭಾರತಿ ಬಿ. ಎಂ. ದಂಪತಿ ಪುತ್ರಿ.

ಯನಿಕಾ ಶೇ.90.67 ಅಂಕ



ಮೈಸೂರು: ಮೈಸೂರಿನ ಜೆ.ಎಸ್.ಎಸ್ ಬಾಲಜಗತ್ ಪ್ರೌಢಶಾಲೆ ವಿದ್ಯಾರ್ಥಿನಿ ಯನಿಕಾ 2025–26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.90.67 ಅಂಕ ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಈಕೆ ಶ್ರೀಮತಿ ಸುನಿತಾ ಮತ್ತು ಸುರೇಶ್ ದಂಪತಿ ಪುತ್ರಿ.

ಮಹಾವೀರ ವಿದ್ಯಾಮಂದಿರಕ್ಕೆ ಶೇ.100ರಷ್ಟು ಫಲಿತಾಂಶ



ಮೈಸೂರು, ಏ.25–ಮೈಸೂರಿನ ಶ್ರೀರಾಂಪುರದಲ್ಲಿರುವ ಮಹಾವೀರ ವಿದ್ಯಾಮಂದಿರ (ಜೈನ್ ಎಜುಕೇಶನ್ ಸೊಸೈಟಿ) ಶಾಲೆಯಲ್ಲಿ 2025–26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.100ರಷ್ಟು ಫಲಿತಾಂಶ ಬಂದಿದೆ. ವಿದ್ಯಾರ್ಥಿ ಬಿ.ದಿಗಂತ್ ಶೇ.91.04 ಪ್ರಥಮ ಸ್ಥಾನ, ಜಿನಾಲ್ ದೇವಿ ಶೇ.90.24 ದ್ವಿತೀಯ ಸ್ಥಾನ, ಪಿ.ಕುಶಾಲ್ ಶೇ.86.88 ತೃತೀಯ ಸ್ಥಾನ ಪಡೆದಿದ್ದು 10 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ, ಹಾಗೂ 10 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ವಿದ್ಯಾರ್ಥಿಗಳಿಗೆ ಶಾಲಾ ಆಡಳಿತ ಮಂಡಳಿ ಮತ್ತು ಶಿಕ್ಷಕ ವೃಂದ ಅಭಿನಂದನೆ ಸಲ್ಲಿಸಿದೆ.

ಉನ್ನತ ಶ್ರೇಣಿಯಲ್ಲಿ ತೇರ್ಗಡೆ



ಮೈಸೂರು: ಬನ್ನೂರು ರಸ್ತೆಯ ವಿದ್ಯಾ ಜ್ಯೋತಿ ಹೈಸ್ಕೂಲ್ ವಿದ್ಯಾರ್ಥಿನಿ ಟಿ.ಲಕ್ಷ್ಮೀ, ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.83.68 ಅಂಕಗಳೊಂದಿಗೆ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣಳಾಗಿದ್ದಾಳೆ. ಕನ್ನಡದಲ್ಲಿ 110, ಇಂಗ್ಲಿಷ್ 97, ಹಿಂದಿ 95, ಗಣಿತ 70, ವಿಜ್ಞಾನ 78 ಹಾಗೂ ಸಮಾಜ ವಿಜ್ಞಾನದಲ್ಲಿ 73 ಸೇರಿ ಒಟ್ಟು 523 ಅಂಕ ಗಳಿಸಿದ್ದಾಳೆ. ಈಕೆ ತುಳಸಿರಾಮ್ ಮತ್ತು ಸುಜಾತ ದಂಪತಿ ಪುತ್ರಿ.

ಯಶಸ್‌ಗೆ 546 ಅಂಕ



ಮೈಸೂರು: ಮೈಸೂರಿನ ಜಾಕಿ ಕ್ವಾಟರ್ಸ್‌ನಲ್ಲಿರುವ ಸರ್ಕಾರಿ ಆದರ್ಶ ವಿದ್ಯಾಲಯದ ವಿದ್ಯಾರ್ಥಿ ಯಶಸ್ ವಿ. ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 546 ಅಂಕ ಪಡೆದು ತೇರ್ಗಡೆ ಹೊಂದಿದ್ದಾನೆ. ಈತ ಜಿ.ವಿಶ್ವನಾಥ್ ಹಾಗೂ ಎಂ.ಚಂಪ ದಂಪತಿ ಪುತ್ರ.

ಕೆ.ಎಸ್.ಸ್ವಾಗತ್ ಅತ್ಯುತ್ತಮ ಶ್ರೇಣಿ



ಮೈಸೂರು, ಏ.25(ಎಸ್‌ಪಿಎನ್)–2025–26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಕೆ.ಎಸ್.ಸ್ವಾಗತ್ ಅವರು 625ಕ್ಕೆ 603 ಅಂಕಗಳಿಸಿ ಅತ್ಯುತ್ತಮ ಶ್ರೇಣಿಯಲ್ಲಿ ತೇರ್ಗಡೆಗೊಂಡಿದ್ದಾರೆ. ಈತ ಟಿ.ಕೆ.ಬಡಾವಣೆಯಲ್ಲಿನ ತರಳಬಾಳು ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದರು. ಈತ ಗಂಗೋತ್ರಿ ಬಡಾವಣೆಯ ಎಸ್.ಕಮಲಾಕ್ಷಿ ಎಸ್.ವಿಟ್ಟು ಮತ್ತು ಎಂ.ಎನ್.ಸತ್ಯಾನಂದ ವಿಟ್ಟು ದಂಪತಿ ಪುತ್ರ.

ಶ್ರೀವಿಷ್ಣುಗೆ 564 ಅಂಕ



ಮೈಸೂರು, ಏ.25– ನಗರದ ಸದ್ವಿದ್ಯಾ ಪ್ರೌಢಶಾಲೆಯ ವಿದ್ಯಾರ್ಥಿ ಬಿ.ಎಸ್.ಶ್ರೀವಿಷ್ಣು, ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 564(ಶೇ.90.24) ಅಂಕ ಗಳಿಸಿ, ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾನೆ. ಇವನು ದಿ ಮೈಸೂರು ಸಿಟಿ ಕೋ ಆಪರೇಟಿವ್ ಹೌಸಿಂಗ್ ಸೊಸೈಟಿ ಕಾರ್ಯದರ್ಶಿ ಬಿ.ಎಸ್.ಶ್ರೀನಾಥ್ ಹಾಗೂ ಶ್ರೀಮತಿ ಬಿ.ಸುಕನ್ಯ ದಂಪತಿ ಪುತ್ರ.

ರಿತೇಶ್ ಕುಮಾರ್‌ಗೆ 612 ಅಂಕ



ಮೈಸೂರು, ಏ.25–ಮೈಸೂರಿನ ಕುಂಬಾರಕೊಪ್ಪಲಿನ ವೈಶಾಲಿ ಪೌಢ ಶಾಲೆಯ ವಿದ್ಯಾರ್ಥಿ ರಿತೇಶ್‌ಕುಮಾರ್.ಕೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625/612 (ಶೇ.97.92) ಅಂಕಗಳಿಸಿ ಶಾಲೆಗೆ ಕೀರ್ತಿ ತಂದಿದ್ದಾನೆ. ಈತ ಕೃಷ್ಣೇಗೌಡ.ಸಿ.ಎನ್ ಹಾಗೂ ರೇಖಾ.ಎನ್ ದಂಪತಿಯ ಪುತ್ರ.

ಹೈಸ್ಪೀಡ್ ರೈಲು ತಯಾರಿಸುವ 'ಆದಿತ್ಯ' ಸಂಕೀರ್ಣ ಉದ್ಘಾಟಿಸಿದ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್

ಮುಂದಿನ ಮಾರ್ಚ್ ವೇಳೆಗೆ ಸ್ವದೇಶಿ ಬುಲೆಟ್ ರೈಲು 'ಬಿ28' ಕಾರ್ಯಾಚರಣೆ

ಬೆಂಗಳೂರು, ಏ.25– ಇಲ್ಲಿನ ಬಿಇಎಂಎಲ್ ತಿಪ್ಪಸಂದ್ರ ಕ್ಯಾಂಪಸ್‌ನಲ್ಲಿ ಹೈ ಸ್ಪೀಡ್ ರೈಲು ತಯಾರಿಕೆಗೆ ಮೀಸಲಾಗಿರುವ 'ಆದಿತ್ಯ' ವಿಶೇಷ ಸಂಕೀರ್ಣವನ್ನು ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಶನಿವಾರ ಉದ್ಘಾಟಿಸಿದರು.

ಈ ವೇಳೆ ಮಾತನಾಡಿದ ಅವರು, ಹೈ ಸ್ಪೀಡ್ ರೈಲು ತಂತ್ರಜ್ಞಾನವು ಅತ್ಯಂತ ಸಂಕೀರ್ಣ ಮತ್ತು ಉನ್ನತ ಮಟ್ಟದ ತಾಂತ್ರಿಕತೆಯನ್ನು ಒಳಗೊಂಡಿದ್ದು, ಇಲ್ಲಿನ ಸ್ವದೇಶಿ ಅಭಿವೃದ್ಧಿಯು ಭಾರತದ ಎಂಜಿನಿಯರಿಂಗ್ ಕ್ಷೇತ್ರದಲ್ಲಿ ಮಹತ್ವದ ಮೈಲಿಗಲ್ಲಾಗಿದೆ. ಆದಿತ್ಯ ಸಂಕೀರ್ಣವನ್ನು ಪ್ರಸ್ತುತ ಬಿ–28 ಕೋಚ್‌ಗಳ ಅಭಿವೃದ್ಧಿಗೆ ವಿನ್ಯಾಸಗೊಳಿಸಲಾಗಿದೆ ಎಂದು ತಿಳಿಸಿದರು.

ಹೈ ಸ್ಪೀಡ್ ರೈಲುಗಳ ಪರಿವರ್ತಕ ಶಕ್ತಿ ಕುರಿತು ಮಾತನಾಡಿ, ಇವು ಪ್ರಮುಖ ನಗರಗಳ ನಡುವಿನ ಪ್ರಯಾಣ ಸಮಯವನ್ನು ಗಣನೀಯವಾಗಿ ಕಡಿಮೆ ಮಾಡುವುದರ ಮೂಲಕ ಒಂದೇ ವಿಸ್ತೃತ ನಗರವನ್ನಾಗಿ ರೂಪಿಸಲು ನೆರವಾಗುತ್ತವೆ. ಉದಾಹರಣೆಗೆ ಚೆನ್ನೈ ಮತ್ತು ಬೆಂಗಳೂರು ನಡುವಿನ ಪ್ರಯಾಣದ ಅವಧಿ ಕೇವಲ 73 ನಿಮಿಷಗಳಿಗೆ ಇಳಿಯುವ ಸಾಧ್ಯತೆ ಇದ್ದು, ಇದರಿಂದ ಉಭಯ ನಗರಗಳ ಅಭಿವೃದ್ಧಿಗೆ ಮತ್ತಷ್ಟು ಉತ್ತೇಜನ ದೊರಕಲಿದೆ ಎಂದರು.



ಬೆಂಗಳೂರಿನ ಬಿಇಎಂಎಲ್ ತಿಪ್ಪಸಂದ್ರ ಕ್ಯಾಂಪಸ್‌ನಲ್ಲಿ ಹೈ ಸ್ಪೀಡ್ ರೈಲು ತಯಾರಿಕೆಗೆ ಮೀಸಲಾಗಿರುವ 'ಆದಿತ್ಯ' ವಿಶೇಷ ಸಂಕೀರ್ಣವನ್ನು ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಶನಿವಾರ ಉದ್ಘಾಟಿಸಿ, ಅಲ್ಲಿನ ವ್ಯವಸ್ಥೆಯನ್ನು ಪರಿಶೀಲಿಸಿದರು.

ಹೊಸ ರೈಲು ಸಂಪರ್ಕ: ಮುಂಬೈ–ಬೆಂಗಳೂರು ಸಂಪರ್ಕವನ್ನು ಇನ್ನಷ್ಟು ಬಲಪಡಿಸುವ ನಿಟ್ಟಿನಲ್ಲಿ ಹುಬ್ಬಳ್ಳಿ ಮಾರ್ಗವಾಗಿ ಎಲ್‌ಎಚ್‌ಬಿ ಕೋಚ್‌ಗಳನ್ನು ಒಳಗೊಂಡ ಹೊಸ ಮೇಲ್/ಎಕ್ಸ್‌ಪ್ರೆಸ್ ರೈಲಿನ ಜೊತೆಗೆ ವಂದೇ ಭಾರತ್ ಸ್ಲೀಪರ್ ಎಕ್ಸ್‌ಪ್ರೆಸ್ ಕಾರ್ಯಾಚರಣೆಯನ್ನು ಶೀಘ್ರದಲ್ಲೇ ಆರಂಭಿಸಲಾಗುವುದು. ಹಾಗೆಯೇ ಪ್ರಾದೇಶಿಕ ಸಂಪರ್ಕವನ್ನು ವಿಸ್ತರಿಸುವ ನಿಟ್ಟಿನಲ್ಲಿ ಮಂಗಳೂರು–ಬೆಂಗಳೂರು ನಡುವಿನ ವಂದೇ ಭಾರತ್ ಸೇವೆಯನ್ನು ಶೀಘ್ರದಲ್ಲೇ ಪ್ರಾರಂಭಿಸಲಾಗುವುದು. ಈ ಸೇವೆಯ ಅನುಷ್ಠಾನಕ್ಕೂ ಮುನ್ನ ಮಡಗಾಂವ್ ಹಾಗೂ ಕರ್ನಾಟಕದ ಇತರ ಕರಾವಳಿ ನಗರಗಳನ್ನು ಸಂಪರ್ಕಿಸುವ ಪ್ರಸ್ತಾವನೆಯನ್ನೂ ಪರಿಗಣಿಸಲಾಗುವುದು ಎಂದು ತಿಳಿಸಿದರು.

ಎಇಬಿ ವ್ಯವಸ್ಥೆ: ಹಾಸನ ಹಾಗೂ ಮಂಗಳೂರು ವಿಭಾಗದಲ್ಲಿ ವಿದ್ಯುದೀಕರಣ ಪೂರ್ಣಗೊಂಡಿದ್ದು, ಕಡಿದಾದ ಕರಾವಳಿ ಪ್ರದೇಶಗಳಲ್ಲಿ ರೈಲು ಸಂಚಾರ ಸುರಕ್ಷತೆ ಹೆಚ್ಚಿಸಲು ಸ್ವಯಂಚಾಲಿತ ತುರ್ತು ಬ್ರೇಕಿಂಗ್ (ಎಇಬಿ) ವ್ಯವಸ್ಥೆ ಅಳವಡಿಸಲಾಗಿದೆ. ಇದರಿಂದ ತಾಂತ್ರಿಕ ಅಡಚಣೆಗಳು ನಿವಾರಣೆ ಯಾಗಿವೆ ಎಂದು ಇದೇ ವೇಳೆ ತಿಳಿಸಿದರು.

ವರ್ಷಕ್ಕೆ 800 ರೈಲು ಕೋಚುಗಳ ಉತ್ಪಾದನೆ: ಸಿ.ವಿ.ರಾಮನ್‌ನಗರದಲ್ಲಿರುವ ಸುಮಾರು 80 ಎಕರೆ ವಿಸ್ತೀರ್ಣದ ಈ ಬೃಹತ್ ಸಂಕೀರ್ಣವು, ಈಗ 'ಆತ್ಮನಿರ್ಭರ ಭಾರತ' ಯೋಜನೆಯಡಿ ದೇಶದ ಮೊದಲ ಸ್ವದೇಶಿ ಬುಲೆಟ್ ರೈಲು 'ಬಿ28' ತಯಾರಿಗೆ ಸಜ್ಜಾಗಿದೆ. ಇಲ್ಲಿ ವರ್ಷಕ್ಕೆ 800ಕ್ಕೂ ಹೆಚ್ಚು ರೈಲು ಕೋಚ್‌ಗಳನ್ನು ತಯಾರಿಸುವ ಬೃಹತ್ ಸಾಮರ್ಥ್ಯವಿದ್ದು, ಹೈ–ಸ್ಪೀಡ್ ರೈಲುಗಳಿಗಾಗಿಯೇ ಪ್ರತ್ಯೇಕ ಹ್ಯಾಂಗರ್‌ಗಳು ಮತ್ತು ಟೆಸ್ಟ್ ಟ್ರ್ಯಾಕ್‌ಗಳನ್ನು ವಿಸ್ತರಿಸಲಾಗಿದೆ. ಈ ಘಟಕದಲ್ಲಿ ಮುಂದಿನ ದಿನಗಳಲ್ಲಿ ಗಂಟೆಗೆ 350 ಕಿ.ಮೀ ವೇಗದಲ್ಲಿ ಚಲಿಸುವ 'ಬಿ35' ನೆಕ್ಸ್ಟ್ ಜನರೇಷನ್ ರೈಲುಗಳನ್ನು ಸಹ ಉತ್ಪಾದಿಸಲಾಗುವುದು.

ವಿಮಾನ ಪ್ರಯಾಣದ ಅನುಭವ: ಬಿ28 ರೈಲು ಗಂಟೆಗೆ 250 ಕಿ.ಮೀ ವೇಗದಲ್ಲಿ ಕಾರ್ಯಾಚರಣೆ ನಡೆಸಲಿದ್ದು, ಇದು 8 ಕೋಚ್‌ಗಳ ಡಿಸ್ಟ್ರಿಬ್ಯೂಟೆಡ್ ಪವರ್ ಕಾನ್ಫಿಗರೇಶನ್ ಅನ್ನು ಹೊಂದಿದೆ. ಇದರಲ್ಲಿ ಐಷಾರಾಮಿ ಎಕ್ಸಿಕ್ಯೂಟಿವ್ ಕ್ಲಾಸ್, ತಿರುಗಬಲ್ಲ ಮತ್ತು ವಾಲುವ ಸೀಟುಗಳು ಹಾಗೂ ವಿಶೇಷಚೇತನರಿಗೆ ಅಗತ್ಯ ಸೌಲಭ್ಯಗಳನ್ನು ಅಳವಡಿಸಲಾಗಿದೆ. ವಿಶೇಷವೆಂದರೆ, ಇದರಲ್ಲಿರುವ ಸೀಟುಗಳು 360 ಡಿಗ್ರಿ ತಿರುಗಬಲ್ಲವು, ಇದು ಪ್ರಯಾಣಿಕರಿಗೆ ವಿಮಾನದಂತಹ ಅನುಭವ ನೀಡಲಿವೆ.

ಅತ್ಯಾಧುನಿಕ ತಂತ್ರಜ್ಞಾನ: ರೋಬೋಟಿಕ್ ಸ್ಪಾಟ್ ವೆಲ್ಡಿಂಗ್, ಲೇಸರ್ ಕಟಿಂಗ್ ಮತ್ತು ಸಿಎನ್‌ಸಿ ಯಂತ್ರಗಳ ಮೂಲಕ ನಿರ್ಮಿಸಲಾದ ಇದರ ಸ್ಟೀಲ್ ಬಾಡಿಯು ಕಠಿಣ ತಾಪಮಾನ ಹಾಗೂ ಭಾರತದ ಮಾನ್ಸೂನ್ ಮತ್ತು ಧೂಳಿನ ಪರಿಸರವನ್ನು ತಡೆದುಕೊಳ್ಳುವ ಸಾಮರ್ಥ್ಯ ಹೊಂದಿದೆ. ಮೇಧಾ ಸರ್ವೋ ಡ್ರೈವ್ಸ್ ಸಹಯೋಗದೊಂದಿಗೆ ಈ ರೈಲುಗಳಿಗೆ ಅಗತ್ಯವಿರುವ ಟ್ರ್ಯಾಕ್ಷನ್ ಮತ್ತು ಬೋಗಿಗಳನ್ನು ಸ್ಥಳೀಯವಾಗಿಯೇ ಸಿದ್ಧಪಡಿಸಲಾಗುತ್ತಿದೆ.

867 ಕೋಟಿ ಯೋಜನೆ

ಸುಮಾರು 867 ಕೋಟಿ ರೂ. ಬೃಹತ್ ವೆಚ್ಚದಲ್ಲಿ ಮೊದಲ ಎರಡು ರೈಲು ಸೆಟ್‌ಗಳನ್ನು ತಯಾರಿಸಲು ಒಪ್ಪಂದವಾಗಿದ್ದು, 2026ರ ಮಾರ್ಚ್ ವೇಳೆಗೆ 16 ಹೆಚ್ಚುವರಿ ರೈಲುಗಳಿಗಾಗಿ ಬಿಡ್ ಸಲ್ಲಿಕೆಯಾಗಿದೆ. ಮುಂಬೈ–ಅಹಮದಾಬಾದ್ ಹೈ–ಸ್ಪೀಡ್ ರೈಲು ಕಾರಿಡಾರ್‌ನಲ್ಲಿ ಜಪಾನ್‌ನ ದುಬಾರಿ ಶಿಂಕನ್‌ಸೆನ್ ರೈಲುಗಳ ಬದಲಿಗೆ ಭಾರತೀಯ ನಿರ್ಮಿತ ಬಿ28 ರೈಲುಗಳಿಗೆ ಆದ್ಯತೆ ನೀಡಲು ಉದ್ದೇಶಿಸಲಾಗಿದೆ. ಪ್ರಸಕ್ತ ವರ್ಷವಿಡೀ ರೈಲಿನ ರಚನಾತ್ಮಕ ಮತ್ತು ಸುರಕ್ಷತಾ ಪರೀಕ್ಷೆಗಳು ನಡೆಯಲಿದ್ದು, 2027ರ ಮಾರ್ಚ್ ವೇಳೆಗೆ ಮೊದಲ ಪ್ರೋಟೋಟೈಪ್ ಸಿದ್ಧವಾಗಲಿದೆ. ಆಗಸ್ಟ್ ವೇಳೆಗೆ ಸೂರತ್–ವಾಪಿ ನಡುವಿನ 97 ಕಿ.ಮೀ ದೂರದ ಮೊದಲ ಕಾರಿಡಾರ್‌ನಲ್ಲಿ ಈ ರೈಲುಗಳು ಅಧಿಕೃತವಾಗಿ ಕಾರ್ಯಾರಂಭಿಸಲಿವೆ. ಒಟ್ಟಾರೆ ಭಾರತದ ಹೈ–ಸ್ಪೀಡ್ ರೈಲು ಕ್ರಾಂತಿಯ ಕೇಂದ್ರಬಿಂದುವಾಗಿ ಬೆಂಗಳೂರು ಹೊರಹೊಮ್ಮಿದೆ.

ಬೇಸಿಗೆ ಧಗೆ : ಹೆಲ್ಮೆಟ್ ವಿನಾಯ್ತಿಗೆ ಮನವಿ



ಸಂದೇಶ್ ಸ್ವಾಮಿ

ಮೈಸೂರು, ಏ.25– ಮೈಸೂರಿನಲ್ಲಿ ಉಷ್ಣಾಂಶ ದಿನೇ ದಿನೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ದ್ವಿಚಕ್ರ ವಾಹನ ಸವಾರರಿಗೆ ಹೆಲ್ಮೆಟ್ ಧಾರಣೆ ಕಡ್ಡಾಯ ನಿಯಮಕ್ಕೆ ತಾತ್ಕಾಲಿಕ ವಿನಾಯ್ತಿ ನೀಡುವಂತೆ ಬಿಜೆಪಿ ಮುಖಂಡ ಹಾಗೂ ಮಾಜಿ ಮೇಯರ್ ಸಂದೇಶ್ ಸ್ವಾಮಿ, ಪೊಲೀಸರಿಗೆ ಮನವಿ ಮಾಡಿದ್ದಾರೆ.

ಈ ಸಂಬಂಧ ನಗರ ಪೊಲೀಸ್ ಆಯುಕ್ತರಿಗೆ ಪತ್ರ ಬರೆದಿರುವ ಅವರು, ಬಿರು ಬೇಸಿಗೆಯಲ್ಲಿ ಉಷ್ಣಾಂಶ ಹೆಚ್ಚಿರುವಾಗ ಹೆಲ್ಮೆಟ್ ಧರಿಸುವುದರಿಂದ ವಿಪರೀತ ಬೆವರು ಉಂಟಾಗಿ ಆರೋಗ್ಯದ ಮೇಲೆ ದುಷ್ಪರಿಣಾಮವಾಗುತ್ತಿದೆ. ಅದರಲ್ಲೂ ಮಹಿಳೆಯರು ಹೆಚ್ಚು ಸಮಸ್ಯೆ ಎದುರಿಸುತ್ತಿದ್ದಾರೆ. ದ್ವಿಚಕ್ರ ವಾಹನದಲ್ಲಿ ಹೆಲ್ಮೆಟ್ ರಹಿತ ಸವಾರಿ ನಿಯಮ ಬಾಹಿರ. ಆದರೆ, ಇಂತಹ ಕ್ಲಿಷ್ಟಕರ ಪರಿಸ್ಥಿತಿಯಲ್ಲಿ ಸಾರ್ವಜನಿಕ ಕಾಳಜಿಯಿಂದ ನನ್ನ ಮನವಿಯನ್ನು ಪರಿಗಣಿಸಬೇಕು ಎಂದು ಒತ್ತಾಯಿಸಿದ್ದಾರೆ. ಹಾಗೆಯೇ ನಗರದಲ್ಲಿ ಅನೇಕ ಕಡೆ ಅನಗತ್ಯವಾಗಿ ಟ್ರಾಫಿಕ್ ಸಿಗ್ನಲ್ ಅಳವಡಿಸಿರುವ ಬಗ್ಗೆ ಸಾರ್ವಜನಿಕರು ಆಕ್ಷೇಪ ವ್ಯಕ್ತಪಡಿಸಿದ್ದು, ಈ ಬಗ್ಗೆ ಸೂಕ್ತ ಕ್ರಮ ವಹಿಸಬೇಕು. ಯುದ್ಧದ ಪರಿಣಾಮ ತೈಲ ಬಿಕ್ಕಟ್ಟು ಸೃಷ್ಟಿಯಾಗಿರುವ ಪ್ರಸ್ತುತ ಸಂದರ್ಭದಲ್ಲಿ ಸಿಗ್ನಲ್‌ಗಳಲ್ಲಿ ಇಂಧನ ವ್ಯರ್ಥವಾಗುವುದನ್ನು ತಪ್ಪಿಸಬೇಕಿದೆ ಎಂದು ಸಂದೇಶ್ ಸ್ವಾಮಿ ತಿಳಿಸಿದ್ದಾರೆ.

ಏ.29ರಂದು ಸಂಸ್ಕೃತ ಪಾಠ ಶಾಲೆಯಲ್ಲಿ ಯೋಗನಮನ

ಮೈಸೂರು,ಏ.25–ಮೈಸೂರಿನ ಯೋಗೀಸ್ ಟ್ರಸ್ಟ್, ಸರ್ಕಾರಿ ಮಹಾರಾಜ ಸಂಸ್ಕೃತ ಕಾಲೇಜಿನ ಸಹಯೋಗದಲ್ಲಿ 'ಯೋಗ ನಮನ' ಸಾಂಸ್ಕೃತಿಕ ಕಾರ್ಯಕ್ರಮವನ್ನು ಏ.29ರಂದು ಸಯ್ಯಾಜಿರಾವ್ ರಸ್ತೆಯಲ್ಲಿರುವ ಸಂಸ್ಕೃತ ಪಾಠಶಾಲೆಯಲ್ಲಿ ಸಂಜೆ 6 ಗಂಟೆಗೆ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದಲ್ಲಿ ಶ್ರೀ ಕೃಷ್ಣನ ಸಂದೇಶ ಮತ್ತು ಧ್ಯಾನದ ಕುರಿತು ಗುರುಕೃಪಾ ಯೋಗ ಮತ್ತು ಆಯುರ್ವೇದ ಚಿಕಿತ್ಸಾಲಯದ ಮುಖ್ಯಸ್ಥರಾದ ಡಾ.ಗಣೇಶ್‌ರಾವ್ ಮತ್ತು ಯೋಗ ರತ್ನ ಮುಕುಂದನ್ ಗುರೂಜಿ ಸಾರ್ವಜನಿಕರಿಗೆ ಪ್ರವಚನ ನೀಡಲಿದ್ದಾರೆ ಎಂದು ಯೋಗೀಸ್ ಟ್ರಸ್ಟ್‌ನ ಸಂಸ್ಥಾಪಕ ಯೋಗ ಪ್ರಕಾಶ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡಾ.ರಾಜ್‌ಕುಮಾರ್‌ರವರ 97ನೇ ಹುಟ್ಟುಹಬ್ಬ...



ಮೈಸೂರು ನಗರ–ಜಿಲ್ಲಾ ಕನ್ನಡಪರ ಸಂಘಟನೆಯ ನಾಗರಿಕ ಹಿತರಕ್ಷಣಾ ವೇದಿಕೆ ವತಿಯಿಂದ ಡಾ.ರಾಜ್‌ಕುಮಾರ್‌ರವರ 97ನೇ ಹುಟ್ಟುಹಬ್ಬದ ಅಂಗವಾಗಿ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ಸಿಹಿ ವಿತರಿಸಲಾಯಿತು. ಈ ವೇಳೆ ವೇದಿಕೆ ಅಧ್ಯಕ್ಷ ಮಿಲ್ಕ್ ಮಂಜು, ಗೌರವಾಧ್ಯಕ್ಷ ಡಾ.ಶ್ರೀಕಾಂತ್ ಸುಂದರ್, ಡಾ.ರಾಜ್ ಸಂಘದ ಅಧ್ಯಕ್ಷ ರಾಮೇಗೌಡ, ಪ್ರಧಾನ ಕಾರ್ಯದರ್ಶಿ ಬಾಲಕೃಷ್ಣೇಗೌಡ, ಕಾರ್ಯದರ್ಶಿ ಮಂಜುನಾಥ್, ಯುವ ಮುಖಂಡ ಸಂತೋಷ್‌ಗೌಡ, ಉಪಾಧ್ಯಕ್ಷ ಮೆಸ್‌ಬಾಬು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

26.4.2026 ಭಾನುವಾರ, ಮಳೆ ನಕ್ಷತ್ರ: ಅಶ್ವಿನಿ 14.04.2026 ರಿಂದ 26.04.2026
ಪರಾಭವ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ,
ತಿಥಿ: ದಶಮಿ, ನಕ್ಷತ್ರ: ಮಖ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ** : ಬೆಳಗ್ಗೆ 6.30 ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9 ರಿಂದ ಕೊಲೆಸ್ಟ್ರಾಲ್, ಬೊಜ್ಜು ನಿವಾರಣೆ, ಕುತ್ತಿಗೆ ನೋವು ಮತ್ತು ಭುಜದ ನೋವು, ಆರೋಗ್ಯ ತಪಾಸಣಾ ಶಿಬಿರ, ಕಾರ್ನಿಯಲ್ ಒಪೇಸಿಟಿ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.

■ **ಕರ್ನಾಟಕ ಸಾಂಸ್ಕೃತಿಕ ಹಾಗೂ ಸಾಹಿತ್ಯ ಪರಿಷತ್ತು** : ಉಚಿತ ಸಾಮೂಹಿಕ ವಿವಾಹ, ಸಾನ್ನಿಧ್ಯ : ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ಉದ್ಘಾಟನೆ : ಹಿರಿಯ ಸಮಾಜ ಸೇವಕ ಡಾ.ರಘುರಾಂ ವಾಜಪೇಯಿ, ವಿಶೇಷ ಆಹ್ವಾನಿತರು : ಶಾಸಕರಾದ ಕೆ. ಹರೀಶ್‌ಗೌಡ, ತನ್ವೀರ್ ಸೇಠ್, ಟಿ.ಎಸ್. ಶ್ರೀವತ್ಸ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಸ್ಥಳ: ಗೀತಾ ಮಂದಿರ, ಅಶೋಕ ರಸ್ತೆ, ಬೆಳಗ್ಗೆ 9 ರಿಂದ.

■ **ಶ್ರೀ ಕೃಷ್ಣ ಸೇವಾ ಸಮಿತಿ ಚಾರಿಟಬಲ್ ಟ್ರಸ್ಟ್** : ಬ್ರಹ್ಮ ರಥೋತ್ಸವ, ಗರುಡೋತ್ಸವ, ಸುದರ್ಶನ ಹೋಮ, ರಥೋತ್ಸವ, ಪೂಜಾ ಮಹೋತ್ಸವಗಳು, ಬೆಳಗ್ಗೆ 6ಕ್ಕೆ ರಥಾಂಗ ಹೋಮ, ರಥಸ್ನಪನ, ಯಾತ್ರಾದಾನ, ಮಂಟಪೋತ್ಸವ ಆಳ್ವಾರ್ ಕಲಾ ಭವನದಲ್ಲಿ, ಬೆಳಗ್ಗೆ 7.15ಕ್ಕೆ ದಿವ್ಯರಥಾರೋಹಣ, 8.15ಕ್ಕೆ ರಥೋತ್ಸವ, ಸಂಜೆ 6ಕ್ಕೆ ಚತುಸ್ಥಾನಾರ್ಚನೆ, ನಿತ್ಯಹೋಮ, ಶಾಂತ್ಯೋತ್ಸವ, ಸ್ಥಳ: ಶ್ರೀ ಕೃಷ್ಣ ಸೇವಾ ಸಮಿತಿ ಚಾರಿಟಬಲ್ ಟ್ರಸ್ಟ್, ಗೋಕುಲಂ 3ನೇ ಹಂತ.

■ **ರಾಮ್‌ಸನ್ಸ್ ಕ್ರೀಡಾ ಕೌಶಲ್ಯ** : ಪಾರಂಪರಿಕ ಹಾಸು ಆಟಗಳ 11ನೇ ದ್ವೈವಾರ್ಷಿಕ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್, ಬೆಳಗ್ಗೆ 10 ರಿಂದ.

■ **ನೈಪುಣ್ಯ ಪದವಿಪೂರ್ವ ಕಾಲೇಜು** : ಶಿಕ್ಷಣದಲ್ಲಿ ಕೃತಕ ಬುದ್ಧಿಮತ್ತೆ ಮತ್ತು ಕರಿಯರ್ ಆಯ್ಕೆ, ಉಪಸ್ಥಿತರು: ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಮುಖ್ಯಸ್ಥ ರಘು ಆರ್., ಸ್ಥಳ: ಸದರನ್ ಸ್ಟಾರ್ ಹೋಟೆಲ್, ಬೆಳಗ್ಗೆ 10ಕ್ಕೆ.

■ **ಮೈಸೂರು ವೀರಶೈವ ಸಜ್ಜನ ಸಂಘ** : ಬಸವ ಜಯಂತಿ, ಮುಖ್ಯ ಅತಿಥಿಗಳು: ಪ್ರೊ.ಸಿದ್ದಣ್ಣ ಲಂಗೋಟಿ, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಎಂ.ಟಿ.ಮಲ್ಲಿಕಾರ್ಜುನ್, ಉಪಸ್ಥಿತರು : ಉಪಾಧ್ಯಕ್ಷ ಪಿ.ಎನ್.ದಿನೇಶ್ ಕುಮಾರ್, ಸಹ ಕಾರ್ಯದರ್ಶಿ ಮನೋಹರ್, ಗೌರವ ಕಾರ್ಯದರ್ಶಿ ಪ್ರದೀಪ್‌ಕುಮಾರ್, ಖಜಾಂಚಿ ಪಿ.ಎಂ. ಸುನಿಲ್, ಸ್ಥಳ: ಶ್ರೀ ಕಂಠಿ ಮಲ್ಲಣ್ಣನವರ ಕಲ್ಯಾಣ ಮಂದಿರ, ಕಬೀರ್ ರಸ್ತೆ, ಬೆಳಗ್ಗೆ 10 ರಿಂದ.

■ **ಮೈಸೂರು ಚೆಸ್ ಸೆಂಟರ್** : ಮೈಸೂರಿನಲ್ಲಿ ಕರ್ನಾಟಕ ರಾಜ್ಯ ಅಂಡರ್–13 ಚೆಸ್ ಚಾಂಪಿಯನ್‌ಶಿಪ್, ಸ್ಥಳ: ದಾಸಪ್ರಕಾಶ್ ಪ್ಯಾರಡೈಸ್, ಯಾದವಗಿರಿ, ಬೆಳಗ್ಗೆ 10 ರಿಂದ.

■ **ಶ್ರೀ ವೆಂಕಟೇಶ್ವರ ಧ್ಯಾನ ಕೇಂದ್ರ** : ಅಷ್ಟಮ ವರ್ಷದ ವಾರ್ಷಿಕೋತ್ಸವ, ಶ್ರೀ ಉತ್ತರಾಧಿ ಮಠಾಧೀಶರಾದ ಶ್ರೀ ಶ್ರೀ 1008 ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರ ಸಾನ್ನಿಧ್ಯದಲ್ಲಿ ವಿಶೇಷ ಕಾರ್ಯಕ್ರಮಗಳು, ಬೆಳಗ್ಗೆ 108 ಕುಂಡಗಳಲ್ಲಿ ಹೋಮ, ಸಂಜೆ ಕಲ್ಯಾಣೋತ್ಸವ, ಸ್ಥಳ: ಶ್ರೀ ವೆಂಕಟೇಶ್ವರ ಧ್ಯಾನ ಕೇಂದ್ರ, ಶ್ರೀ ಉತ್ತರಾದಿ ಮಠ, ಶ್ರೀರಾಂಪುರ, ಬೆಳಗ್ಗೆ 10ಕ್ಕೆ.

■ **ಅನ್ವೇಷಣಾ ಸೇವಾ ಟ್ರಸ್ಟ್** : ಬದುಕು ಒಮ್ಮೆ ಮಾತ್ರ ಕೃತಿ ಲೋಕಾರ್ಪಣೆ ಸಮಾರಂಭ, ಉದ್ಘಾಟನೆ: ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಕೃತಿ ಲೋಕಾರ್ಪಣೆ: ಡಾ.ಕೆ.ಎಸ್.ಸದಾನಂದ, ಪ್ರಥಮ ಕೃತಿ ಸ್ವೀಕರಿಸುವವರು: ಡಾ.ಎನ್.ಪ್ರಭುದೇವ, ಅಧ್ಯಕ್ಷತೆ: ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಡಾ.ಪ್ರಧಾನ್ ಗುರುದತ್ತ, ಕೃತಿ ಕುರಿತು ಮಾತನಾಡುವವರು: ಡಾ.ಎಂ.ಜಿ.ಆರ್. ಅರಸ್, ಉಪಸ್ಥಿತರು : ಟ್ರಸ್ಟ್ ಸಂಸ್ಥಾಪ ಅಧ್ಯಕ್ಷ ಆರ್ಯ ಅಮರನಾಥ ರಾಜೇ ಅರಸ್, ಶ್ರೀನಿವಾಸ ಬಹದ್ದೂರ್, ಶ್ರೀಮತಿ ಭ್ರಮರ ಬಹದ್ದೂರ್, ಸ್ಥಳ: ದಿ ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಬೆಳಗ್ಗೆ 10.45ಕ್ಕೆ.

■ **ಶ್ರೀ ರೇಣುಕಾದೇವಿ ಕರಗ ದೇವಸ್ಥಾನದ ಟ್ರಸ್ಟ್** : ಶ್ರೀ ಚಾಮುಂಡೇಶ್ವರಿ ಮತ್ತು ಶ್ರೀ ಮಾರಿಯಮ್ಮನವರ 102ನೇ ವರ್ಷದ ಮೈಸೂರು ಕರಗ ಮಹೋತ್ಸವ, ಮಧ್ಯಾಹ್ನ 12 ಗಂಟೆಗೆ ಅಂಬಲಿ ಪೂಜೆ, ಸಂಜೆ 4 ಗಂಟೆಗೆ ಭಕ್ತಾದಿಗಳಿಂದ ತಂಬಿಟ್ಟು ಆರತಿ, ರಾತ್ರಿ 7 ಗಂಟೆಗೆ ಇಟ್ಟಿಗೆಗೂಡಿನ ಎಲ್ಲಾ ಬೀದಿಗಳಲ್ಲಿ ಆರತಿ ಪೂಜೆ ಸ್ವೀಕರಿಸಿ, ದೇವಸ್ಥಾನ ತಲುಪುವುದು, ರಾತ್ರಿ 12 ಗಂಟೆಗೆ ಮಹಾನೈವೇದ್ಯ, ಮಹಾಮಂಗಳಾರತಿ, ಸ್ಥಳ: ದೇವಸ್ಥಾನ, ಇಟ್ಟಿಗೆಗೂಡು.

■ **ವಿವಿಧ ಆರ್ಟ್ ಗ್ರೂಪ್**: ಚಿತ್ರಕಲಾ ಪ್ರದರ್ಶನ, ಸ್ಥಳ: ಸುಚಿತ್ರ ಆರ್ಟ್ ಗ್ಯಾಲರಿ, ಕಲಾಮಂದಿರ, ಸಂಜೆ 4.30ಕ್ಕೆ.

■ **ಜೆಎಸ್‌ಎಸ್ ಕಾನೂನು ಕಾಲೇಜು:** ಸುರಾನ ಅಂಡ್ ಸುರಾನ ಮೂಟ್ ಕೋರ್ಟ್ ಸ್ಪರ್ಧೆ ಸಮಾರೋಪ ಸಮಾರಂಭ, ಸಮಾರೋಪ ಭಾಷಣ: ಹೈಕೋರ್ಟ್ ನ್ಯಾಯಾಧೀಶ ಕೆ.ವಿ.ಅರವಿಂದ್, ಗೌರವ ಅತಿಥಿಗಳು : ಹಿರಿಯ ವಕೀಲ ಟಿ.ಸೂರ್ಯನಾರಾಯಣ, ಉಪಸ್ಥಿತರು: ಚೀಫ್ ಎಕ್ಸಿಕ್ಯೂಟಿವ್ ಪ್ರೊ. ಕೆ.ಎಸ್. ಸುರೇಶ್, ಪ್ರೀತಮ್ ಸುರಾನ, ಪ್ರಿನ್ಸಿಪಾಲ್ ಡಾ.ಎನ್.ವಾಣಿಶ್ರೀ, ಸ್ಥಳ: ಸಿಲ್ವರ್ ಜ್ಯೂಬಿಲಿ ಹಾಲ್, ಸಂಜೆ 5ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ** : ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀರಾಮಕೃಷ್ಣ ವಚನವೇದ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜಿ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ವಿಜಯನಗರ 3ನೇ ಹಂತದ ಸಾಂಸ್ಕೃತಿಕ ವೇದಿಕೆ** : ಅಂಬೇಡ್ಕರ್ ಜಯಂತಿ, ಉದ್ಘಾಟನೆ : ಶಾಸಕ ಜಿ.ಟಿ.ದೇವೇಗೌಡ, ಮುಖ್ಯ ಅತಿಥಿಗಳು: ಸಾಹಿತಿ ಪ್ರೊ.ಕೆ.ತಿಮ್ಮಯ್ಯ, ಪ್ರೊ.ಎಸ್.ವೆಂಕಟೇಶ್, ಅಧ್ಯಕ್ಷತೆ : ಎಸ್.ಮಂಜುನಾಥ, ಸ್ಥಳ: ವಿಜಯನಗರ 3ನೇ ಹಂತದ ಬ್ಲಾಕಿನ ಪಾರ್ಕ್ ಸಂಖ್ಯೆ 8, ಸಂಜೆ 6ಕ್ಕೆ.

■ **ರಂಗಾಯಣ** : ರಂಗಾಯಣದ ಹಿರಿಯ ಕಲಾವಿದರಿಂದ 'ಒಮ್ಮೆ ಹೆಣ್ಣಾಗು' ನಾಟಕ ಪ್ರದರ್ಶನ, ನಿರ್ದೇಶನ : ಸವಿತಾ ರಾಣಿ, ಸ್ಥಳ: ಭೂಮಿಗೀತ ರಂಗಮಂದಿರ, ಸಂಜೆ 6.30ಕ್ಕೆ.

■ **ನಿರಂತರ ಫೌಂಡೇಷನ್:** ನಿರಂತರ ಫೌಂಡೇಷನ್ ಕಲಾವಿದರಿಂದ ಪಾರ್ಟಿ ನಾಟಕ ಪ್ರದರ್ಶನ, ನಿರ್ದೇಶನ : ರಂಗಾಯಣ ಮಾಜಿ ನಿರ್ದೇಶಕ ಚಿದಂಬರರಾವ್ ಜಂಬೆ, ಸ್ಥಳ: ಕಿರುರಂಗಮಂದಿರ, ಸಂಜೆ 7ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಗೀತಾರಾಧನ, 6.30 ಚಿಂತನ– ಪ್ರೊ.ಸಂತೋಷ್ ಕುಮಾರ್ ನಾಯಕ್, 6.35 ಮತ್ತು ಸಂಜೆ 6.10 ಸಿನೆಮಾ ಯಾನ ಜನ ಮೆಚ್ಚಿದ ಕನ್ನಡ ಚಿತ್ರಗಳ ನೆನಪಿನ ಮಾಲೆ, ಪ್ರಸ್ತುತಿ : ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ : ಎಂ.ಡಿ.ಸುಮತಿ ಮುರಾರಿ, ವ್ಯಾಖ್ಯಾನ ಡಾ.ಬಿ.ವಿ.ವಸಂತಕುಮಾರ್, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ ಕೃಪಾಕರ ಸೇನಾನಿ ಅವರ ಕೆನ್ನಾಯಿಯ ಜಾಡಿನಲಿ ಕೃತಿಯ ಬಾನುಲಿ ಓದು. ಪ್ರಸ್ತುತಿ: ಜಿ ಶಾಂತಕುಮಾರ್, 8.30 ಮತ್ತು ಸಂಜೆ 5.30 ಚುಟಿ ಚುಟಿ ಚುಟುಕ್ ಗುಳುಂ ಗುಟುಕ್ ಶಿಶುಗೀತೆಗಳ ಕಾರ್ಯಕ್ರಮ, 9.40 ನಮ್ಮ ಆರೋಗ್ಯ–ರುಮ್ಯಟಾಲಜಿ ಜಾಗೃತಿ ಮಾಸಾಚರಣೆ ಸಂದರ್ಭದಲ್ಲಿ ಸ್ವಯಂ ನಿರೋಧಕ ಕಾಯಿಲೆಗಳು, ಕಾರಣಗಳು ಮತ್ತು ಚಿಕಿತ್ಸೆ ಕುರಿತು ಮೈಸೂರಿನ ರುಮ್ಯಟಾಲಜಿಸ್ಟ್ ಡಾ.ಸಂಗೀತಾ.ಕೆ.ಎನ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ತೇಜಸ್ವಿನಿ ಗಿರೀಶ್, 10.00 ಕೇಳಿಗಿಳಿಗಳೇ–ಮೈಸೂರಿನ ಶ್ರೀನಗರದ ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರದ ಪುಟ್ಟ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 10.30 ಮಕ್ಕಳ ಮಂಟಪ–ಮೈಸೂರಿನ ಶ್ರೀಕಾಂತ ಬಾಲಿಕಾ ಪ್ರೌಢಶಾಲೆಯ ಮಕ್ಕಳಿಂದ ಭಾಸಕವಿ ವಿರಚಿತ ಮಧ್ಯಮ ವ್ಯಾಯೋಗ ಏಕಾಂಕ ನಾಟಕ, 11.00 MANN KI BAAT–ಭಾರತದ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ರಾಷ್ಟ್ರದ ಜನತೆಯೊಡನೆ ಹಂಚಿಕೊಳ್ಳುವ ಮನದ ಮಾತು. **ಮಧ್ಯಾಹ್ನ:** 12.05 ವನಿತಾ ವಿಹಾರ–ಬಿತ್ತನೆ ಯಿಂದ ಬೆಳವಣಿಗೆಯವರೆಗೆ–ಒಂದು ಕೃಷಿಯ ಪಯಣ–ರೈತರ ಬದುಕು ಕಟ್ಟುತ್ತಿರುವ ಶಿಲ್ಪಾ ಕುಮಾರ್ ಅವರೊಂದಿಗೆ ಆಶಾ, 12.35 ಭಕ್ತಿಗೀತೆಗಳು: ಲಕ್ಷ್ಮಿ ಹೂಗಾರ್, 12.45 ಜನಪದ ಸಂಗೀತ–ಜಾನಕಮ್ಮ ಮತ್ತು ಸಂಗಡಿಗರಿಂದ ಸೋಬಾನೆ ಪದ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ–ಪ್ರಧಾನಮಂತ್ರಿ ವಿಶ್ವ ಕರ್ಮ ಯೋಜನೆ ಕುರಿತು ಮಾಹಿತಿ, 1.20 ಭಾವಗೀತೆಗಳು–ಕೆ.ಪಿ.ರೇವತಿ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ನಕ್ಷತ್ರಲೋಕ–ನಟ ಸುನಿಲ್‌ರಾವ್ ಸಂದರ್ಶನ, ಪ್ರಸ್ತುತಿ–ಶ್ರೀಮಾನ್.ಎಸ್, 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.45 ಕರ್ನಾಟಕ ಶಾಸ್ತ್ರೀಯ ಸಂಗೀತ–ಟಿ.ಎನ್.ಶೇಷಗೋಪಾಲನ್–ಹಾಡುಗಾರಿಕೆ, 4.45 ಚಿತ್ರಗೀತೆಗಳು, 6.50 ಕೃಷಿರಂಗ: ಹಟ್ಟಿಹರಟೆ–ವಾರದ ಗ್ರಾಮೀಣ ಚರ್ಚೆ, ಪ್ರಸ್ತುತಿ: ಎನ್.ಕೇಶವಮೂರ್ತಿ, ಆರ್.ಲೋಕೇಶ್ವರಿ, ಡಾ.ಮೈಸೂರು ಉಮೇಶ್, ಕೃಷಿ ಲೋಕ, ಕೃಷಿ ದರ್ಪಣ, ವಾರದ ಕೃಷಿರಂಗ, ಕಿಸಾನ್‌ವಾಣಿ ಕಾರ್ಯಕ್ರಮಗಳ ಮುನ್ನೋಟ, ಪ್ರಸ್ತುತಿ: ಆರ್.ಲೋಕೇಶ್ವರಿ, 7.45 ವಿಶ್ವ ಬೌದ್ಧಿಕ ಆಸ್ತಿ ದಿನದ ಅಂಗವಾಗಿ ಬೌದ್ಧಿಕ ಆಸ್ತಿ ಹಕ್ಕುಗಳು ಈ ಕುರಿತು ಮಾತನಾಡಿದ್ದಾರೆ ಡಾ. ಶ್ರೀಪತಿ ಕಲ್ಲೂರಾಯ, 8.00 ಭಾರತದ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ರಾಷ್ಟ್ರದ ಜನತೆಯೊಡನೆ ಹಂಚಿಕೊಳ್ಳುವ ಮನದ ಮಾತಿನ ಕನ್ನಡ ಅನುವಾದದ ಮರು ಪ್ರಸಾರ, 8.30 ಹಿಂದಿ ಚಿತ್ರಗೀತೆಗಳು, 9.15 ರಂಗಗೀತೆಗಳು–ಜಿ.ಆರ್.ರಾಮಚಂದ್ರ, 9.30 ರಾಷ್ಟ್ರೀಯ ವಿಜ್ಞಾನ ಸಂಚಿಕೆ, 10.00 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ–ದೀಪಿಕಾ ಭಿಡೆ–ಖ್ಯಾಲ್ ಗಾಯನ

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 26 ಭಾನುವಾರ 2026

ಮೈಸೂರು ಮಿತ್ರ 47 ಅತ್ಯುತ್ತಮ ಪತ್ರಿಕೋದ್ಯಮ

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 47 | ಸಂಚಿಕೆ: 11 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಅಧಿಕಾರ ಹಂಚಿಕೆ ಮೇ 10ರೊಳಗೆ ನಿರ್ಧರಿಸಿ

ಹೈಕಮಾಂಡ್‌ಗೆ ಡಿಸಿಎಂ ಡಿಕೆಶಿ ಗಡುವು


ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

"ಪಕ್ಷ ಅಧಿಕಾರ ವಹಿಸಿಕೊಳ್ಳುವ ಸಂದರ್ಭದಲ್ಲಿ ಸಿದ್ದರಾಮಯ್ಯ ಮತ್ತು ನನಗೆ ತಲಾ ಎರಡೂವರೆ ವರ್ಷ ಮುಖ್ಯಮಂತ್ರಿ ಹುದ್ದೆ ನೀಡುವ ವಾಗ್ದಾನ ಮಾಡಿದ್ದೀರಿ. ಬರುವ ಮೇ 20ಕ್ಕೆ ಸಿದ್ದರಾಮಯ್ಯ ಆಡಳಿತಕ್ಕೆ ಮೂರು ವರ್ಷ ಪೂರ್ಣಗೊಳ್ಳಲಿದೆ. ಆದರೆ, ಇನ್ನೂ ನನ್ನ ಪಕ್ಷ ನಿಷ್ಠೆಯನ್ನು ಪರೀಕ್ಷೆ ಮಾಡುತ್ತಲೇ ಇದ್ದೀರಿ. ಇನ್ನೂ ಮಾಡುವುದಾದರೆ ಮಾಡಿ, ನಮ್ಮಿಂದ ಪಕ್ಷ ವಿರೋಧಿ ಕೆಲಸ ಮಾಡಲ್ಲ. ಆದರೆ, ಮೇ 10ರೊಳಗೆ ಎಐಸಿಸಿ ತನ್ನ ನಿಲುವು ಪ್ರಕಟಿಸಬೇಕು. ಒಂದು ವೇಳೆ ಈ ದಿನದೊಳಗೆ ತೀರ್ಮಾನ ಬರದಿದ್ದರೆ, ಶಾಸಕರಲ್ಲಿ ಅಸಮಾಧಾನ ಸ್ಫೋಟಗೊಂಡು ಗೊಂದಲ ಉಂಟಾದರೆ ಅದಕ್ಕೆ ನಾನು ಹೊಣೆಯಲ್ಲ. –ಡಿ.ಕೆ.ಶಿವಕುಮಾರ್

ಬೆಂಗಳೂರು, ಏ.25(ಕೆಎಂಶಿ)– ಅಧಿಕಾರ ಹಂಚಿಕೆ ಕುರಿತು ಮೇ 10ರೊಳಗೆ ಅಂತಿಮ ತೀರ್ಮಾನ ಕೈಗೊಳ್ಳುವಂತೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕಾಂಗ್ರೆಸ್ ವರಿಷ್ಠರಿಗೆ ಗಡುವು ನೀಡಿದ್ದಾರೆ.

ರಾಜ್ಯ ಕಾಂಗ್ರೆಸ್‌ನಲ್ಲಿನ ನಾಯಕತ್ವ ಗೊಂದಲ ಪರಿಹರಿಸುವಂತೆ ವರಿಷ್ಠರಿಗೆ ಮನವಿ ಮಾಡುವ ಉದ್ದೇಶದಿಂದ ಕಳೆದ 3 ದಿನಗಳಿಂದ ಶಿವಕುಮಾರ್ ದೆಹಲಿಯಲ್ಲಿ ಬಿಡಾರ ಹೂಡಿದ್ದಾರೆ. ಶುಕ್ರವಾರ ರಾತ್ರಿ ತಮ್ಮ ಸಹೋದರ, ಮಾಜಿ ಸಂಸದ ಡಿ.ಕೆ.ಸುರೇಶ್ ಜೊತೆಗೂಡಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಭೇಟಿ ಮಾಡಿ ಸುದೀರ್ಘ ಚರ್ಚೆ ಮಾಡಿದ್ದಾರೆ. ನಾನಂತೂ ಪಕ್ಷದ ವಿರುದ್ಧ ಹೋಗುವುದಿಲ್ಲ. ಆದರೆ, ನಮ್ಮ ಶಾಸಕರ ನಡೆ ಬಗ್ಗೆ ನಾನು ಯಾವುದೇ ಭರವಸೆ ನೀಡುವುದಿಲ್ಲ. ನವೆಂಬರ್, 2025ರ ನಂತರ ನನಗೆ ಅಧಿಕಾರ ಹಸ್ತಾಂತರ ಆಗುವ ನಿರೀಕ್ಷೆಯಲ್ಲಿದ್ದೆ. ಆಗಲೇ ಕೆಲವು ಶಾಸಕರು ▶ 10ನೇ ಪುಟಕ್ಕೆ

"ನಾಯಕತ್ವ ಬದಲಾವಣೆ ಅನಿವಾರ್ಯವಾದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಬಣ 'ಅಹಿಂದ' ಅಸ್ತ್ರ ಬಳಸಲು ಸಜ್ಜಾಗಿದೆ. ಮುಂದಿನ ವಿಧಾನಸಭಾ ಚುನಾವಣೆ ದೃಷ್ಟಿಯಲ್ಲಿಟ್ಟುಕೊಂಡು ಅಹಿಂದ ಸಮುದಾಯಗಳ ಒಗ್ಗೂಡಿಸಲು ಡಾ. ಪರಮೇಶ್ವರ್ ಅವರನ್ನು ಮುಖ್ಯಮಂತ್ರಿ ಸ್ಥಾನಕ್ಕೆ ಪ್ರಸ್ತಾಪವಿಡುವಂತೆ ಸಿಎಂ ಸಿದ್ದರಾಮಯ್ಯ ಅವರ ಮೇಲೆ ಒತ್ತಡ ಹಾಕಲಾರಂಭಿಸಿದೆ. ಈಗಾಗಲೇ ನಿರಂತರ ಸಭೆಗಳ ಮೂಲಕ ಬಣ ಸಕ್ರಿಯವಾಗಿದೆ.

"ನಾಯಕತ್ವ ಸಂಬಂಧ ಹೈಕಮಾಂಡ್ ಮಧ್ಯ ಪ್ರವೇಶ ಮಾಡಬೇಕು. ಬಿಕ್ಕಟ್ಟು ಶೀಘ್ರ ಇತ್ಯರ್ಥ ಆಗಬೇಕು. ಮೇ 15ಕ್ಕೆ ಡಿ.ಕೆ. ಶಿವಕುಮಾರ್ ಅವರ ಹುಟ್ಟು ಹಬ್ಬ ಇದೆ. ಅಷ್ಟರೊಳಗೆ ಎಲ್ಲವೂ ಒಳ್ಳೆಯದಾಗುವ ವಿಶ್ವಾಸವಿದೆ.
–ಡಾ.ರಂಗಸ್ವಾಮಿ, ಶಾಸಕ, ಡಿಸಿಎಂ ಡಿ.ಕೆ.ಶಿವಕುಮಾರ ಬಣ

ಸಿಇಟಿ ವೇಳೆ ವಿದ್ಯಾರ್ಥಿ ಜನಿವಾರ ತೆಗೆಸಿದ ಪ್ರಕರಣ ತನಿಖೆ ನಂತರ ಕ್ರಮ

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಭರವಸೆ

ಬೆಂಗಳೂರು, ಏ.25(ಕೆಎಂಶಿ)–ಸಿಇಟಿ ವೇಳೆ



ವಿದ್ಯಾರ್ಥಿಯ ಜನಿವಾರ ತೆಗೆಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ದೂರು ದಾಖಲಾಗಿ ಪೊಲೀಸರು ತನಿಖೆ ನಡೆಸುತ್ತಿದ್ದು, ವಿದ್ಯಾರ್ಥಿಗಳು ಮತ್ತು ಪೋಷಕರು ಆತಂಕ ಪಡುವ ಅಗತ್ಯವಿಲ್ಲ ಎಂದು ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ.

ನಗರದ ಕೃಪಾನಿಧಿ ಕಾಲೇಜಿನಲ್ಲಿ ಕೆ–ಸಿಇಟಿ ಪರೀಕ್ಷೆ ಸಂದರ್ಭದಲ್ಲಿ ಜನಿವಾರ ತೆಗೆಸಿದ ಘಟನೆ ನನ್ನ ಗಮನಕ್ಕೆ ಬಂದಿದೆ. ಈ ಸಂಬಂಧ ಕಾನೂನಿನ ಚೌಕಟ್ಟಿನಲ್ಲಿ ಪಾರದರ್ಶಕವಾಗಿ ಕ್ರಮ ಜರುಗಿಸಲಾಗುವುದು. ಪರೀಕ್ಷೆಗೆ ಬರುವ ವಿದ್ಯಾರ್ಥಿಗಳ ಓಲೆ, ಬಳೆ, ಹಿಜಾಬ್ ಅಥವಾ ಜನಿವಾರ ತೆಗೆಸುವುದು, ಹಾಗೂ ಉದ್ದನೆ ತೋಳಿಗೆ ಕತ್ತರಿ ಹಾಕುವ ಮೂಲಕ ವಿದ್ಯಾರ್ಥಿಗಳ ಮನೋಸ್ಥೈರ್ಯ ಕುಗ್ಗಿಸುವ ಅಮಾನವೀಯ ನಡೆ ಅಕ್ಷಮ್ಯ ಮತ್ತು ಖಂಡನೀಯ. ಪರೀಕ್ಷಾ ಕೇಂದ್ರಗಳು ವಿದ್ಯಾರ್ಥಿಗಳ ಜ್ಞಾನವನ್ನು ಒರೆಗೆ ಹಚ್ಚುವ ತಾಣಗಳಾಗಬೇಕೇ ಹೊರತು, ಅವರ ಆತ್ಮಗೌರವಕ್ಕೆ ಧಕ್ಕೆ ತರುವ ಸ್ಥಳಗಳಾಗಬಾರದು. ನಮ್ಮ ರಾಜ್ಯದಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ಸರ್ಕಾರ ಅತ್ಯಂತ ಗಂಭೀರ ಕ್ರಮ ವಹಿಸಲಿದೆ. ಈ ಘಟನೆಯಿಂದ ವಿದ್ಯಾರ್ಥಿ ಧೃತಿಗೆಡಬಾರದು ಎಂಬ ವಿನಂತಿ ಮಾಡುತ್ತೇನೆ. ಪರೀಕ್ಷೆ ಮತ್ತು ಬದುಕಿನ ಗೆಲುವಿನ ದಾರಿಯತ್ತ ಶ್ರದ್ಧೆ ಮತ್ತು ನಿಶ್ಚಿಂತೆಯಿಂದ ಸಾಗಿ, ಜೀವನದಲ್ಲಿ ಓದು ಮತ್ತು ನಿರಂತರ ಪರಿಶ್ರಮವೇ ಪೂಜೆ ಹಾಗೂ ತಪಸ್ಸು. ರಾಜ್ಯ ಸರ್ಕಾರ ವಿದ್ಯಾರ್ಥಿಗಳ ಬೆಂಬಲಿಕ್ಕೆ ನಿಂತಿದೆ, ಧೈರ್ಯವಾಗಿರಿ ಎಂದು ತಮ್ಮ ಸಾಮಾಜಿಕ ಜಾಲತಾಣ ಖಾತೆಯಲ್ಲಿ ವಿಷಯ ಹಂಚಿಕೊಂಡಿದ್ದಾರೆ.

ಕುಮಾರಸ್ವಾಮಿ ವಿರುದ್ಧ ಶಕ್ತಿ ಪ್ರದರ್ಶನಕ್ಕೆ ಕೃಷಿ ಸಚಿವ ಚಲುವರಾಯಸ್ವಾಮಿ ಸಜ್ಜು

ಬೆಂಗಳೂರು, ಏ.25(ಕೆಎಂಶಿ)–ಕೇಂದ್ರ ಕೈಗಾರಿಕಾ ಸಚಿವ ಎಚ್.ಡಿ.ಕುಮಾರಸ್ವಾಮಿ ವಿರುದ್ಧ ಮೇ 20ರಂದು ಮಂಡ್ಯದಲ್ಲಿ ಬೃಹತ್ ಶಕ್ತಿ ಪ್ರದರ್ಶನಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ವೇದಿಕೆ ಸಿದ್ಧಪಡಿಸಿದ್ದಾರೆ.




ನಗರದ ಸಪ್ತ ಸಚಿವರ ಆವರಣದಲ್ಲಿರುವ ಚಲುವರಾಯಸ್ವಾಮಿ ನಿವಾಸದಲ್ಲಿ ಇತ್ತೀಚೆಗೆ ಮಂಡ್ಯ ಜಿಲ್ಲಾ ಕಾಂಗ್ರೆಸ್‌ನ ವಿಧಾನಸಭೆ ಮತ್ತು ವಿಧಾನ ಪರಿಷತ್ ಸದಸ್ಯರು ಸಭೆ ನಡೆಸಿ, ಶಕ್ತಿ ಪ್ರದರ್ಶನಕ್ಕೆ ತೀರ್ಮಾನಿಸಿದರು. ಕಳೆದ ಕೆಲವು ದಿನಗಳಿಂದ ಕುಮಾರಸ್ವಾಮಿ, ಮಂಡ್ಯ, ಮೈಸೂರು ಜಿಲ್ಲೆಗಳಲ್ಲಿ ನಿರಂತರ ಪ್ರವಾಸ ಮಾಡಿ, ನಮ್ಮ ಮತ್ತು ರಾಜ್ಯ ಸರ್ಕಾರದ ವಿರುದ್ಧ ಟೀಕಾಪ್ರಹಾರ ಮಾಡುತ್ತಿದ್ದಾರೆ.

ಮೇ 20ಕ್ಕೆ ಮಂಡ್ಯದಲ್ಲಿ ಭಾರೀ ಸಮಾವೇಶ ನಡೆಸಲು ಚಿಂತನೆ

ಇವರು ಅಧಿಕಾರದಲ್ಲಿ ಇದ್ದಾಗ ಏನನ್ನೂ ಕಡಿದು ಕಟ್ಟೆ ಹಾಕಲಿಲ್ಲ. ಆದರೆ, ನನ್ನಿಂದಲೇ ಎಲ್ಲವೂ ಆಗಿದೆ ಎಂಬುದಾಗಿ ಬಿಂಬಿಸುವ ಕೆಲಸ ಮಾಡುತ್ತಿದ್ದಾರೆ. ಅವರು ಮಂಡ್ಯ ಸಂಸದರಾಗಿ ಮತ್ತು ಹಿಂದೆ ಅಧಿಕಾರದಲ್ಲಿ ಇದ್ದಾಗ ಜಿಲ್ಲೆಗೆ ಏನು ಮಾಡಿದ್ದಾರೆ ಎಂಬುದನ್ನು ನಾನು ಈ ಸಮಾವೇಶದಲ್ಲಿ ಬಹಿರಂಗಪಡಿಸುತ್ತೇನೆ ಎಂದು ಚಲುವರಾಯಸ್ವಾಮಿ ಹೇಳಿದ್ದಾರೆ.

ನಾನು ಅಧಿಕಾರದಲ್ಲಿ ಇದ್ದಾಗ ಜಿಲ್ಲೆಗೆ ಏನು ಕೊಡುಗೆ ನೀಡಿದ್ದೇನೆ ಎಂಬ ಪಟ್ಟಿ ಬಿಡುಗಡೆ ಮಾಡುತ್ತೇನೆ. ಅಲ್ಲದೆ, ಕುಮಾರಸ್ವಾಮಿ ಅವರಿಗೂ ಸವಾಲು ಹಾಕುವೆ ಎಂದಿದ್ದಾರೆ.

ಪಕ್ಷ ಶಕ್ತಿ ಪ್ರದರ್ಶನ ಮಾಡದಿದ್ದರೆ, ಹೆಚ್.ಡಿ.ಕುಮಾರಸ್ವಾಮಿ ನಮ್ಮನ್ನು ಬುಲ್ಡೋಜ್ ಮಾಡುತ್ತಾರೆ. ಇದಕ್ಕೆ ಅವಕಾಶ ನೀಡಬಾರದು. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಮೇ 20ಕ್ಕೆ ಮೂರು ವರ್ಷ ಪೂರ್ಣಗೊಳ್ಳಲಿದೆ. ಇದನ್ನೇ ಮುಂದಿಟ್ಟುಕೊಂಡು ನಮ್ಮ ಸಂಘಟನೆಯ ಶಕ್ತಿ ಪ್ರದರ್ಶನ ಮಾಡೋಣ. ಸಿದ್ದರಾಮಯ್ಯ ಅವರೇ ಅಧಿಕಾರದಲ್ಲಿ ಮುಂದುವರೆದರೆ ಸಾಧನಾ ಸಮಾವೇಶ ಎನ್ನೋಣ. ಅಷ್ಟರೊಳಗೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆದರೆ, ಅಭಿನಂದನಾ ಸಮಾವೇಶವಾಗಿ ಪರಿವರ್ತಿಸೋಣ ಎಂದು ಸಚಿವ ಚಲುವರಾಯಸ್ವಾಮಿ ಸಭೆಗೆ ತಿಳಿಸಿದ್ದಾರೆ. ಜಿಲ್ಲೆಯಲ್ಲಿ ಹಿಂದೆ ನಡೆದಿರಬಾರದು, ಮುಂದೆ ನಡೆಯಬಾರದು ಅಂತಹ ಸಮಾವೇಶ ಮಾಡೋಣ, ಇದರ ಮೂಲಕ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರಿಗೆ ಉತ್ತರಿಸೋಣ ಎಂದಿದ್ದಾರೆ.

ಯೋಗೇಶ್ ಗೌಡ ಕೊಲೆ ಕೇಸ್: ಜೀವಾವಧಿ ಶಿಕ್ಷೆಗೆ ತಡೆ ಕೋರಿ ಹೈಕೋರ್ಟ್ ಮೆಟ್ಟಿಲೇರಿದ ವಿನಯ್ ಕುಲಕರ್ಣಿ!

ಬೆಂಗಳೂರು: ಬಿಜೆಪಿ ಮುಖಂಡ ಯೋಗೇಶ್ ಗೌಡ ಕೊಲೆ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿರುವ ವಿನಯ್ ಕುಲಕರ್ಣಿ ತಮಗೆ ವಿಧಿಸಿರುವ ಶಿಕ್ಷೆಗೆ ತಡೆ ಕೋರಿ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದಾರೆ. ಜನಪ್ರತಿನಿಧಿಗಳ ಕೋರ್ಟ್ ವಿಧಿಸಿದ್ದ ಜೀವಾವಧಿ ಶಿಕ್ಷೆ ಹಾಗೂ ಸಕ್ಷಮ ನ್ಯಾಯಾಲಯ ನೀಡಿದ್ದ ಕನ್ವಿಕ್ಷನ್ ಆದೇಶವನ್ನ ಪ್ರಶ್ನಿಸಿ, ಶಿಕ್ಷೆಗೆ ತಡೆಯಾಜ್ಞೆ ಮತ್ತು ಜಾಮೀನು ನೀಡುವಂತೆ ಹೈಕೋರ್ಟ್‌ಗೆ ಮನವಿ ಮಾಡಿದ್ದಾರೆ. ಜೀವಾವಧಿ ಶಿಕ್ಷೆ ಆದೇಶ ರದ್ದುಪಡಿಸುವಂತೆ ತಮ್ಮ ಅರ್ಜಿಯಲ್ಲಿ ಕೋರಿದ್ದಾರೆ. ತಮಗೆ ಶಿಕ್ಷೆ ವಿಧಿಸಿರುವುದರಿಂದ ಶಾಸಕ ಸ್ಥಾನ ಕಳೆದುಕೊಳ್ಳುವ ಸಾಧ್ಯತೆಗಳಿರುವ ಕಾರಣ, ಶಿಕ್ಷೆಗೆ ತಕ್ಷಣ ತಡೆಯಾಜ್ಞೆ ನೀಡುವಂತೆ ಕೋರಿದ್ದಾರೆ.


ವಿನಯ್ ಕುಲಕರ್ಣಿ

"ಈಗಾಗಲೇ ಸಲ್ಲಿಕೆಯಾಗಿರುವ ಅರ್ಜಿಯು ವಿಚಾರಣೆ ಮುಂದಿನ ವಾರ ನಡೆಯುವ ಸಾಧ್ಯತೆ ಇದೆ. ಈ ವೇಳೆ ಸಿಬಿಐ ವಾದವನ್ನೂ ನ್ಯಾಯಾಲಯ ಆಲಿಸುವ ನಿರೀಕ್ಷೆಯಿದೆ. ತೀರ್ಪು ಪ್ರಕಟವಾದ 90 ದಿನಗಳಲ್ಲಿ ತೀರ್ಪನ್ನು ಅಮಾನತಿನಲ್ಲಿ ಇಡದೇ ಹೋದರೆ ಶಾಸಕ ಸ್ಥಾನ ಅನರ್ಹ ಆಗುವ ಭಯದಲ್ಲಿ ವಿನಯ್ ಕುಲಕರ್ಣಿ ಮೇಲ್ಮನವಿ ಅರ್ಜಿ ಸಲ್ಲಿಸಿದ್ದಾರೆ.

ಶೃಂಗೇರಿ ಕಾಂಗ್ರೆಸ್ ಶಾಸಕ ರಾಜೇಗೌಡರಿಗೆ ಮತ್ತೆ ಸಂಕಷ್ಟ ಅಂಚೆ ಮತ ಮರುಎಣಿಕೆಗೆ ಹೈಕೋರ್ಟ್ ಆದೇಶ

ಬೆಂಗಳೂರು: ಶೃಂಗೇರಿ ಕ್ಷೇತ್ರದ



ಶಾಸಕ ಟಿ.ಡಿ.ರಾಜೇಗೌಡರಿಗೆ ಹೈಕೋರ್ಟ್ ಬಿಗ್ ಶಾಕ್ ನೀಡಿದೆ. ಶೃಂಗೇರಿ ಕ್ಷೇತ್ರದ ಅಂಚೆ ಮತ ಮರು ಎಣಿಕೆಗೆ ಹೈಕೋರ್ಟ್ ಸೂಚನೆ ನೀಡಿದ್ದು, ಮೇ 2ರಂದು ಬೆಳಗ್ಗೆ 9 ಗಂಟೆಗೆ ಅಂಚೆ ಮತ ಮರು ಎಣಿಕೆ ನಡೆಯಲಿದೆ. ಚಿಕ್ಕಮಗಳೂರಿನ ಐಡಿಎಸ್‌ಜಿ ಕಾಲೇಜಿನಲ್ಲಿ ಮರು ಮತ ಎಣಿಕೆ ನಡೆಯಲಿದೆ. ಕಳೆದ ಚುನಾವಣೆಯಲ್ಲಿ ಶೃಂಗೇರಿ ಕ್ಷೇತ್ರದಲ್ಲಿ ಅಂಚೆ ಮತಗಳ ಬಗ್ಗೆ ಉಂಟಾದ ವಿವಾದ ಇದೀಗ ▶ 10ನೇ ಪುಟಕ್ಕೆ

ಪ್ರಾಣಿ-ಪಕ್ಷಿ ಸಂಕುಲಕ್ಕೂ ಸಂಕಷ್ಟ ತಂದೊಡ್ಡಿದ ಬಿಸಿಲಿನ ಬೇಗೆ...

ಮೈಸೂರಲ್ಲಿ ಹೀಟ್ ಸ್ಟ್ರೋಕ್‌ಗೆ ಶ್ವಾನ ಬಲಿ

ಗೋಲ್ಡನ್ ರಿಟ್ರೈವರ್ ವರ್ಗಕ್ಕೆ ಸೇರಿದ 7 ವರ್ಷದ ರೋಣಿ ಸಾವು

ಮೈಸೂರು,ಏ.25(ಪಿಎಂ)– ಬಿಸಿಲಿನ ಝಳ ಹೆಚ್ಚುತ್ತಿದೆ. ರಣ ಬಿಸಿಲು ನೆತ್ತಿ ಸುಡುತ್ತಿದ್ದರೆ, ಬಿಸಿಗಾಳಿಗೆ ಆಯಾಸ ಅನುಭವದಿಂದ ಮಾನವರು ಮಾತ್ರವಲ್ಲ, ಪ್ರಾಣಿ–ಪಕ್ಷಿ ಸಂಕುಲವೂ ತತ್ತರಿಸಿ ಹೋಗುತ್ತಿವೆ.

ಹೌದು, ಹೀಟ್ ಸ್ಟ್ರೋಕ್‌ನಿಂದ ಮೈಸೂರಿನಲ್ಲಿ ಶನಿವಾರ ಶ್ವಾನವೊಂದು ಪ್ರಾಣ ಬಿಟ್ಟಿದೆ. ಗೋಲ್ಡನ್ ರಿಟ್ರೈವರ್ ವರ್ಗಕ್ಕೆ ಸೇರಿದ 7 ವರ್ಷದ ರೋಣಿ ಬಿಸಿಲಿನ ಆಘಾತಕ್ಕೆ ಬಲಿಯಾಗಿದೆ.

ವಿಜಯನಗರದ ತೇಜಸ್ ಅವರ ಸಾಕು ಶ್ವಾನವಾದ ರೋಣಿ, ಶನಿವಾರ ಕುವೆಂಪು ನಗರದ ಬಾಸುದೇವ ಸೋಮಾನಿ ಕಾಲೇಜಿನಲ್ಲಿ ಆಯೋಜಿಸಿದ್ದ ಶ್ವಾನ ಪ್ರದರ್ಶನದಲ್ಲಿ ಪಾಲ್ಗೊಂಡಿತ್ತು. ಪ್ರದರ್ಶನದ ನಂತರ ಮಧ್ಯಾಹ್ನ 3 ಗಂಟೆ ವೇಳೆಗೆ ಅಸ್ವಸ್ಥಗೊಂಡ ರೋಣಿಯನ್ನು ಕೂಡಲೇ ಪೆಟ್ ಆಂಬ್ಯುಲೆನ್ಸ್‌ನಲ್ಲಿ ಮೈಸೂರಿನ ಶ್ರೀ ಪೆಟ್ ಆಸ್ಪತ್ರೆಗೆ ಕರೆದೊಯ್ದು, ತುರ್ತು ಚಿಕಿತ್ಸೆ ನೀಡಲಾಯಿತು. ಅದಾಗ್ಯೂ ಚಿಕಿತ್ಸೆ ಫಲಕಾರಿಯಾಗದೇ ಸಂಜೆ 5ರ ವೇಳೆಗೆ ಜೀವತೆತ್ತಿದೆ.

ಹೀಗಾಗಿ ನಾಗರಿಕರು ತಮ್ಮ ಸಾಕು ಪ್ರಾಣಿ–ಪಕ್ಷಿಗಳತ್ತ ಗಮನಹರಿಸಬೇಕಿದ್ದು, ಅವುಗಳ ವಿಶೇಷ ಆರೈಕೆಗೆ ಆದ್ಯತೆ ನೀಡಬೇಕಿದೆ. ಮೈಸೂರಿನಲ್ಲೂ ಸಹ ತಾಪಮಾನ ಏರುತ್ತಿದ್ದು, ಇದರ ಪರಿಣಾಮ ಪ್ರಾಣಿ ಪಕ್ಷಿಗಳು


ಸಾವನ್ನಪ್ಪಿದ ಗೋಲ್ಡನ್ ರಿಟ್ರೈವರ್ ವರ್ಗಕ್ಕೆ ಸೇರಿದ 7 ವರ್ಷದ ರೋಣಿಯನ್ನು ಚಿತ್ರದಲ್ಲಿ ಕಾಣಬಹುದು.



ಬಿಸಿಲಿನಿಂದ ಆಯಾಸಕ್ಕೆ ತುತ್ತಾಗುತ್ತಿವೆ. ಇದಕ್ಕೆ ಶ್ವಾನಗಳೂ ಹೊರತಲ್ಲ. ಸಾಕು ನಾಯಿಗಳು ಶಾಖದ ಹೊಡೆತದಿಂದ ಅಪಾಯಕ್ಕೆ ಸಿಲುವ ಸಾಧ್ಯತೆ ಹೆಚ್ಚಾಗುತ್ತಿದೆ. ಹಾಗಾಗಿ ಮುನ್ನೆಚ್ಚರಿಕೆ ಅಗತ್ಯವಾಗಿದೆ.

ಮಾನವರಂತೆ ನಾಯಿಗಳು ಬೆವರುವುದು ಸಾಧ್ಯವಿಲ್ಲ. ಅವುಗಳು ಮುಖ್ಯವಾಗಿ ಉಸಿರಾಟ ಮೂಲಕವೇ ದೇಹದ ತಾಪಮಾನವನ್ನು ಕಡಿಮೆ ಮಾಡಿಕೊಳ್ಳುತ್ತವೆ. ಹೆಚ್ಚಿನ ಉಷ್ಣತೆ ಮತ್ತು ತೇವಾಂಶ ಇರುವ ಪರಿಸ್ಥಿತಿಯಲ್ಲಿ ವಿಶೇಷವಾಗಿ ಮಧ್ಯಾಹ್ನದ ವೇಳೆಯಲ್ಲಿ ಈ ಸಹಜ ತಂಪಾಗಿಸುವ ವಿಧಾನ ವಿಫಲವಾಗಬಹುದು. ಇದರಿಂದ ದೇಹದ ತಾಪಮಾನ ಅಪಾಯಕಾರಿ ಮಟ್ಟಕ್ಕೆ ಏರುತ್ತದೆ.

ಶಾಖದ ಹೊಡೆತ ಎಂದರೇನು?

ಶ್ವಾನದ ದೇಹದ ಉಷ್ಣತೆಯು ಸುರಕ್ಷಿತ ಮಟ್ಟಕ್ಕಿಂತ ಹೆಚ್ಚಾಗಿ 105 ಡಿಗ್ರಿ ಫ್ಯಾರನ್‌ಹೀಟ್ (ಸಾಮಾನ್ಯ ಶ್ರೇಣಿ 100 F-102.5 F) ಗಿಂತ ಹೆಚ್ಚಾದಾಗ ಶಾಖದ ಹೊಡೆತ ಸಂಭವಿಸುತ್ತದೆ. ಇದು ಶಾಖವನ್ನು ನಿಯಂತ್ರಿಸುವ ಅದರ ಸಾಮರ್ಥ್ಯವನ್ನು ಕಡಿಮೆಗೊಳಿಸುತ್ತದೆ. ಆಗ ಹೀಟ್ ಸ್ಟ್ರೋಕ್ ಸಂಭವಿಸಲಿದೆ. ತಕ್ಷಣ ಚಿಕಿತ್ಸೆ ದೊರೆಯದಿದ್ದರೆ, ಅಂಗಾಂಗ ವೈಫಲ್ಯ ಮತ್ತು ಮರಣಕ್ಕೂ ಕಾರಣವಾಗಬಹುದು. ▶ 10ನೇ ಪುಟಕ್ಕೆ

ಟೆಹ್ರಾನ್ ವಿಮಾನ ನಿಲ್ದಾಣದಿಂದ ಹಾರಾಟ ಆರಂಭ

ಟೆಹ್ರಾನ್: ಸುಮಾರು 2 ತಿಂಗಳ ಹಿಂದೆ ಅಮೆರಿಕ ಮತ್ತು ಇಸ್ರೇಲ್ ಜೊತೆಗಿನ ಸಂಘರ್ಷ ಆರಂಭವಾದ ನಂತರ ಇರಾನ್ ಇಂದು ಮೊದಲ ಬಾರಿಗೆ ಟೆಹ್ರಾನ್‌ನ ಪ್ರಮುಖ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ ವಾಣಿಜ್ಯ ವಿಮಾನಗಳ ಹಾರಾಟ ಪುನರಾರಂಭಿಸಿತು. ಟೆಹ್ರಾನ್‌ನ ಇಮಾಮ್ ಖೊಮೇನಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಇಸ್ತಾನ್‌ಬುಲ್, ಮಸ್ಕತ್ ಮತ್ತು ಮದೀನಾಗೆ ವಿಮಾನಗಳು ಹೊರಟಿವೆ. ಅಮೆರಿಕದೊಂದಿಗೆ ಕದನ ವಿರಾಮದ ನಂತರ ಇರಾನ್ ಈ ತಿಂಗಳ ಆರಂಭದಲ್ಲಿ ತನ್ನ ವಾಯುಪ್ರದೇಶವನ್ನು ಮತ್ತೆ ತೆರೆದಿತ್ತು. ಇದು 2 ದೇಶಗಳ ನಡುವಿನ ಹಗೆತನವನ್ನು ಕೊನೆಗೊಳಿಸಿತು.

ಶುಕ್ರವಾರ ರಾತ್ರಿ ಇಸ್ಲಾಮಾಬಾದ್‌ಗೆ ಬಂದ ನಂತರ ಇರಾನ್‌ನ ವಿದೇಶಾಂಗ ಸಚಿವ ಅಬ್ಬಾಸ್ ಅರಘ್ಚಿ ಪಾಕಿಸ್ತಾನದ ಮಿಲಿಟರಿ ಮತ್ತು ರಾಜಕೀಯ ನಾಯಕತ್ವದೊಂದಿಗೆ 2 ಸುತ್ತಿನ ಮಾತು ಕತೆ ನಡೆಸಿದ ಬಳಿಕ ಈ ಬೆಳವಣಿಗೆ ಸಂಭವಿಸಿದೆ. ಇರಾನ್ ನಿಯೋಗವು ಹಿರಿಯ ಅಧಿಕಾರಿಗಳೊಂದಿಗೆ ಚರ್ಚೆಗಳನ್ನು ಮುಂದುವರಿಸಲಿದೆ ಎಂದು ಪಾಕಿಸ್ತಾನದ ವಿದೇಶಾಂಗ ಸಚಿವಾಲಯ ತಿಳಿಸಿದೆ.

ಕಾಂತಾರ ಮಿಮಿಕ್ರಿ ವಿವಾದ: ತಿಂಗಳೊಳಗೆ ಚಾಮುಂಡಿಬೆಟ್ಟಕ್ಕೆ ರಣವೀರ್ ಭೇಟಿಗೆ ಹೈಕೋರ್ಟ್ ಸೂಚನೆ; ಅರ್ಜಿ ವಿಲೇವಾರಿ!

ಬೆಂಗಳೂರು: ಕಾಂತಾರ ಚಾಪ್ಟರ್–1 ಚಿತ್ರದ ದೈವಪಾತ್ರವನ್ನು ಮಿಮಿಕ್ರಿ ಮಾಡಿದ ಆರೋಪಕ್ಕೆ ಗುರಿಯಾಗಿರುವ ಬಾಲಿವುಡ್ ನಟ ರಣವೀರ್ ಸಿಂಗ್ ಒಂದು ತಿಂಗಳೊಳಗೆ ಮೈಸೂರಿನ ಚಾಮುಂಡಿಬೆಟ್ಟದ ಚಾಮುಂಡೇಶ್ವರಿ ದೇವಸ್ಥಾನಕ್ಕೆ ಭೇಟಿ ನೀಡಲು ನಿರ್ದೇಶಿಸಲಾಗಿದೆ ಎಂದಿರುವ ಕರ್ನಾಟಕ ಹೈಕೋರ್ಟ್ ಶನಿವಾರ ಅರ್ಜಿ ವಿಲೇವಾರಿ ಮಾಡಿದೆ.


ರಣವೀರ್‌ಸಿಂಗ್

ರಣವೀರ್ ಸಿಂಗ್ ಪ್ರತಿನಿಧಿಸಿದ್ದ ಹಿರಿಯ ವಕೀಲ ಸಜನ್ ಪೂವಯ್ಯ, ರಣವೀರ್ ಬೇಷರತ್ ಕ್ಷಮೆಯಾಚಿಸಿರುವ ಅಫಿಡವಿಟ್ ಹಾಕಿದ್ದೇವೆ. ದೇವಸ್ಥಾನಕ್ಕೆ ರಣವೀರ್ ಸಿಂಗ್ ಭೇಟಿ ನೀಡುತ್ತಾರೆ. ದಿನಾಂಕ ಹಾಕಿಲ್ಲ. ಪೀಠವೇ ನಿರ್ದಿಷ್ಟ ದಿನ ನಿಗದಿ ಮಾಡಬಹುದು. ಅಂದು ರಣವೀರ್ ದೇವಾಲಯಕ್ಕೆ ಹೋಗಲಿದ್ದಾರೆ ಎಂದರು. ಇದಕ್ಕೆ ದೂರುದಾರರ ಪರ ವಕೀಲ ಸಿಜಿ ಮಲೆಯಾಳ್ ಅವರು 'ಪೂವಯ್ಯ ಅವರಿಗೆ ಇದೊಂದು ಪ್ರಕರಣವಷ್ಟೆ, ನಮಗೆ ಇದು ನಂಬಿಕೆಯ ವಿಚಾರ' ಎಂದರು. ಈ ಹಂತದಲ್ಲಿ ಮಧ್ಯ ಪ್ರವೇಶಿಸಿದ ಪೀಠವು ಇದೇ ಕಾರಣಕ್ಕೆ ಪ್ರಕರಣಕ್ಕೆ ಇದುವರೆಗೂ ತಡೆ ನೀಡಿಲ್ಲ ಎಂದಿತು.

ಆಗ ಸಿಜಿ ಮಲೆಯಾಳ್, ಪ್ರತಿಯೊಂದು ಪದಕ್ಕೂ ತನ್ನದೇ ಆದ ತೂಕವಿದೆ. ಪದಗಳು ಪ್ರಭಾವ ಮತ್ತು ಪರಿಣಾಮಗಳನ್ನು ಉಂಟು ಮಾಡುತ್ತವೆ. ಇದೇ ವೇಳೆ ದೇವಸ್ಥಾನಕ್ಕೆ ಭೇಟಿ ನೀಡಲಾಗುವುದು ಎಂದು ರಣವೀರ್ ಅಫಿಡವಿಟ್‌ನಲ್ಲಿ ಹೇಳಿದ್ದಾರೆ. ಸಮಯ ಬಂದಾಗ ಎಂದು ಹೇಳಿದ್ದಾರೆ. ಅದು 30, 40 ದಿನವಾಗಬಹುದು. ಒಂದು ವರ್ಷ.. ಹತ್ತು ವರ್ಷ ಆಗಬಹುದು ಎಂದು ಶಂಕೆ ವ್ಯಕ್ತಪಡಿಸಿದರು. ನಾಲ್ಕು ವಾರಗಳಲ್ಲಿ ರಣವೀರ್ ದೇವಸ್ಥಾನಕ್ಕೆ ಭೇಟಿ ನೀಡಬೇಕು ಎಂದು ಆದೇಶದಲ್ಲಿ ಉಲ್ಲೇಖಿಸಲಾಗುವುದು ಎಂದರು.

ಇದನ್ನು ಇತರೆ ಸೆಲೆಬ್ರಿಟಿಗಳು ಲಘುವಾಗಿ ಪರಿಗಣಿಸಬಾರದು. ಕಠಿಣ ಎಚ್ಚರಿಕೆಯನ್ನು ಈ ನ್ಯಾಯಾಲಯ ನೀಡಬೇಕು ಎಂದು ಮಲೆಯಾಳ್ ಕೇಳಿದರು. ಇದಕ್ಕೆ ಪೀಠವು ಖಂಡಿತವಾಗಿಯೂ ಎಚ್ಚರಿಸಲಾಗುವುದು. ಕಾನೂನಿನ ಅನ್ವಯ ಉತ್ತರಿಸಬೇಕು ಎಂದಾದರೆ ಎಚ್ಚರಿಸುವ ಪರಿಸ್ಥಿತಿ ನಿರ್ಮಾಣವೇ ಆಗಲ್ಲ ಎಂದಿತು. ಈ ನಡುವೆ, ಸಜನ್ ಪೂವಯ್ಯ, ಈ ವಾದದಲ್ಲಿ ನಾವು ಭಾಗಿಯಾಗಲ್ಲ. ಜನರ ಭಾವನೆಗಳು ನಮಗೆ ▶ 10ನೇ ಪುಟಕ್ಕೆ

ಪರೀಕ್ಷಾ ಕೇಂದ್ರಗಳ ಸಿಸಿಟಿವಿ ಕ್ಯಾಮರಾ ಆಫ್ ಮಾಡಿಸಿ ಮಾಸ್ ಕಾಪಿ ಮಾಡಿಸ್ರಂತೆ...!


ಎಂಎಲ್ಸಿ ವಿಶ್ವನಾಥರಿಂದ ಎಸ್‌ಎಸ್‌ಎಲ್‌ಸಿ ದಾಖಲೆ ಫಲಿತಾಂಶದ ಸೀಕ್ರೆಟ್ ಬಯಲು!?

- ■ ಮೌಲ್ಯಮಾಪನದ ಬಗ್ಗೆಯು ಸಂಶಯ ■ ಕೆಲವೇ ಕೆಲವು ಸೋಮಾರಿ ಶಿಕ್ಷಕರಿಂದ ಫಲಿತಾಂಶ ಸ್ವಾಗತ ■ 80ಕ್ಕೆ 13 ಅಂಕ ಪಡೆದರೆ ಪಾಸ್ ಶಿಕ್ಷಣದ ಗತಿಯೇನು? ■ ಶಿಕ್ಷಣಾಭಿವೃದ್ಧಿಗೆ 2 ಸಾವಿರ ಕೋಟಿ ಸಾಲ ಪಡೆದು ಅದರಲ್ಲೂ ಕಿಕ್‌ಬ್ಯಾಕ್ ■ ಮೌಲ್ಯಮಾಪನ ಕೇಂದ್ರಕ್ಕೆ ಶಿಕ್ಷಣ ಸಚಿವರು ಹೋಗಿದ್ದೇಕೆ?

ಮೈಸೂರು, ಏ.25(ಜಿಎ)–ರಾಜ್ಯದಲ್ಲಿ ಇತ್ತೀಚೆಗೆ ನಡೆದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ, ಪರೀಕ್ಷಾ ಕೇಂದ್ರಗಳ ಸಿಸಿಟಿವಿ ಕ್ಯಾಮರಾಗಳನ್ನು ಆಫ್ ಮಾಡಿಸಿ, ಮಾಸ್ ಕಾಪಿ ಮಾಡಿಸಿರುವುದರಿಂದ ಈ ಬಾರಿ ದಾಖಲೆ ಫಲಿತಾಂಶ ಬಂದಿದೆ ಎಂದು ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಗಂಭೀರ ಆರೋಪ ಮಾಡಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಬಾರಿ ಶೇ.94ರಷ್ಟು ಫಲಿತಾಂಶ ಬಂದಿದೆ. ಕಳೆದ ವರ್ಷ ಸುಮಾರು ಶೇ.74ರಷ್ಟಿತ್ತು. ಆದರೆ ಕಳೆದ ಬಾರಿಗಿಂತ ಒಮ್ಮೆಲೇ ಭಾರೀ ಜಿಗಿತ ಕಂಡಿದೆ. ಹೀಗಾಗಿ ಪರೀಕ್ಷಾ ವಿಧಾನ, ಮೌಲ್ಯಮಾಪನದ ಬಗ್ಗೆ ಅನುಮಾನಗಳಿವೆ. ಕೆಲವೇ ಸೋಮಾರಿ ಶಿಕ್ಷಕರು ಮಾತ್ರ ಇಂತಹ ಫಲಿತಾಂಶವನ್ನು ಸ್ವಾಗತಿಸುತ್ತಾರಷ್ಟೆ ಎಂದರು.

20ಕ್ಕೆ 20 ಆಂತರಿಕ ಅಂಕಗಳನ್ನು ಎಲ್ಲರಿಗೂ ಕೊಡಲಾಗಿದೆ. ಪಾಸಾಗಲು ಇನ್ನು ಬೇಕಾದದ್ದು 13 ಅಂಕ ಮಾತ್ರ. ಅದನ್ನೂ ನಕಲು ಮಾಡಿಸಿದ್ದಾರೆ. ಇದು ಬಹಳ ನೋವಿನ ಸಂಗತಿ. ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಇಡೀ ಶಿಕ್ಷಣ ವ್ಯವಸ್ಥೆಯನ್ನೇ ಬುಡಮೇಲು ಮಾಡುತ್ತಿದೆ. ದೊಡ್ಡ ಸಾಧನೆ ಮಾಡಿದಂತೆ ಕೊಚ್ಚಿಕೊಳ್ಳುತ್ತಿದೆ. ರಾಜ್ಯದ ಶಿಕ್ಷಣ ವ್ಯವಸ್ಥೆ ಸಂಪೂರ್ಣ ಹದಗೆಟ್ಟು ಹೋಗಿದೆ. ನಾನು ಕೂಡ ಶಿಕ್ಷಣ ಸಚಿವನಾಗಿದ್ದವನು. ಆಂತರಿಕ ಅಂಕ 20ಕ್ಕೆ 20 ಅನ್ನು ಕೊಡುತ್ತಾರೆ. ಇನ್ನುಳಿದ 80 ಅಂಕಗಳಲ್ಲಿ 13 ಅಂಕ ತೆಗೆದರೆ ಪಾಸ್. ಈ ರೀತಿಯಾದರೆ ಶಿಕ್ಷಣ ವ್ಯವಸ್ಥೆ ಎಲ್ಲಿಗೆ ಹೋಗಬೇಕು. ಪಾಸಾದ ವಿದ್ಯಾರ್ಥಿಗಳು ಮುಂದೆ ಏನು ಮಾಡಬೇಕು. ಮುಂದಿನ ದಿನಗಳಲ್ಲಿ ಅವರ ಕಥೆ ಏನು! ಪಿಯುಸಿ ಹಂತದಲ್ಲಿ ಶಿಕ್ಷಣ ಮುಂದುವರಿಸುವವರ ಪ್ರಮಾಣ ಕಡಿಮೆ ಆಗಲಿದೆ. ಇದು ಆಘಾತಕಾರಿ ವಿಚಾರ ಎಂದು ಕಳವಳ ವ್ಯಕ್ತಪಡಿಸಿದರು.


ಹೆಚ್.ವಿಶ್ವನಾಥ್, ಎಂಎಲ್‌ಸಿ.

ಯಾದಗಿರಿ ಜಿಲ್ಲೆಯಲ್ಲಿ ಶೇ.41, ಬಳ್ಳಾರಿ ಶೇ.31, ಬೀದರ್ ಶೇ.21ರಷ್ಟು ಶಿಕ್ಷಕರ ಕೊರತೆ ಇದೆ. ಹೀಗೆ ಎಲ್ಲಾ ಜಿಲ್ಲೆಗಳಲ್ಲೂ ಶಿಕ್ಷಕರ ಕೊರತೆ ಇದ್ದೇ ಇದೆ. ಆದರೂ ಫಲಿತಾಂಶ ನೋಡಿದರೆ ದಾಖಲೆ ಫಲಿತಾಂಶ ಬಂದಿದೆ. ಶಿಕ್ಷಣ ಇಲಾಖೆ ಅಭಿವೃದ್ಧಿಗೆ ಏಷ್ಯನ್ ಡೆವಲೆಪ್ಮೆಂಟ್ ಬ್ಯಾಂಕಿನಲ್ಲಿ 2 ಸಾವಿರ ಕೋಟಿ ರೂಪಾಯಿ ಸಾಲ ಮಾಡಿದ್ದಾರೆ. ಆ ಹಣದಲ್ಲೂ ಕಿಕ್ ಬ್ಯಾಕ್ ತಗೋತಾರೆ. ಹಾಗೇ ಶಿಕ್ಷಕರ ನೇಮಕಾತಿಗೂ 50 ಸಾವಿರ ರೂ. ನೀಡಬೇಕು ಎಂದು ದೂರಿದರು.

"ಹಿಂದಿ ಭಾಷೆಗೆ ಗ್ರೇಡ್ ಬದಲು ಅಂಕಗಳನ್ನೇ ಕೊಡುವಂತೆ ನ್ಯಾಯಾಲಯ ಛೀಮಾರಿ ಹಾಕಿತು. ಕೋರ್ಟ್ ಆದೇಶ ನೀಡಿದ ಎರಡೇ ದಿನಕ್ಕೆ ಫಲಿತಾಂಶ ಪ್ರಕಟ ಆಯ್ತು! ಹಾಗಾದರೆ ಮಾರ್ಕ್ಸ್ ಎರಡೇ ದಿನಗಳಲ್ಲಿ ಹೇಗೆ ಕೊಟ್ಟರಿ! ಶಿಕ್ಷಣ ಸಚಿವ ಮಧು ಬಂಗಾರಪ್ಪ ಪಿಯುಸಿ ಫೇಲ್. ಅವನನ್ನು ಶಿಕ್ಷಣ ಸಚಿವನನ್ನಾಗಿ ಮಾಡಿದ್ದಾರೆ. ಬರೀ ಮಧು ಅಂತ ಹೆಸರಿಟ್ಟುಕೋ. ಮಧು ಬಂಗಾರಪ್ಪ ಅಂತ ನಿಮ್ಮಪ್ಪನ ಹೆಸರಿಟ್ಟುಕೊಂಡು ಅವರಿಗೆ ಯಾಕೆ ಕೆಟ್ಟ ಹೆಸರು ತರುತ್ತೀಯಾ!!! –ವಿಶ್ವನಾಥ್

ಮೌಲ್ಯಮಾಪನ ಕೇಂದ್ರಕ್ಕೆ ಶಿಕ್ಷಣ ಸಚಿವರು ಹೋಗಿದ್ದಾರೆ ಎಂದರೆ ಏನರ್ಥ! ಆಂತರಿಕ ಅಂಕ 20ಕ್ಕೆ 20 ಕೊಡಿ ಅಂತ ಇವರೇ ಹೇಳಿದ್ದಾರೆ. ಈ ಮೂಲಕ ಮಗುವಿನ ಓದುವ ಉತ್ಸಾಹವನ್ನೇ ಕಸಿದಿದ್ದಾರೆ. ಸರ್ಕಾರಿ ಶಾಲೆಗಳಲ್ಲಿ ಸರಿಯಾದ ಮೂಲ ವ್ಯವಸ್ಥೆಗಳೇ ಇಲ್ಲ. ಸಿಬ್ಬಂದಿ, ಶಿಕ್ಷಕರ ಕೊರತೆ ನಡುವೆಯೂ ಇಷ್ಟೊಂದು ದೊಡ್ಡ ಮಟ್ಟದ ಫಲಿತಾಂಶ ಬರಲು ಹೇಗೆ ಸಾಧ್ಯವಾಯಿತು?. ಇಂತಹ ಅಯೋಗ್ಯ ಶಿಕ್ಷಣ ಸಚಿವರನ್ನು ಇಟ್ಟುಕೊಂಡು ರಾಜ್ಯದ ಗತಿ ಏನಾಗಬೇಕು ಎಂದು ಕಿಡಿಕಾರಿದರು.

ಅರಸು ಕೊಡುಗೆ ಕುಲಗೆಡಿಸಿದ್ದಾರೆ: ಒಳ ಮೀಸಲಾತಿ ವಿಚಾರವಾಗಿ ಮಾತನಾಡಿ, ಒಳ ಮೀಸಲಾತಿ ಹಂಚಿಕೆಯಲ್ಲಿ ಶೋಷಿತ ಸಮುದಾಯಗಳಿಗೆ ಅನ್ಯಾಯವಾಗಿದೆ. ಸಚಿವ ಮಹದೇವಪ್ಪ ಶೋಷಿತ ಸಮುದಾಯಕ್ಕೆ ಮಾರಕ. ನಿನ್ನೆ ಹಂಚಿಕೆ ಮಾಡಿದ್ದು ಮೀಸಲಾತಿಯೇ? ದೇವರಾಜ ಅರಸರು ಏನೇನು ಕೊಡುಗೆಗಳನ್ನು ಕೊಟ್ಟಿದ್ದಾರೋ ಅವನ್ನೆಲ್ಲಾ ಕುಲಗೆಡಿಸಿ ಹೋಗುತ್ತಿದ್ದಾರೆ. 5ಕೆ.ಜಿ ಅಕ್ಕಿ, ಹೆಣ್ಮಕ್ಕಳಿಗೆ 2 ಸಾವಿರ ಕೊಟ್ಟಿರುವುದೇ ಇವರ ಸಾಧನೆ ಎಂದು ಟೀಕಿಸಿದರು. ಸುದ್ದಿಗೋಷ್ಠಿಯಲ್ಲಿ ಮುಖಂಡ ಬಸವೇಗೌಡ ಉಪಸ್ಥಿತರಿದ್ದರು.

ಸಿದ್ದರಾಮಯ್ಯ ಕೃತಜ್ಞತೆ ಇಲ್ಲದ ನಾಯಕ

"ಪಂಚರಾಜ್ಯಗಳ ಚುನಾವಣೆ ಫಲಿತಾಂಶ ನಂತರ ಮುಖ್ಯಮಂತ್ರಿ ಬದಲಾವಣೆ ವಿಚಾರವಾಗಿ ಪ್ರತಿಕ್ರಿಯಿಸಿ, ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗಲಿ. ಅವರು ಪಕ್ಷ ಸಂಘಟನೆ ಮಾಡಿದ್ದಾರೆ. ಅದರಲ್ಲೂ ಅವರು ಮೂಲ ಕಾಂಗ್ರೆಸ್ಸಿಗರು. ಸಿದ್ದರಾಮಯ್ಯನ ರೀತಿ ಬೇರೆ ಪಕ್ಷದಿಂದ ಬಂದಿಲ್ಲ. ಜೆಡಿಎಸ್‌ನಿಂದ ಹೆಚ್.ಡಿ.ದೇವೇಗೌಡರು ಓಡಿಸಿದಾಗ ನಾನೂ ಕಾಂಗ್ರೆಸ್‌ಗೆ ಕರೆದುಕೊಂಡು ಬಂದೆ. ಆದರೆ, ಅವರು ನನ್ನನ್ನೆ ಪಕ್ಷದಿಂದ ಹೊರಗೆ ಹಾಕಿಸಿದರು. ಹೀಗೆ ಸಿದ್ದರಾಮಯ್ಯ ಎಲ್ಲರಿಂದಲೂ ಸಹಾಯ ಪಡೆದುಕೊಂಡು ಅವರ ಬಗ್ಗೆ ಕೃತಜ್ಞತೆ ಇಲ್ಲದಂತೆ ನಡೆದುಕೊಂಡಿರುವ ನಾಯಕ. –ಹೆಚ್.ವಿಶ್ವನಾಥ್

ನಕ್ಕರೆ ಅದೇ ಸ್ವರ್ಗ

ತಿಮ್ಮ : ಯಾಕೋ ಗುಂಡ ಚಿಂತೆ ಮಾಡ್ತಾ ಕೂತಿದ್ದೀಯಾ?

ಗುಂಡ : ಫೇಸ್‌ಬುಕ್‌ನಲ್ಲಿ ಫ್ರೆಂಡ್‌ನಾ ಅನ್ ಫ್ರೆಂಡ್ ಮಾಡುವಂತೆ ಜೀವನದಲ್ಲೂ ಮ್ಯಾರಿಡ್ ಅನ್ನು ಅನ್‌ಮ್ಯಾರಿಡ್ ಮಾಡೋಕೆ ಆಗಲ್ವಾ ಅಂತ ಯೋಚ್ನೆ ಮಾಡ್ತಾ ಇದ್ದೀನಿ.

ಮೈಸೂರು ಮಿತ್ರ

ಭಾನುವಾರ, ಏಪ್ರಿಲ್ 26, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ದಿನಕಳೆದಂತೆ ನನಗೆ ಗೊತ್ತಾಗಿದ್ದು,
ನಾವು ಎಲ್ಲರ ಜೀವನದಲ್ಲಿ ಒಂದು ಆಯ್ಕೆ ಅಷ್ಟೇ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು } ತಾಗದೆ ಬಾಗದು / ಬಿಸಿಯಾಗದೆ ಬೆಣ್ಣೆ ಕರಗದು

ನಿಮ್ಮ ಪತ್ರಗಳು

ಸಿಇಟಿ ಪರೀಕ್ಷೆ ಕೆಲ ತಿದ್ದುಪಡಿ ಅವಶ್ಯಕ

ಮಾನ್ಯರೆ,

ಸರ್ಕಾರಗಳು ಚಾಪೆ ಕೆಳಗಡೆ ತೂರಿದರೆ, ವಿದ್ಯಾರ್ಥಿಗಳು ರಂಗೋಲಿ ಕೆಳಗೆ ತೂರಿದಂತೆ ಎನ್ನುವ ಗಾದೆಯನ್ವಯ ಪರೀಕ್ಷೆಗಳಲ್ಲಿ ಕಾಪಿ ಮಾಡಲು ವಿಧ ವಿಧದ ನಮೂನೆಗಳ ಬಗ್ಗೆ ಪತ್ರಿಕೆಗಳಲ್ಲಿ ನಾವು ಓದಿರುತ್ತೇವೆ. ಇತ್ತೀಚೆಗೆ ನಡೆದ ತಾಂತ್ರಿಕ ಶಿಕ್ಷಣದ ಪ್ರವೇಶಕ್ಕೆ ಅವಕಾಶ ಕಲ್ಪಿಸುವ ಸಿಇಟಿ ಪರೀಕ್ಷೆಗೆ ಹಾಜರಾದ ಅಭ್ಯರ್ಥಿಗಳಿಗೆ ಪರೀಕ್ಷೆ ಬರೆಯಲು ಅವಕಾಶ ನಿರಾಕರಿಸಿದ ಬಗ್ಗೆ ಪತ್ರಿಕೆಗಳಲ್ಲಿ ವರದಿಯಾಗಿದೆ. ಒಂದು ಪರೀಕ್ಷಾ ಕೇಂದ್ರದಲ್ಲಿ ಜನಿವಾರ ಧರಿಸಿದ ವಿದ್ಯಾರ್ಥಿಗೆ ಜನಿವಾರ ತೆಗೆಸಿಯೂ ಮತ್ತೊಂದೆಡೆ ಮೂಗುಬಟ್ಟು ಧರಿಸಿದ ವಿದ್ಯಾರ್ಥಿನಿಗೆ ಬಟ್ಟಿಗೆ ಪ್ಲಾಸ್ಟರ್ ಹಾಕಿಸಿ ಪರೀಕ್ಷೆ ಬರೆಸಿದರಂತೆ. ಬ್ಲೂಟೂಥ್ ಮೂಲಕ ಪರೀಕ್ಷೆಗಳಲ್ಲಿ ಕಾಪಿ ಮಾಡಲು ನಾನಾ ವಿಧದ ತಂತ್ರ ಅನುಸರಿಸುವ ವಿದ್ಯಾರ್ಥಿಗಳು, ಜನಿವಾರದಲ್ಲಿ ಅಥವಾ ಮೂಗುಬಟ್ಟಿನಲ್ಲಿ ತಂತ್ರಾಂಶ ಇಟ್ಟು, ಪರೀಕ್ಷೆಗಳಲ್ಲಿ ನಕಲು ಮಾಡುವುದು ಆಗುತ್ತದೆಯೇ ಎಂದರೂ, ಒಂದರ್ಥದಲ್ಲಿ ಅಮೆರಿಕ ಮತ್ತು ಇಸ್ರೇಲ್ ಅನ್ನೂ ನಾವು ತಂತ್ರಜ್ಞಾನದಲ್ಲಿ ಮೀರಿಸಿದ್ದೇವೆಯೇ ಎಂಬ ಪ್ರಶ್ನೆ ಕೂಡ ಕಾಡದಿರದು. ನಿಜ ಕಾಪಿ ಮಾಡಲು ಬಿಡಬಾರದು. ಹಾಗೆಂದು ಫುಲ್ ತೋಳಿನ ಅಂಗಿಗಳನ್ನು ಕತ್ತರಿಸುವುದು, ಜಡೆಗೆ ಹಾಕಿರುವ ಕ್ಲಿಪ್ ತೆಗೆಸುವುದೂ, ಜನಿವಾರ, ಕಿವಿಯೋಲೆ ಮೂಗುಬಟ್ಟು ತೆಗೆಸುವುದು ಇವ್ಯಾವುದೂ ತರವಲ್ಲ. ಪ್ರವೇಶದ ಮೊದಲು ಕಟ್ಟುನಿಟ್ಟಾದ ದೈಹಿಕ ತಪಾಸಣೆ (frisking), ಮೆಟಲ್ ಡಿಟೆಕ್ಟರ್, ಜ್ಯಾಮರ್‌ಗಳು ಮುಂತಾದ ತಂತ್ರಜ್ಞಾನ ಬಳಸಿದರೆ, ಇಂತಹ ಅತಿರೇಕದ ಕ್ರಮಗಳ ಅಗತ್ಯವೇ ಇಲ್ಲ ಎಂಬ ಪ್ರಶ್ನೆ ಸಹಜವಾಗಿಯೇ ಮೂಡುತ್ತದೆ. ಜನಿವಾರ, ಮೂಗುಬಟ್ಟು, ಕಿವಿಯೋಲೆ, ಜಡೆ ಕ್ಲಿಪ್ ಮುಂತಾದವುಗಳು ಬಹುಮಟ್ಟಿಗೆ ವೈಯಕ್ತಿಕ ನಂಬಿಕೆ, ಸಂಸ್ಕೃತಿ , ಧಾರ್ಮಿಕ ಆಚರಣೆ, ಇವುಗಳೊಂದಿಗೆ ಸಂಬಂಧ ಹೊಂದಿವೆ. ಇವನ್ನು ಪರೀಕ್ಷಾ ಕೇಂದ್ರದಲ್ಲಿ ಬಲವಂತವಾಗಿ ತೆಗೆಸುವುದು ವಿದ್ಯಾರ್ಥಿಗಳ ಮಾನಸಿಕ ಸ್ಥಿತಿಗೆ ಧಕ್ಕೆಯಾಗಬಹುದು.

ಈ ನಿಟ್ಟಿನಲ್ಲಿ ಸರ್ಕಾರ ಮತ್ತೊಮ್ಮೆ ಪರಿಶೀಲಿಸಿ, ಸುರಕ್ಷತೆ vs ಗೌರವ ನಡುವೆ ಸಮತೋಲನ ಕಾಪಾಡಿಕೊಂಡು, ಎಲ್ಲ ವಿದ್ಯಾರ್ಥಿಗಳಿಗೆ ಒಂದೇ ರೀತಿಯ ನಿಯಮ (non-discriminatory approach), ಪರೀಕ್ಷಾ ಸಿಬ್ಬಂದಿಗೆ ಸೂಕ್ತ ಮಾರ್ಗಸೂಚಿ ಮತ್ತು ತರಬೇತಿ ನೀಡಿ, ಕೆಲವು ಅತ್ಯಂತ ಸೂಕ್ತವಾದ ಕ್ರಮಗಳಾದ ಪ್ರವೇಶಕ್ಕೂ ಮುನ್ನ ಸಮಗ್ರ ತಪಾಸಣೆ, ಸ್ಪಷ್ಟ dress code ಹಾಗೂ ಮುಂಚಿತ ಮಾಹಿತಿ, ಅನುಮಾನಾಸ್ಪದ ಸಂದರ್ಭಗಳಲ್ಲಿ ಮಾತ್ರ ಹೆಚ್ಚುವರಿ ಪರಿಶೀಲನೆ ಜೊತೆಗೆ ಧಾರ್ಮಿಕ/ಸಾಂಸ್ಕೃತಿಕ ಚಿಹ್ನೆಗಳ ಬಗ್ಗೆ ಸಂವೇದನಾಶೀಲ ನಿಲುವು ತಳೆದು ಕೆಲವು ತಿದ್ದುಪಡಿಗಳನ್ನು ತರಬೇಕಾಗಿರುವುದು ಅವಶ್ಯಕ. ಬಹುಶಃ ಮುಂದಿನ ಬಾರಿಯ ಪರೀಕ್ಷೆಯಲ್ಲಿ ಹೀಗಾಗದಿರಲಿ ಎನ್ನೋಣವೇ. ಸರ್ಕಾರ ಮತ್ತು ಪರೀಕ್ಷಾ ಸಂಸ್ಥೆಗಳು ಈ ಘಟನೆಗಳಿಂದ ಪಾಠ ಕಲಿತು, ಹೆಚ್ಚು ಮಾನವೀಯ ಮತ್ತು ವೈಜ್ಞಾನಿಕ ವಿಧಾನಗಳನ್ನು ಅನುಸರಿಸುವುದು ಅತ್ಯಾವಶ್ಯಕ.

–ವಿಜಯ್ ಹೆಮ್ಮಿಗೆ, ಮೈಸೂರು

ಕುಕ್ಕರಹಳ್ಳಿ ಕೆರೆಯಲ್ಲಿ ಶೌಚಾಲಯಗಳನ್ನು ದುರಸ್ತಿಗೊಳಿಸಿ



ಮಾನ್ಯರೆ,

ಮೈಸೂರಿನಲ್ಲಿ ವಾಯು ವಿಹಾರಕ್ಕೆ ಅತ್ಯುತ್ತಮ ಸ್ಥಳಗಳಲ್ಲಿ ಒಂದಾದ ಕುಕ್ಕರಹಳ್ಳಿ ಕೆರೆಗೆ ಪ್ರತಿ ದಿನ ಬೆಳಿಗ್ಗೆ ಮತ್ತು ಸಂಜೆ ನೂರಾರು ಹಿರಿಯ ನಾಗರಿಕರು ಬಂದು ಹೋಗುತ್ತಾರೆ. ಆದರೆ ಇಲ್ಲಿಗೆ ವಾಯುವಿಹಾರಕ್ಕೆ ಬರುವವರಿಗೆ ಕನಿಷ್ಠ ನಿಸರ್ಗ ಕರೆಗೂ ಸರಿಯಾದ ವ್ಯವಸ್ಥೆ ಇಲ್ಲ.

ಈ ಭಾಗದಲ್ಲಿರುವ ಎರಡೂ ಶೌಚಾಲಯಗಳು ಕಳೆದ ಒಂದು ವರ್ಷದಿಂದ ದುರಸ್ತಿಯಲ್ಲೇ ಇವೆ. ಶೌಚಾಲಯದ ಹೊರಗೆ ಈ ಬಗ್ಗೆ ಬೋರ್ಡ್ ತಗುಲಿ ಹಾಕಿದ್ದಾರೆ. ಇಲ್ಲಿಗೆ ಬೆಳಗ್ಗೆ 5.00 ಗಂಟೆಗೆ ಹೆಚ್ಚಾಗಿ ಮಹಿಳೆಯರೇ ವಾಕಿಂಗ್ ಬರುತ್ತಾರೆ. ಸಕ್ಕರೆ ಖಾಯಿಲೆಯಿಂದ ಬಳಲುತ್ತಿರುವವರು ಆಗಾಗ ಮೂತ್ರ ವಿಸರ್ಜನೆಗೆ ಹೋಗುವುದು ಅನಿವಾರ್ಯ. ಇವರ ಪಾಡೇನು? ಆತಂಕಕಾರಿ ಸಂಗತಿಯೆಂದರೆ ಇಂದು ಸಂಜೆ ಇಲ್ಲಿಗೆ ವಾಕಿಂಗ್‌ಗೆ ಬಂದ ವಯಸ್ಸಾದ ಮಹಿಳೆಯೊಬ್ಬರು ಹೇಳುವಂತೆ ಇಲ್ಲಿ ಶೌಚಾಲಯ ವ್ಯವಸ್ಥೆ ಇಲ್ಲದೇ ಇರುವುದರಿಂದ ನಾನು ಮನೆಯಲ್ಲಿ ನೀರು ಕುಡಿಯದೇ ವಾಕಿಂಗ್ ಬರುತ್ತೇನೆ ಎನ್ನುತ್ತಾರೆ. ಇದರ ನಿರ್ವಹಣೆಯು ಮೈಸೂರು ವಿಶ್ವವಿದ್ಯಾಲಯಕ್ಕೆ ಒಳಪಟ್ಟಿದೆ. ವಿಶ್ವವಿದ್ಯಾಲಯದ ಆಡಳಿತ ಮಂಡಳಿಯವರಿಗೆ ದುರಸ್ತಿಯಲ್ಲಿರುವ ಶೌಚಾಲಯಗಳನ್ನು ರಿಪೇರಿ ಮಾಡಿಸುವಷ್ಟೂ ತಿಳುವಳಿಕೆ ಇಲ್ಲವೇ? ಅಥವಾ ವಿಶ್ವವಿದ್ಯಾಲಯವು ಶೌಚಾಲಯಗಳನ್ನು ದುರಸ್ತಿ ಮಾಡದೇ ಇರುವಂತಹ ಹಣಕಾಸಿನ ಪರಿಸ್ಥಿತಿಯನ್ನು ಎದುರಿಸುತ್ತಿದೆಯಾ?

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ಸಾರ್ವಜನಿಕ ಸ್ಮಶಾನ ಜಾಗಕ್ಕೆ ಮನವಿ

ಮಾನ್ಯರೆ,

ಶ್ರೀರಂಗಪಟ್ಟಣ ತಾಲೂಕಿನಲ್ಲಿಯೇ ಅತ್ಯಂತ ದೊಡ್ಡದಾದ ಅರಕೆರೆ ಗ್ರಾಮ ಅತೀ ಹೆಚ್ಚಿನ ಜನಸಂಖ್ಯೆಯಿಂದ ಕೂಡಿದ್ದು, ಇದುವರೆವಿಗೂ ಸಾರ್ವಜನಿಕ ಸ್ಮಶಾನ ಇಲ್ಲದೆ ತುಂಬಾ ತೊಂದರೆಯಾಗಿದೆ. ಬಹುಜನಾಂಗದವರಿಗೂ ಹಾಗೂ ಇತರೆ ಅಲ್ಪ ಸಂಖ್ಯಾತ ಜನಾಂಗದವರಿಗೂ ಸ್ಮಶಾನದ ಜಾಗ ಅಗತ್ಯವಾಗಿರುತ್ತದೆ. ಅದಕ್ಕಾಗಿ ಸ್ಥಳೀಯವಾಗಿ ತುರ್ತಾಗಿ ಸೌದೆ ಚಿತಾಗಾರವನ್ನಾದರೂ ನಿರ್ಮಿಸಬೇಕೆಂದು ಮನವಿ.

– ಎ.ಪಿ. ಸೋಮಶೇಖರ್, ಅರಕೆರೆ, ಶ್ರೀರಂಗಪಟ್ಟಣ ತಾ.

ಹೂಟಗಳ್ಳಿಗೆ ಸಿಟಿ ಬಸ್ ಸೌಲಭ್ಯ

ಮಾನ್ಯರೇ

ವಿಜಯನಗರ 4ನೇ ಹಂತದಿಂದ ಹೂಟಗಳ್ಳಿಗೆ ಸಿಟಿ ಬಸ್ ಸೌಲಭ್ಯವನ್ನು ದಿನಾಂಕ: 15/04/2026 ರಿಂದ ಪ್ರಾರಂಭಿಸಿದ್ದಾರೆ. ನಮ್ಮ ಮನವಿಗೆ ಸ್ಪಂದಿಸಿದ ವಿಜಯನಗರ ಕೆಎಸ್‌ಆರ್‌ಟಿಸಿ ಡಿಪೋ ಅಧಿಕಾರಿಗಳಿಗೆ ಧನ್ಯವಾದಗಳು. ವಿಜಯನಗರ 4ನೇ ಹಂತದಿಂದ ಹೂಟಗಳ್ಳಿಗೆ ಬಸ್ ಹೊರಡುವ ಸಮಯ ಬೆಳಗ್ಗೆ 10 ಗಂಟೆ, ಮಧ್ಯಾಹ್ನ 3 ಗಂಟೆ. ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕಾಗಿ ಮನವಿ.


– ಬಿ.ಜಿ.ರಂಗೇಗೌಡ, ವಿಜಯನಗರ 4ನೇ ಹಂತ ಮೈಸೂರು

ನಮ್ಮೂರ ಆದರ್ಶಪ್ರಾಯರು...



ಕಳೆದ ವರ್ಷ 'ಮೈಸೂರು ಮಿತ್ರ'ದಲ್ಲಿ ನಾನು ಬರೆದ ಮೈಸೂರಿನ 50 ಗಣ್ಯಾತಿಗಣ್ಯರ ಅಂಕಣ, 'ನಮ್ಮ ಮೈಸೂರಿನ ಅಸಾಮಾನ್ಯರು' ಪ್ರಕಟವಾಗಿ, ಆ ಲೇಖನಗಳನ್ನು ಓದುಗರು ಮೆಚ್ಚಿ ನಿರೀಕ್ಷೆಗೂ ಮೀರಿ ಪ್ರತಿಕ್ರಿಯೆಗಳನ್ನು ವ್ಯಕ್ತಪಡಿಸಿದರು. ಮರೆತುಹೋಗಿದ್ದ ಈ ಐವತ್ತು ಗಣ್ಯರ ಪರಿಚಯ ಮಾಡಿ ನಾನು ನಿಲ್ಲಿಸಿದ್ದೆ. ಆದರೆ ಈ ಅಂಕಣವನ್ನು ಮುಂದುವರಿಸುವಂತೆ ಬಹಳಷ್ಟು ಓದುಗರು ಒತ್ತಾಯಿಸುತ್ತಾ ಬರುತ್ತಿದ್ದಾರೆ. ಓದುಗರ ವಿಶ್ವಾಸಕ್ಕೆ ಮಣಿದು ನಾನು ಎರಡನೇ ಕಂತಿನ ಈ ಲೇಖನ ಮಾಲೆಯನ್ನು 'ನಮ್ಮೂರ ಆದರ್ಶಪ್ರಾಯರು' ಹೆಸರಿನಲ್ಲಿ ಮುಂದುವರಿಸುತ್ತಿದ್ದೇನೆ. ಈಗ ಪ್ರಕಟವಾಗುವ ಗಣ್ಯರ ತ್ಯಾಗಮಯ ಸೇವೆಯೂ ಅದೇ ರೀತಿ ದಾಖಲಾಗಿ ಉಳಿಯಲಿ ಎಂದು ನಾನಾದರೋ ಬಯಸುತ್ತೇನೆ. ಓದುಗರ ಪ್ರತಿಕ್ರಿಯೆಯೂ ಅಷ್ಟೇ ಮುಕ್ತವಾಗಿ ದೊರೆಯಲಿ ಎಂದು ಆಶಿಸುತ್ತೇನೆ. ಈ ಲೇಖನ ಮಾಲೆಯನ್ನು ಬರೆಯುವಾಗ ಈ ಮಹಾನುಭಾವರ ಚಿತ್ರಗಳು ಸಿಗದೆ ಹೋಗಬಹುದು. ಆ ಸಾಧ್ಯತೆಗಳೇ ಹೆಚ್ಚು. ದೊರೆತವರ ಚಿತ್ರಗಳು ಲೇಖನದ ಜೊತೆಗೆ ಪ್ರಕಟವಾಗುತ್ತವೆ. ಇಲ್ಲವೇ ಸಂದರ್ಭಕ್ಕೆ ಸರಿಹೊಂದುವ ಚಿತ್ರಗಳನ್ನು ಬಳಸಿಕೊಳ್ಳಲಾಗುವುದು. ಅವೂ ಲಭ್ಯವಾಗದೆ ಹೋದಲ್ಲಿ ಚಿತ್ರವಿಲ್ಲದೆಯೂ ಪ್ರಕಟಿಸಬೇಕಾಗಿ ಬರಬಹುದು ಎಂಬ ಮಾತನ್ನು ತಿಳಿಸಬಯಸುತ್ತೇನೆ. ಈ ಮಾಲಿಕೆಯ ಮೊದಲ ಲೇಖನ 'ಮೈಸೂರು ಮಿತ್ರ' ವಾರ್ಷಿಕ ಸಂಚಿಕೆಯಲ್ಲಿ ಪ್ರಕಟವಾಗುವ ಮೂಲಕ ಪ್ರಾರಂಭವಾಗಿರುವುದು ಶುಭಾರಂಭವೇ ಹೌದು.

3. ಪಾಟಣಕರ ಚಂದ್ರಶೇಖರ ಭಟ್ಟರು





ಗೌರಿ ಸತ್ಯ
ಹಿರಿಯ ಪತ್ರಕರ್ತರು
ಮೊ. 87627 88685

ಮೈಸೂರಿನ ಮಹಾರಾಜರು ಆಸ್ಥಾನದಲ್ಲಿ ಆಶ್ರಯ ನೀಡಿ ಬೆಳೆಸಿದ್ದ ವಿದ್ವಾಂಸರು ಮಾತ್ರವಲ್ಲದೆ ಅವರು ಸೃಷ್ಟಿಸಿದ ಸಂಸ್ಥೆಗಳೂ ಅನೇಕ. ಆ ಸಂಸ್ಥೆಗಳು ವಿದ್ವಾಂಸರ ಆಶ್ರಯ ಪಡೆದು ಬೆಳೆಯಲು ಅನುಕೂಲ ಮಾಡಿಕೊಟ್ಟಿದ್ದವು. ಉದಾಹರಣೆಗೆ ಮಹಾರಾಜ ಸಂಸ್ಕೃತ ಪಾಠಶಾಲೆ ಮತ್ತು ವಿಶ್ವವಿದ್ಯಾನಿಲಯದ ಪ್ರಾಚ್ಯವಿದ್ಯಾ ಸಂಶೋಧನಾಲಯ. ಇಲ್ಲಿ ಅನೇಕ ಮಹಾವಿದ್ವಾಂಸರು ಪಾಠ ಪ್ರವಚನಗಳನ್ನು ಹೇಳಿಕೊಟ್ಟು ಇನ್ನಷ್ಟು ವಿದ್ವಾಂಸರನ್ನು ತರಬೇತಿ ಮಾಡುತ್ತಿದ್ದರು. ಸಂಶೋಧನೆಗಳಲ್ಲಿ ತೊಡಗಿ ಅಲಭ್ಯವಾದ ಕೃತಿಗಳನ್ನು ಹೊರತೆಗೆದು ಅವುಗಳಲ್ಲಿ ಅಡಗಿರುವ ಜ್ಞಾನವನ್ನು ಹೊರ ಪ್ರಪಂಚಕ್ಕೆ ಕೊಡುವ ಸಂಶೋಧನಾ ಕಾರ್ಯ ಮಾಡುತ್ತಿದ್ದರು. ಇಲ್ಲೆಲ್ಲಾ ಶಾಸ್ತ್ರಗಳಲ್ಲಿ ನುರಿತ ಪಂಡಿತರಿಗೆ ಆಶ್ರಯ ಕೊಟ್ಟಿತ್ತು. ಇಲ್ಲಿನವರೇ ಅಲ್ಲದೆ ಹೊರಗಿನಿಂದಲೇ ಬಂದು ಈ ಕಾರ್ಯಗಳಲ್ಲಿ ತೊಡಗುತ್ತಿದ್ದವರಿದ್ದರು. ವಿದ್ವಾಂಸರೆಂದೆನಿಸಿಕೊಂಡು ತಾವೂ ಕೀರ್ತಿ ಪಡೆಯುತ್ತಿದ್ದರು. ಮೈಸೂರಿಗೂ ಕೀರ್ತಿ ತರುತ್ತಿದ್ದರು. ಅಂತಹ ಹಲವಾರು ನಿದರ್ಶನಗಳು ನಮ್ಮ ಕಣ್ಣಿಗೆ ಕಾಣಿಸಿಕೊಳ್ಳುತ್ತವೆ.

ಅಂತಹ ಅನೇಕ ವಿದ್ವಾಂಸರ ಪೈಕಿ ಒಬ್ಬರು ಪಾಟಣಕರ ಚಂದ್ರಶೇಖರ ಭಟ್ಟರು. ಇವರ ವಂಶಸ್ಥರು ಎಲ್ಲಿಯವರೆಂದು ತಿಳಿದು ಬರುವುದಿಲ್ಲವಾದರೂ, ಅದೇ ಕುಲದ ಹೆಸರನ್ನು ಹೊಂದಿದ್ದ ಸಾಂತಾಂಡೆ ಪಾಟಣಕರರಿಗೂ ಶೃಂಗೇರಿಯಲ್ಲಿದ್ದ ಪಾಟಣಕರರಿಗೂ ಕೆಲವು ತಲೆಮಾರುಗಳ ಸಂಬಂಧವಿದ್ದದ್ದು ಕಂಡು ಬರುತ್ತದೆ. ಪಾಟಣಕರ ಚಂದ್ರಶೇಖರ ಭಟ್ಟರು ಇದೇ ಶೃಂಗೇರಿಯಲ್ಲಿದ್ದ ವೆಂಕಟೇಶಭಟ್ಟ ಪಾಟಣಕರ ಮತ್ತು ನಾಗುಬಾಯಿ ದಂಪತಿಗಳ ಪುತ್ರರಾಗಿ 1909ರ ಆಗಸ್ಟ್ 20ರಂದು ಹುಟ್ಟಿದರು. ಶೃಂಗೇರಿಯ ಜಗದ್ಗುರು ಶ್ರೀ ಸಚ್ಚಿದಾನಂದ ಶಿವಾನುಭವ ಸ್ವಾಮಿಗಳು 1895ರಲ್ಲಿ ಸ್ಥಾಪಿಸಿದ್ದ ಸದ್ವಿದ್ಯಾ ಸಂಜೀವಿನಿ ಸಂಸ್ಕೃತ ಪಾಠಶಾಲೆಯಲ್ಲಿ ವೇದ ಮತ್ತು ಸಾಹಿತ್ಯದ ಅಭ್ಯಾಸ ಮಾಡಿದರು.

ಮುಂದಿನ ಉನ್ನತ ವಿದ್ಯಾಭ್ಯಾಸಕ್ಕಾಗಿ ಬೆಂಗಳೂರಿಗೆ ಬಂದು ಚಾಮರಾಜಪೇಟೆಯ ಶಂಕರ ಮಠದಲ್ಲಿರುವ ಶೃಂಗೇರಿ ಶಾಖಾ ಮಠದವರು ನಡೆಸುತ್ತಿರುವ ಭಾರತೀಯ ಗೀರ್ವಾಣ ಪ್ರೌಢ ವಿದ್ಯಾಭಿವರ್ಧಿನಿ ಮಹಾಪಾಠಶಾಲೆಯಲ್ಲಿ ಅಭ್ಯಾಸ ಕೈಗೊಂಡರು. ತರ್ಕ, ಅದ್ವೈತ ವೇದಾಂತ, ನವೀನ ನ್ಯಾಯಗಳ ಅಧ್ಯಯನವನ್ನು ಮೇರು ವಿದ್ವಾಂಸರಾಗಿದ್ದ ಆರಡಿಕೊಪ್ಪಂ ಸುಬ್ರಹ್ಮಣ್ಯ ಶಾಸ್ತ್ರಿ, ಕನ್ನಂಬಾಡಿ ಗೋಪಾಲ ಕೃಷ್ಣಶಾಸ್ತ್ರಿ, ನವೀನಂ ವೆಂಕಟೇಶ ಶಾಸ್ತ್ರಿಗಳ ಮಾರ್ಗದರ್ಶನದಲ್ಲಿ ಮಾಡಿದರು. 1932–33ರಲ್ಲಿ ಮೈಸೂರಿನ ಸಂಸ್ಕೃತ ವಿದ್ವತ್ ಪರೀಕ್ಷಾ ಮಹಾ ಸಭಾದವರು ನಡೆಸುತ್ತಿದ್ದ ನವೀನನ್ಯಾಯ ವಿದ್ವತ್ ಪರೀಕ್ಷೆಯಲ್ಲಿ, ನಂತರದ ವರ್ಷದಲ್ಲಿ ಅದೇ ಸಭಾದವರು ನಡೆಸುತ್ತಿದ್ದ ಸಾಹಿತ್ಯ ವಿದ್ವತ್ ಪರೀಕ್ಷೆಯಲ್ಲಿ ತೇರ್ಗಡೆಯಾದರು. ಆಗ ಮದ್ರಾಸ್ ವಿಶ್ವವಿದ್ಯಾ ನಿಲಯದ ಅದ್ವೈತ ವೇದಾಂತ ಶಿರೋಮಣಿ ಪರೀಕ್ಷೆ ಯಲ್ಲಿಯೂ ಉತ್ತೀರ್ಣರಾದರು. ಅಲ್ಲದೆ ಅಲಂಕಾರ ಶಾಸ್ತ್ರದಲ್ಲಿಯೂ ಪದವಿ ಪಡೆದು ಪಾರಿತೋಷಕವನ್ನು ಪಡೆದಿದ್ದಂತೆ ಕಂಡುಬರುತ್ತದೆ. ಇವರ ಸಹೋದರರೂ ಸಂಸ್ಕೃತ ಮತ್ತು ಕನ್ನಡದಲ್ಲಿ ವಿದ್ವಾಂಸರಾಗಿದ್ದರು.

> ಪಾಟಣಕರರ ವಿದ್ವತ್ತಿನ ಬಗ್ಗೆ ತಿಳಿದಿದ್ದ ಶೃಂಗೇರಿ ಜಗದ್ಗುರುಗಳು ಇವರನ್ನು ನವರಾತ್ರಿಯ ಸಂದರ್ಭದಲ್ಲಿ ತಮ್ಮ ದರ್ಬಾರಿನಲ್ಲಿ ನಡೆಯುತ್ತಿದ್ದ ವಿದ್ವತ್ ಸಭೆಗೆ ಆಹ್ವಾನಿಸುತ್ತಿದ್ದರು. ಇಂತಹ ವಿದ್ವತ್ ಸಭೆಗಳಲ್ಲಿ ತಮ್ಮ ಪಾಂಡಿತ್ಯಪೂರ್ಣ ಪ್ರತಿಭೆಯನ್ನು ತೋರಿ ಸುವರ್ಣ ಪದಕ ಮತ್ತು ಅರ್ಹತಾ ಪತ್ರಗಳನ್ನು ಇವರು ಪಡೆದಿದ್ದರು. ಚಿತ್ಪಾವನಾ ಸಮಾಜದಲ್ಲಿಯೇ ಶ್ರೇಷ್ಠ ವಿದ್ವಾಂಸರಲ್ಲಿ ಒಬ್ಬರಾಗಿ ಕೀರ್ತಿ ಪಡೆದರು. ಅದು ನಡೆಸಿದ ಸಮ್ಮೇಳನದ ಸಭಾಮಂಟಪಕ್ಕೆ ಇವರ ಹೆಸರನ್ನಿಟ್ಟು ಗೌರವ ತೋರಿಸಿತ್ತು.

ಪರೀಕ್ಷೆಗಳಲ್ಲಿ ಉತ್ತೀರ್ಣರಾದ ಮೇಲೆ ಪಾಟಣಕರರು ಬೆಂಗಳೂರಿನ ಚಾಮರಾಜೇಂದ್ರ ಸಂಸ್ಕೃತ ಸರಕಾರಿ ಕಾಲೇಜಿನಲ್ಲಿ ಅಧ್ಯಾಪಕ ವೃತ್ತಿ ಪ್ರಾರಂಭಿಸಿದರು. ಆ ಸಮಯದಲ್ಲಿ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಸಾಂಪ್ರದಾಯಿಕವಾಗಿ ಸಂಸ್ಕೃತ ಓದಿದ್ದ ಪಂಡಿತರೊಬ್ಬರ ಅವಶ್ಯಕತೆ ಬಿದ್ದು ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರು ಪಾಟಣಕರರನ್ನು ಮೈಸೂರಿಗೆ ಕರೆದು ಇಲ್ಲಿ ಪಾಠ ಹೇಳಲು ನೇಮಿಸಿದರು. ಆ ವೇಳೆಗೆ ಪಾಟಣಕರರಿಗೆ ಬೆಂಗಳೂರಿನ ಹರಿಕೆ ಕೃಷ್ಣರಾವ್ ದೇವಧರ್ ಅವರ ತಂಗಿ ಗಂಗಾ ದೇವಧರ್ ಅವರೊಂದಿಗೆ ಮದುವೆ ಆಗಿತ್ತು.

ಕುಟುಂಬದೊಂದಿಗೆ ಮೈಸೂರಿಗೆ ಆಗಮಿಸಿದ ಪಾಟಣಕರರು ಮಹಾರಾಜ ಕಾಲೇಜಿನಲ್ಲಿ ಸುಮಾರು ಕಾಲು ಶತಮಾನ ಕಾಲ 1965ರವರೆಗೆ ಅಧ್ಯಾಪಕರಾಗಿದ್ದರು. ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿ ವಾಸಿಸಲಾರಂಭಿಸಿದರು. ಮಹಾರಾಜ ಕಾಲೇಜು ಅಂದು ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಹಲವಾರು ಖ್ಯಾತನಾಮರು ಅಲ್ಲಿ ಉಪಾಧ್ಯಾಯರಾಗಿದ್ದರು. ಶಿಷ್ಯವರ್ಗವೂ ಉನ್ನತ ಮಟ್ಟದ್ದಾಗಿತ್ತು. ಅಂತಹ ಪರಿಸರದಲ್ಲಿ ಪಾಟಣಕರರ ಅನೇಕ ಶಿಷ್ಯರು ಮುಂದೆ ಹೆಸರು ಮಾಡಿ ಖ್ಯಾತಿ ಗಳಿಸಿದರು. ಸದಾ ಪಂಚೆ, ಅಂಗವಸ್ತ್ರ, ಮೇಲೊಂದು ಶಾಲು, ಪೇಟ, ಹಣೆಗೆ ಬೊಟ್ಟು ಇಟ್ಟುಕೊಂಡು ಬರುತ್ತಿದ್ದ ಪಾಟಣಕರರನ್ನು ನೋಡಿದ ಕೂಡಲೇ ಗೌರವ ಮೂಡುತ್ತಿತ್ತು. ಅವರ ಪಾಂಡಿತ್ಯ–ಘನತೆ ಎದ್ದು ಕಾಣುತ್ತಿತ್ತು. ಅವರ ವಿದ್ವತ್ಪೂರ್ಣ ಪಾಠಗಳು ಶಿಷ್ಯರ ಮೆಚ್ಚುಗೆಗೆ ಪಾತ್ರವಾಗಿದ್ದವು.

ಪಾಟಣಕರ ಚಂದ್ರಶೇಖರ ಭಟ್ಟರ ಕೆಲವು ಸಹೋದ್ಯೋಗಿಗಳು ಮತ್ತು ಕೆಲವು ಸಮಕಾಲೀನರೆಂದರೆ ಪ್ರೊ. ಡಿ.ಎಲ್.ನರಸಿಂಹಾಚಾರ್, ಪ್ರೊ. ಎಂ.ಯಾಮುನಾಚಾರ್ಯ, ಕುವೆಂಪು, ಡಾ.ಎಸ್. ಶ್ರೀಕಂಠಶಾಸ್ತ್ರಿ, ಪ್ರೊ.ಎಸ್.ವಿ.ಪರಮೇಶ್ವರ ಭಟ್ಟ, ವಿ. ಸೀತಾರಾಮಯ್ಯ, ರಾಳಪಳ್ಳಿ ಅನಂತಕೃಷ್ಣಶರ್ಮ, ಪ್ರೊ.ಎ.ಆರ್.ಕೃಷ್ಣಶಾಸ್ತ್ರಿ, ಪ್ರೊ. ಸಿ.ಡಿ.ನರಸಿಂಹಯ್ಯ, ಪ್ರೊ. ಕೆ.ವೆಂಕಟರಾಮಪ್ಪ, ಪ್ರೊ.ಉ.ಕಾ.ಸುಬ್ಬರಾಯಾಚಾರ್, ಡಾ.ಎಂ.ಎಚ್.ಕೃಷ್ಣ, ಪ್ರೊ. ವಿ.ಟಿ. ತಿರುನಾರಾಯಣಯ್ಯಂಗಾರ್, ಪ್ರೊ.ಕೆ.ವಿ.ರಾಘವಾಚಾರ್, ಪ್ರೊ. ಎಚ್.ಎಲ್.ಹರಿಯಪ್ಪ, ಪ್ರೊ.ಡಿ.ಎಸ್. ಅಚ್ಯುತರಾವ್, ಪ್ರೊ.ತ.ಸು.ಶಾಮರಾವ್, ಡಾ.ಎಂ.ವಿ. ಗೋಪಾಲಸ್ವಾಮಿ, ಪ್ರೊ.ತೀ.ನಂ. ಶ್ರೀಕಂಠಯ್ಯ, ಪ್ರೊ. ಟಿ.ಎಸ್.ಗೋಪಾಲನ್, ಪ್ರೊ. ಎನ್.ನಾಗಪ್ಪ, ಡಾ. ಪ್ರಭುಶಂಕರ, ಪ್ರೊ.ಸಿ.ಜಿ. ಪುರುಶೋತ್ತಮ, ಪ್ರೊ. ಎಂ.ಲಕ್ಷ್ಮೀನರಸಿಂಹಯ್ಯ, ಜಿ. ಸೀತಾರಾಮಯ್ಯ ಮತ್ತಿತರರು. ಇವರೆಲ್ಲರೂ ಮಹಾರಾಜ ಕಾಲೇಜಿಗೆ ಕೀರ್ತಿ ತಂದವರೇ.

ಮಹಾರಾಜ ಕಾಲೇಜಿನಲ್ಲಿ ಸಂಸ್ಕೃತ ಅಧ್ಯಾಪಕರಾಗಿದ್ದಾಗ ಪಾಟಣಕರರಿಗೆ ಅರಮನೆಯ ಸಂಬಂಧವೂ ಬೆಳೆದು ಬಂತು. ಅಲ್ಲಿನ ಆದರಕ್ಕೂ ಪಾತ್ರರಾದರು. ಮಹಾರಾಜ ಜಯಚಾಮರಾಜ ಒಡೆಯರರಿಗೆ ದರ್ಶನ ಗ್ರಂಥಗಳ ಪಾಠವನ್ನು ಮಾಡುತ್ತಿದ್ದರು. ಶ್ರೀವಿದ್ಯಾ ಉಪಾಸಕರಾಗಿದ್ದ ಮಹಾರಾಜರು ಶಕ್ತಿ ದೇವತೆಯ ಉಪಾಸನೆಗಾಗಿ ಬೇಕಾಗಿದ್ದ ಅನೇಕ ಶಾಸ್ತ್ರ ರಹಸ್ಯಗಳನ್ನು ಚಂದ್ರಶೇಖರ ಪಾಟಣಕರರಿಂದ ಅರಿತುಕೊಳ್ಳುತ್ತಿದ್ದರು. ವಾಗ್ಗೇಯಕಾರರಾಗಿದ್ದ ಜಯ ಚಾಮರಾಜ ಒಡೆಯರ ಕೃತಿಗಳ ಸಂಸ್ಕೃತ ಸಾಹಿತ್ಯವನ್ನು ಪರಾಮರ್ಶಿಸುತ್ತಿದ್ದವರ ಪೈಕಿ ಪಾಟಣಕರರು ಒಬ್ಬರಾಗಿದ್ದರು.

ಮಹಾರಾಜರು ಶ್ರೀಜಯಚಾಮರಾಜೇಂದ್ರ ಗ್ರಂಥ ಮಾಲೆ ಯೋಜನೆಯಲ್ಲಿ ಸಂಸ್ಕೃತದ ಉದ್ಗ್ರಂಥಗಳನ್ನು ಕನ್ನಡಕ್ಕೆ ತರುವ ಕಾರ್ಯದಲ್ಲಿ ಇವರು ಸಹಕಾರ ನೀಡಿ ಸುಮಾರು ಹತ್ತು ಪುರಾಣಗಳು ಮತ್ತು ಉಪಪುರಾಣಗಳನ್ನು ಕನ್ನಡಕ್ಕೆ ತರ್ಜುಮೆ ಮಾಡಿದರು. ಅವುಗಳೆಂದರೆ ಬ್ರಹ್ಮಾಂಡ ಪುರಾಣ, ಕೂರ್ಮ ಪುರಾಣ, ಮಾರ್ಕಂಡೇಯ ಪುರಾಣ, ಲಲಿತಾತ್ರಿಶತೀ ಭಾಷ್ಯಂ, ದೇವ್ಯುಪ ನಿಷನ್ಮಾಲಾ, ವರಿವಸ್ಯಾರಹಸ್ಯಂ, ಕಾಂಚೀಮಹಾತ್ಮ್ಯಂ, ವನದುರ್ಗೋಪನಿಷತ್, ಶಾಕ್ತೋಪನಿಷದಃ, ಮತ್ತು ಕಾಮಕಲಾವಿಲಾಸ.

ಮಹಾರಾಜರ ಆಸ್ತಿಕ ದರ್ಶನಾಭ್ಯಾಸಕ್ಕೆ ಪೂರಕವಾಗಿ, ಅವರ ನಿಕಟವರ್ತಿಗಳಲ್ಲಿ ಒಬ್ಬರಾಗಿ, ಅವರ ಜೊತೆಯಲ್ಲಿ ಕ್ಷೇತ್ರಗಳ ಪರ್ಯಟನೆ ಮಾಡಿದ ಪಾಟಣಕರ ಭಟ್ಟರು ಮಹಾರಾಜರಿಂದ ಆಸ್ಥಾನ ವಿದ್ವಾನ್ ಗೌರವಕ್ಕೆ ಪಾತ್ರರಾಗಿದ್ದರು. ಅರಮನೆಯ ಧರ್ಮಾಧಿಕಾರಿಯೂ ಆಗಿದ್ದರು.

ಪಾಟಣಕರರ ವಿದ್ವತ್ತಿನ ಬಗ್ಗೆ ತಿಳಿದಿದ್ದ ಶೃಂಗೇರಿ ಜಗದ್ಗುರುಗಳು ಇವರನ್ನು ನವರಾತ್ರಿಯ ಸಂದರ್ಭದಲ್ಲಿ ತಮ್ಮ ದರ್ಬಾರಿನಲ್ಲಿ ನಡೆಯುತ್ತಿದ್ದ ವಿದ್ವತ್ ಸಭೆಗೆ ಆಹ್ವಾನಿಸುತ್ತಿದ್ದರು. ಇಂತಹ ವಿದ್ವತ್ ಸಭೆಗಳಲ್ಲಿ ತಮ್ಮ ಪಾಂಡಿತ್ಯಪೂರ್ಣ ಪ್ರತಿಭೆಯನ್ನು ತೋರಿ ಸುವರ್ಣ ಪದಕ ಮತ್ತು ಅರ್ಹತಾ ಪತ್ರಗಳನ್ನು ಪಡೆದಿದ್ದರು. ಚಿತ್ಪಾವನಾ ಸಮಾಜದಲ್ಲಿಯೇ ಶ್ರೇಷ್ಠ ವಿದ್ವಾಂಸರಲ್ಲಿ ಒಬ್ಬರಾಗಿ ಕೀರ್ತಿಯನ್ನು ಪಡೆದರು. ಅದು ನಡೆಸಿದ ಸಮ್ಮೇಳನದ ಸಭಾಮಂಟಪಕ್ಕೆ ಇವರ ಹೆಸರನ್ನಿಟ್ಟು ಗೌರವ ತೋರಿ ಸಿತ್ತು. ಮೈಸೂರಿನ ಸಂಸ್ಕೃತ ಪಾಠಶಾಲೆಯ ಆವರಣದಲ್ಲಿರುವ ಸದ್ಗುರು ಸೇವಾ ಸನ್ನಿಧಿ, ಅಭಿನವ ಶಂಕರಾಲಯ, ಕೃಷ್ಣಮೂರ್ತಿಪುರಂ ರಾಮಮಂದಿರ, ಚಾಮರಾಜಪುರಂನ ಗೀತಾ ರಸ್ತೆಯಲ್ಲಿರುವ ಪ್ರಸನ್ನ ವಿಶ್ವೇಶ್ವರ ಸ್ವಾಮಿ ಮಂದಿರ, ಬಿಡಾರಂ ಕೃಷ್ಣಪ್ಪನವರ ರಾಮಮಂದಿರ ಮುಂತಾದ ಕಡೆ ಚಂದ್ರಶೇಖರ ಭಟ್ಟರು ಪ್ರವಚನ, ಪುರಾಣ ವಾಚನಗಳನ್ನು ಮಾಡಿದ್ದಾರೆ. ಸಂಸ್ಕೃತ ಪಾಠಶಾಲೆಯ ವಾರ್ಷಿಕ ಪ್ರಕಟಣೆ, ಕಾಲೇಜಿನ ಸಂಸ್ಕೃತ ವಿಭಾಗದ ಪುರವಣಿ ಕಾವ್ಯ ಸಂಗ್ರಹ ಅವುಗಳ ಪ್ರಕಟಣೆಯಲ್ಲೂ ನೆರವಾದರು.

ಪಾಟಣಕರ ಚಂದ್ರಶೇಖರ ಭಟ್ಟರು 1982ರ ಏಪ್ರಿಲ್ ಒಂದರಂದು ಇಹಲೋಕವನ್ನು ತ್ಯಜಿಸಿದರು. ಇವರ ಸ್ಮರಣಾರ್ಥ ಬೆಳ್ತಂಗಡಿ ತಾಲ್ಲೂಕು ಶಿಶಿಲ ಸೀಮಾ ಚಿತ್ಪಾವನ ಸಮಾಜದ ವತಿಯಿಂದ ಪ್ರತಿ ಬೇಸಿಗೆಯಲ್ಲಿ ಬೆಳ್ತಂಗಡಿ ತಾಲ್ಲೂಕು ಹತ್ಯಡ್ಕ ಗ್ರಾಮದ ದರ್ಭೆತ್ತಡ್ಕ ಪರಶುರಾಮ ದೇವಾಲಯದಲ್ಲಿ ವೇದ ಕುಸುಮ ಶಿಬಿರವನ್ನು ನಡೆಸಲಾಗುತ್ತಿದೆ.

ಸೌಮಿತ್ರಿಯಾಗದ ಆ ತಮ್ಮ



ನಾದಲಹರಿ
ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ಅದೊಂದು ದೊಡ್ಡ ಕೂಡು ಕುಟುಂಬ. ಆ ದಂಪತಿಗೆ ಎಂಟು ಜನ ಮಕ್ಕಳಲ್ಲದೆ ಆತನ ತಾಯಿ, ಗಂಡ ತೊರೆದ ತಂಗಿ, ಅವಳ ಮಕ್ಕಳು, ಆತನ ತಮ್ಮ ಮತ್ತು ಅವನ ಹೆಂಡತಿ, ಇಷ್ಟು ಸಾಲದೆಂಬಂತೆ ಸೂಟಿಯಲ್ಲಿ ಬರುವ ನೆಂಟರಿಷ್ಟರು ಹೀಗೆ ಅವರ ಮನೆ ಮಂದಿಯಿಂದ ತುಂಬಿ ತುಳುಕುತಿದ್ದಿತು. ದುಡಿಯುವಾತ ಗಟ್ಟಿ ಇದ್ದುದರಿಂದ ಹೇಗೋ ಎಲ್ಲವೂ ನಡೆದುಹೋಗುತ್ತಿತ್ತು. ನಾಕು ಮಂದಿ ಗಂಡು ಮಕ್ಕಳಲ್ಲಿ ಕೊನೆಯವ ಎಲ್ಲರ ಅಚ್ಚುಮೆಚ್ಚಿನ ತಮ್ಮನಾಗಿಯೇ ಬೆಳೆದ. ಅವನ ಮೇಲಿನವ ಬಹಳ ಗಂಭೀರ ಸ್ವಭಾವದ ಹುಡುಗ. ತನ್ನ ಭಾವನೆಗಳನ್ನು ಪದಗಳಲ್ಲಿ ಹಿಡಿಯಲಾರ. ಮೌನ ಅಥವಾ ಮುಗುಳ್ನಗು ಅಷ್ಟೇ ಅವನ ಅಭಿವ್ಯಕ್ತಿ. ಅದೇ ಕೊನೆಯವ, ಊರಿನ ಮಾತೆಲ್ಲವನ್ನೂ ತನ್ನದಾಗಿಸಿಕೊಳ್ಳುತ್ತಾ ಬೆಳೆದ. ಮಾತಿನ ಮೂಲಕವೇ ಇತರರನ್ನು ಆಕರ್ಷಿಸುವ ಗುಣವೂ ಚೆನ್ನಾಗಿ ನೆಲೆಯೂರಿತು. ಮಿಕ್ಕ ಅಣ್ಣ ಅಕ್ಕಂದಿರೆಲ್ಲ ಈ ಇಬ್ಬರಿಗಿಂತ ಹಿರಿಯರು. ಮಕ್ಕಳು ಬೆಳೆದಂತೆ ಅವರ ದಾರಿಗಳೂ ಬೇರೆ ಬೇರೆ ಆಯಿತು. ಆದರೆ ಆ ಮಕ್ಕಳೆಲ್ಲರಲ್ಲಿ ಇದ್ದ ಒಗ್ಗಟ್ಟು ಮಾತ್ರ ಮೆಚ್ಚಬೇಕಾದುದು. ಎಲ್ಲರ ಬಾಯಲ್ಲಿ ಕೊನೆಯವನ ತಮಾಷೆ, ಹರಟೆಗಳ ಬಗ್ಗೆ ಮಾತು ಬಂದರೆ, ಅವನ ಮೇಲಿನವನ ಬಗ್ಗೆ ಮಾತ್ರ, ಅವ ಬಾಳ ಪ್ರಾಮಾಣಿಕ ಅದಾನ? ಎಂದು ಕೊನೆಗೊಳ್ಳುತ್ತಿತ್ತು. ಇದನ್ನು ಕೇಳಿದಾಗಲೆಲ್ಲ ಕೊನೆಯವನ ಮನದಲ್ಲಿ ಕಸಿವಿಸಿ. ಈ ಅಣ್ಣನ ಬಗ್ಗೆ ಹೊಗಳಿಕೆಯು ಏಕೋ ಅವನಿಗೆ ಅಷ್ಟಾಗಿ ಹಿಡಿಸುತ್ತಿರಲಿಲ್ಲ.

ಹೆಚ್ಚಿನ ಓದಿಗಾಗಿ ಈ ಅಣ್ಣ ಮುಂಬಯಿ ಸೇರಿದ ಕೆಲ ವರುಷಗಳಲ್ಲೇ ತಮ್ಮನನ್ನೂ ಅಲ್ಲಿಗೆ ಕರೆಸಿಕೊಂಡ. ಯಾರೂ ಹೇಳದೆಯೇ ಅವನ ಜವಾಬ್ದಾರಿ ತನ್ನದೆಂಬುದನ್ನು ಅರಿತಿದ್ದ. ಅದನ್ನು ಪ್ರೀತಿಯಿಂದ ಮಾಡುತ್ತಿದ್ದ. ಮುಂಬಯಿಯ ಗೆಳೆಯರೂ ಸಹ ಅಣ್ಣ ತಮ್ಮಂದಿರ ನಡುವಿನ ವ್ಯತ್ಯಾಸವನ್ನು ಗುರುತಿಸಿದರು. ವಿಪರೀತ ಮಾತನಾಡುವ ತಮ್ಮ, ಮಾತನ್ನಾಡದೆಯೇ ಕರ್ತವ್ಯನಿರತನಾದ ಅಣ್ಣ. ತನ್ನ ಸ್ವಂತಿಕೆಯನ್ನು ಬೆಳೆಸಿಕೊಳ್ಳುವತ್ತ ಗಮನ ನೀಡಿದ ತಮ್ಮ, ತನ್ನರಿವಿಲ್ಲದಂತೆಯೇ ಇತರರಿಗೆ ಧಾರಾಳವಾಗಿ ಉಪದೇಶಿಸುವ ಅಭ್ಯಾಸವನ್ನೂ ಕೂಡ ಬೆಳೆಸಿಕೊಂಡ. ತಾನು ಮಹಾ ಬುದ್ಧಿವಂತ ಎಂಬುದೂ ತಲೆಯಲ್ಲಿ ನೆಲೆಯೂರಿತು. ಮುಂಬಯಿಯ ಏಳುಬೀಳಿನ ಬದುಕಿನಲ್ಲಿ ಇಬ್ಬರೂ ಮುಳುಗೆದ್ದರು. ಅಣ್ಣನ ಲಗ್ನವಾದ ನಂತರ ಅವನು ಬೇರೆ ಕಡೆಗೆ ಹೋಗಬೇಕಾಯಿತು. ಊರಿಗೆ ಹೋದಾಗಲೆಲ್ಲ ಬಂಧುಗಳೆಲ್ಲರೂ ತಮ್ಮನ ಮಾತಿಗೆ ನಗುವುದು, ಅಣ್ಣನನ್ನು ಹೊಗಳುವುದು ನಡೆದೇ ಇತ್ತು. ಯಾವ ಕೆಲಸಕ್ಕೂ ಅಂಟಿಕೊಳ್ಳಲಾರದೆ ತಮ್ಮ ಊರಿಗೆ ಬಂದು ತನಗೆ ಇಷ್ಟವಾದ ಕನ್ಯೆಯೊಡನೆ ಲಗ್ನವಾದ. ಈಗಾಗಲೇ ಅವನಲ್ಲಿ ಮನೆಮಾಡಿದ್ದ ಕುಹಕ ಬುದ್ಧಿಗೆ ತಕ್ಕ ಪತ್ನಿಯಾಗಿದ್ದಳು ಅವಳು. ಅವರಿಬ್ಬರ ಬುದ್ಧಿಯು ಸ್ವಂತ ವ್ಯಾಪಾರವನ್ನು ಮಾಡಲು ಪ್ರೇರೇಪಿಸಿತು. ನೆರೆ ರಾಜ್ಯದಲ್ಲಿ ಆರಂಭವಾದ ಆಹಾರೋತ್ಪನ್ನಗಳ ನಿರ್ಮಾಣವು ವಿಸ್ತರಿಸುತ್ತಲೇ ಅವನ ಪರಿಚಯದವರೂ ಹೆಚ್ಚಾದರು. ಅವರಲ್ಲಿ ಸಿರಿವಂತರನ್ನು ಗುರುತಿಸಿ, ಅವರಿಂದ ಏನು ಲಾಭ ಪಡೆಯಬಹುದೆಂಬುದನ್ನು ಅವನ ಮನ ಲೆಕ್ಕ ಹಾಕತೊಡಗಿತು. ಅಂಥವರಿಂದ ಸಾಲ ಪಡೆಯತೊಡಗಿದ. ಈ ರೀತಿಯಲ್ಲಿ ದುಡ್ಡು ಹರಿದು ಬರಲಾರಂಭಿಸಿದಾಗ, ಸ್ವಂತದ ಐಷಾರಮೀ ಬದುಕೂ ಹೆಚ್ಚತೊಡಗಿತು. ಜೊತೆಗೆ ಬಡ್ಡಿ ಕಟ್ಟುವುದು ಹೊರೆಯಾಗಿ ಕಾಣತೊಡಗಿತು. ಸಾಲದ ಒತ್ತಡ ಹೆಚ್ಚಾಗಿ ಕುತ್ತಿಗೆಗೆ ಬಂದಾಗ ರಾತ್ರೋರಾತ್ರಿ ಆ ಊರನ್ನೇ ಬಿಟ್ಟು ಸಂಸಾರದೊಡನೆ ಬೇರೆ ಊರಿಗೆ ಓಡಿಬಂದ. ಮತ್ತೆ ಹತ್ತಿರದ ಸಂಬಂಧಿಕರೊಡನೆ ಮತ್ತೊಂದು ವ್ಯಾಪಾರ ಆರಂಭಿಸುವ ದುರಾಲೋಚನೆಗೆ ಚಾಲನೆ ನೀಡಿದ. ಈ ಬಾರಿ ತಮ್ಮ ಪ್ರಾಮಾಣಿಕ ಅಣ್ಣನನ್ನೂ ಜೊತೆಗೆ ಸೇರಿಸಿಕೊಂಡು, ಮುಂದೆ ಸಿಗಲಿರುವ ಬಣ್ಣ ಬಣ್ಣದ ಕನಸುಗಳನ್ನು ಚಿತ್ರಿಸಿದ. ತನ್ನ ಪಾಡಿಗೆ ಕೆಲಸ ಮಾಡಿಕೊಂಡು ಇರುತ್ತಿದ್ದ ಅಣ್ಣನೂ ತಮ್ಮೆಲ್ಲರ ಕುಟುಂಬಕ್ಕೆ ಒಳ್ಳೆಯದಾಗಲೀ ಎಂಬ ಸದುದ್ದೇಶದಿಂದ ತನ್ನ ಉಳಿತಾಯದ ಜೊತೆಗೆ ಸಾಲ ಮಾಡಿ ಆರಂಭದ ಬಂಡವಾಳ ಹಾಕಿದ. ಕೆಲಸದಲ್ಲಿದ್ದುಕೊಂಡೇ ತನ್ನ ಕೈಮೀರಿ ಸಹಾಯ ಮಾಡುತ್ತಿದ್ದ. ಒಂದು ಪೈಸೆಯನ್ನೂ ಹಾಕದೆ ಈಗ ವ್ಯಾಪಾರ ಕುದುರತೊಡಗಿದಂತೆ ತಮ್ಮನಿಗೆ ಸರಾಗವಾಯಿತು. ಅವರ ಕುಟಿಲ ಮನಸಿನ ಸುಳಿವೂ ಸಿಗದಂತೆ ಆ ದಂಪತಿ ಮನದಲ್ಲಿ ಬಲೆ ನೇಯತೊಡಗಲ್ಪಟ್ಟಿತು.



ಆರಂಭದಲ್ಲಿ ಕಾರ್ಖಾನೆಗೆ ಫಿನಾನ್ಸ್ ಕಾರ್ಪೊರೇಷನ್ನಿನಿಂದ ಸಾಲ ಪಡೆಯಲಾಯಿತು. ಮೆಷಿನರಿಗಳನ್ನು ಕೊಂಡುಕೊಳ್ಳಲು ಪರಿಚಯದವರನ್ನು ಗೊತ್ತು ಮಾಡಿಕೊಡಲು ಅಣ್ಣನಿದ್ದ. ಆತನನ್ನು ಹೊರಗಿನವರು ಅನುಮಾನಿಸಲು ಸಾಧ್ಯವೇ ಇರಲಿಲ್ಲ. ಮತ್ತೆ ಉತ್ಪನ್ನ ಮತ್ತು ಬೇಡಿಕೆ ಹೆಚ್ಚಾಗತೊಡಗಿತು. ಅದರ ವಾರಾಟದ ಹೊಣೆಯನ್ನು ಹೊತ್ತ ತಮ್ಮ ಮತ್ತೆ ಹೊರಗಿನ ವ್ಯವಹಾರದಲ್ಲಿ ತನ್ನ ಮಾತಿನ ಬುದ್ಧಿವಂತಿಕೆಯನ್ನು ಬಳಸಿ ದುಡ್ಡನ್ನು ಜೇಬಿಗೆ ಸೇರಿಸತೊಡಗಿದ. ತಮ್ಮದೇ ಕಂಪನಿಗೆ ದ್ರೋಹ ಬಗೆಯಲೂ ಹೇಸಲಿಲ್ಲ. ಒಟ್ಟು ಆ ದಂಪತಿಗಳಿಗೆ ದುಡ್ಡು ಮಾಡುವುದಷ್ಟೇ ಮುಖ್ಯವಾಗಿತ್ತು. ತನ್ನ ಓಡಾಟದ ಖರ್ಚುಗಳಿಗಾಗಿ ಕಂಪನಿಗೆ ಸುಳ್ಳು ಲೆಕ್ಕ ತೋರಿಸಿ ಹಣ ಹೊಡೆಯುತ್ತಿದ್ದ. ಮಗಳ ವಿದೇಶದಲ್ಲಿನ ಓದಿಗಾಗಿ, ಅವಳ ಕಣ್ಣಿನ ಚಿಕಿತ್ಸೆಗಾಗಿ ಎಲ್ಲಕ್ಕೂ ಕಂಪನಿಯ ಹಣವನ್ನೇ ಆತ ಬಳಸಿದುದು. ಇದು ಅಣ್ಣನ ಗಮನಕ್ಕೆ ಬಂದರೂ ತನ್ನ ತಮ್ಮ ತಾನೆ, ಇಂದಲ್ಲ ನಾಳೆ ಎಲ್ಲರಿಗೂ ಹಣ ಬರುತ್ತದೆ ಎಂದು ಸುಮ್ಮನಿದ್ದುದು ಆತನ ಒಳ್ಳೆಯತನವೋ ಅಥವೋ ದುರ್ಬಲತೆಯೋ ತಿಳಿಯದು. ನೋಡ ನೋಡುತ್ತಿದ್ದಂತೆ ತಮ್ಮ ಮೂರಂತಸ್ತಿನ ಮನೆಯನ್ನೂ ಕಟ್ಟಿದ. ಈಗ ಆತನ ಗಮನ ತನ್ನ ಅಣ್ಣ ಮತ್ತು ಇತರ ಸಂಬಂಧಿಗಳನ್ನು ಕಂಪನಿಯಿಂದ ಹೊರ ಹಾಕುವುದು ಹೇಗೆ ಎಂಬುದು ಅಷ್ಟೇ. ತನಗೆ ಬೇಕಾದವರಿಗೆ, ಅಂದರೆ ಯಾರಿಂದ ತನಗೆ ಲಾಭ ಇದೆಯೋ ಅಂಥವರಿಗೆ ಮಾತ್ರ ಮುಂಗಡ ಹಣವಿಲ್ಲದೆ ಕಂಪನಿಯ ಉತ್ಪನ್ನವನ್ನು ನೀಡುತ್ತಿದ್ದ. ಮಿಕ್ಕವರಿಗೆ ಜಪ್ಪಯ್ಯ ಎಂದರೂ ಕೊಡುತ್ತಿರಲಿಲ್ಲ.

ಕಂಪನಿಗಾಗಿ ತಾನು ತಂದಿದ್ದ ಸಾಲಗಳ ಮೇಲಿನ ಬಡ್ಡಿಯನ್ನು ಕೈಯಿಂದ ನೀಡಿ ತೀರಿಸುತ್ತಿದ್ದ ಅಣ್ಣ ಅದನ್ನು ಹಿಂದಿರುಗಿಸಲು ಕೇಳಿದಾಗ ಕಂಪನಿಯು ಬಹಳ ಕಷ್ಟದಲ್ಲಿದೆ. ಕೋಟ್ಯಾಂತರ ರುಪಾಯಿ ಸಾಲವಾಗಿದೆ. ಅದನ್ನು ನಾವೆಲ್ಲರೂ ಈಗ ಹಂಚಿಕೊಳ್ಳಬೇಕು. ಅಥವಾ ಅದೆಲ್ಲವನ್ನೂ ನಾನೊಬ್ಬನೇ ಹೊರುತ್ತೇನೆ. ನೀವೆಲ್ಲರೂ ಕಂಪನಿಯಿಂದ ಹೊರಹೋಗಿ ಎಂಬ ಉತ್ತರ ಬಂದಿತು. ಅವನ ನಿಜವಾದ ಬಣ್ಣ ಹೊರಬಂದಾಗ ಅಣ್ಣ ಬಹಳ ನೋವಿನಿಂದ ಹೊರಗೆ ಬಂದ. ಮಿಕ್ಕವರೆಲ್ಲರೂ ಅವನಿಗೆ ಹಿಡಿ ಶಾಪ ಹಾಕಿದರು. ನೀರು ಕುಡಿದಂತೆ ಸುಳ್ಳು ಹೇಳುವ, ಪರಿಸ್ಥಿತಿಯನ್ನು ತನ್ನ ಲಾಭಕ್ಕಾಗಿ ಬೇಕಾದಂತೆ ತಿರಿಚುವ ಚಾಕಚಕ್ಯತೆಯನ್ನು ಪಡೆದ ತಮ್ಮ ತನ್ನ ಕಂಪನಿಯನ್ನು ಮತ್ತೊಬ್ಬರಿಗೆ ಮಾರಿ, ಅದರಿಂದಲೂ ದುಡ್ಡು ಮಾಡಿಕೊಂಡು ಮತ್ತೊಂದು ಊರಿಗೆ ಹೊರಟ. ಸ್ವಂತ ಅಣ್ಣನ ಬೆನ್ನಿಗೆ ಚೂರಿ ಹಾಕಿದುದರ ಬಗ್ಗೆ ಲವಲೇಶವೂ ಪಶ್ಚಾತ್ತಾಪವಾಗಲೀ ನಾಚಿಕೆಯಾಗಲೀ ಇರದೆ, ಆತ ಮತ್ತೆ ಟೋಪಿ ಹಾಕಲು ಹೊಸ ಗಿರಾಕಿಗಳ ಅನ್ವೇಷಣೆಯಲ್ಲಿ ತೊಡಗಿಕೊಂಡ. ಇತ್ತ ಅಣ್ಣ ತನ್ನ ಇಳಿ ವಯಸ್ಸಿನಲ್ಲಿ ಮಕ್ಕಳಲ್ಲಿ ದುಡ್ಡಿಗಾಗಿ ಕೈಚಾಚಲು ಬಯಸದೆ, ಮತ್ತೆ ಕೆಲಸಕ್ಕೆ ಸೇರಿಕೊಂಡು ದುಡಿಯಲಾರಂಭಿಸಿದ. ಅಷ್ಟಾದರೂ ತಮ್ಮ ಮತ್ತು ಅವನ ಹೆಂಡತಿಯನ್ನು ಅಕ್ಕಂದಿರು ಚೆನ್ನಾಗಿಯೇ ನಡೆಸಿಕೊಳ್ಳುತ್ತಿದ್ದರು. ಅವನ ಚೇಷ್ಟೆ ಮಾತುಗಳು ಅವರಿಗೆಲ್ಲ ಭಾರೀ ಮೆಚ್ಚು. ಅಣ್ಣನಿಗಾದ ಅನ್ಯಾಯ ಅವರಿಗೆ ತಿಳಿದಿರಲಿಲ್ಲ ಎಂದಲ್ಲ, ಆದರೆ, ಅದಕ್ಕೆಲ್ಲ ತನ್ನದೇ ಆದ ರೀತಿಯಲ್ಲಿ ಸಮಜಾಯಿಷಿ ಕೊಟ್ಟು, ಅವರ ಬಾಯನ್ನು ಮುಚ್ಚಿಸುವುದರಲ್ಲಿ ಅವನು ತೇರ್ಗಡೆ ಆಗಿದ್ದ. ಶ್ರೀರಾಮನಂತಹ ಅಣ್ಣನ ತಮ್ಮ ಲಕ್ಷ್ಮಣ ಆಗಲೇಬೇಕೆಂದೇನಿಲ್ಲವಲ್ಲ?

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಜಿಲ್ಲಾ ಪಂಚಾಯತ್ ಕಾರ್ಯಾಲಯ

ಜಿಲ್ಲಾ ಆಡಳಿತ ಭವನ, ನೆಲ ಮಹಡಿ, ಚಾಮರಾಜನಗರ ಜಿಲ್ಲೆ–571313.
ದೂರವಾಣಿ ಸಂಖ್ಯೆ : 08226–224013, ಫ್ಯಾಕ್ಸ್ – 08226–224014
Gmail : ceochanagar@gmail.com

ಸಂ:ಜಿಪಂಚಾ:ಉಖಾಯೋ/26/2023–24(ಇ–35278)/20 ದಿನಾಂಕ: 24/07/2026

ಇ–ಟೆಂಡರ್ ಪ್ರಕಟಣೆ

ಮಹಾತ್ಮಗಾಂಧಿ ನರೇಗಾ ಯೋಜನೆಯಡಿಯಲ್ಲಿ ಚಾಮರಾಜನಗರ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯಿತಿ ಮತ್ತು ಅನುಷ್ಠಾನ ಇಲಾಖೆಗಳಲ್ಲಿ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಹೊರಗುತ್ತಿಗೆ ಸಿಬ್ಬಂದಿಗಳ ಸೇವೆಯನ್ನು ಪಡೆಯಲು ಅಧಿಕೃತ ಸಂಸ್ಥೆಗಳಿಂದ ಟೆಂಡರನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಅರ್ಹ ಬಿಡ್ಡುದಾರರು ಇ–ಪಕ್ಯೂರ್ ಮೆಂಟ್ ಮೂಲಕ https://kppp.karnataka.gov.in ನಲ್ಲಿ ಟೆಂಡರ್ ವಿವರಗಳನ್ನು ಪಡೆಯಬಹುದಾಗಿದೆ. ಇ–ಪ್ರಕ್ಯೂರ್‌ಮೆಂಟ್ ಮೂಲಕ ಪ್ರಸ್ತಾವನೆ ಸಲ್ಲಿಸಲು ಕೊನೆಯ ದಿನಾಂಕ: 15–05–2026 ಅಪರಾಹ್ನ 05:30 ಗಂಟೆ

ಸಹಿ/– ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಪರವಾಗಿ,
ಜಿಲ್ಲಾ ಪಂಚಾಯತ್, ಚಾಮರಾಜನಗರ

ಸಂ:ವಾಸಾಸಂಇ:ಚಾನಗರ:71:2026–27

ಎರಡನೇ ವರ್ಷದ ಪುಣ್ಯಸ್ಮರಣೆ




ಶ್ರೀಮತಿ ಜಾನಕಮ್ಮ (ನಿಧನ 26–04–2024) ಶ್ರೀ ಲೇಟ್ ನಾಗರಾಜು (ನಿಧನ 01–11–1999)
ಅವ್ವ ಅಣ್ಣ ನೀನು ನಮ್ಮನ್ನು ಅಗಲಿ ಇಂದಿಗೆ 2 ವರ್ಷ ಕಳೆದರೂ ಸದಾ ನೀವು ನಮ್ಮ ನೆನಪಿನಲ್ಲಿದ್ದೀರಿ. ನಿಮ್ಮ ಆಶೀರ್ವಾದ ಸದಾ ನಮ್ಮ ಮೇಲಿರಲಿ
ದುಃಖಿತಪ್ತರು: ನಿಮ್ಮ ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು, ಕುಂಬಾರಗೇರಿ ಶ್ರೀರಂಗಪಟ್ಟಣ ಟೌನ್

1ನೇ ವರ್ಷದ ಪುಣ್ಯಸ್ಮರಣೆ



ಶ್ರೀಮತಿ ಪುಷ್ಪಾವತಿ
ನಿಧನ: 26–04–2025
ನೀವು ನಮ್ಮನ್ನಗಲಿ ಇಂದಿಗೆ 1 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ದುಃಖಿತಪ್ತರು: R. ಶಿವಾನಂದ, ಸೌಮ್ಯ ಸೋಮಶೇಖರ್, ಹೇಮಾವತಿ ರಂಗನಾಥ, ಮಹಾಲಕ್ಷ್ಮೀ ಉಜ್ವಲಾದಿತ್ಯ, ಪ್ರಜ್ವಲಾದಿತ್ಯ

ಮೊದಲನೇ ವರ್ಷದ ಪುಣ್ಯಸ್ಮರಣೆ



ಶ್ರೀ ಆರ್. ರಮೇಶ್ ಬಾಬು
ನಿಧನ: 26.4.2025
ನೀವು ನಮ್ಮನ್ನಗಲಿ ಇಂದಿಗೆ 1 ವರ್ಷ ಕಳೆದರೂ ಸದಾ ನಿಮ್ಮ ನೆನಪು ನಮ್ಮ ಮನದಲ್ಲಿ ಹಚ್ಚ ಹಸಿರಾಗಿದೆ.
ಇಂತಿ ದುಃಖಿತಪ್ತರು:
ಶ್ರೀಮತಿ ಎನ್ ಲತಾಮಣಿ (ರೈಲ್ವೇ ಇಲಾಖೆ) ಮತ್ತು ಕುಟುಂಬವರ್ಗ, ವಿದ್ಯಾರಣ್ಯಪುರಂ, ಮೈಸೂರು

ಜಾತಿ, ಹಣಬಲವಿದ್ದರೆ ಮಾತ್ರ ಶಾಸಕ, ಮಂತ್ರಿ, ಮುಖ್ಯಮಂತ್ರಿಯೂ ಆಗಬಹುದು!

● ಹಣ ಬಲ, ಜಾತಿ ಬಲದ ಆದ್ಯತೆಯಿಂದ ಮೌಲ್ಯಾಧಾರಿತ ರಾಜಕಾರಣ ನಶಿಸುತ್ತಿದೆ; ಶಾಸಕ ಜಿ.ಟಿ.ದೇವೇಗೌಡರ ವಿಷಾದ ● ಮೌಲ್ಯಾಧಾರಿತ ರಾಜಕಾರಣಿಗಳು ಗೆಲ್ಲಲು ಸಾಧ್ಯವಾಗುತ್ತಿಲ್ಲ ● ವಿಧಾನಪರಿಷತ್‌ನಲ್ಲಿ ವಿಷಯ ತಜ್ಞರ ಆಯ್ಕೆಯಾಗುತ್ತಿಲ್ಲ ● ಪ್ರಸ್ತುತ ಪರಿಸ್ಥಿತಿಯಲ್ಲಿ ಮೌಲ್ಯಯುತ ರಾಜಕಾರಣ ಗೌಣ ● ನರೇಂದ್ರ ಮೋದಿ ಮಾದರಿ ರಾಜಕಾರಣಿ ರಾಜ್ಯ, ದೇಶಕ್ಕೆ ಬರಬೇಕು

ಮೈಸೂರು, ಏ.25(ಬಿಎಲ್‌ಯು)– ಹಣ ಬಲ, ಜಾತಿ ಬಲ ಇದ್ದವರಿಗೆ ಮಾತ್ರ ರಾಜಕಾರಣ ಮಾಡಲು ಸಾಧ್ಯವಾಗುತ್ತಿದ್ದು, ಮೌಲ್ಯಾಧಾರಿತ ರಾಜಕಾರಣ ನಶಿಸಿ ಹೋಗುತ್ತಿದೆ ಎಂದು ಶಾಸಕ ಜಿ.ಟಿ.ದೇವೇಗೌಡ ಆತಂಕ ವ್ಯಕ್ತಪಡಿಸಿದರು.

ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ಶನಿವಾರ ಕರ್ನಾಟಕ ರಾಜ್ಯ ರಾಜ್ಯಶಾಸ್ತ್ರ ಅಧ್ಯಾಪಕರ ಸಂಘದ 21ನೇ ಮಹಾ ಸಮ್ಮೇಳನ ಹಾಗೂ ರಜತ ಮಹೋತ್ಸವದಲ್ಲಿ ರಾಜಕಾರಣಿಗಳೊಂದಿಗೆ ಆಯೋಜಿಸಿದ್ದ ವಿಶೇಷ ಅಧಿವೇಶನದಲ್ಲಿ 'ಚುನಾವಣಾ ರಾಜಕಾರಣ' ಕುರಿತು ಮಾತನಾಡಿದ ಅವರು, ಪ್ರಸ್ತುತ ಮೌಲ್ಯಯುತ ರಾಜಕಾರಣ ಗೌಣವಾಗುತ್ತಿದ್ದು, ಹಣ ಬಲ, ಜಾತಿ ಬಲ ಇದ್ದರೆ ಶಾಸಕ, ಮಂತ್ರಿ ಹಾಗೂ ಮುಖ್ಯಮಂತ್ರಿ ಕೂಡ ಆಗಬಹುದಾಗಿದೆ ಎಂದು ಹೇಳಿದರು.

ಇಂತಹ ಬಲಾಢ್ಯ ರಾಜಕಾರಣಿಗಳು ಮೌಲ್ಯಾಧಾರಿತ ರಾಜಕಾರಣಿಗಳನ್ನು ಬಲಿ ತೆಗೆದುಕೊಳ್ಳುತ್ತಿದ್ದಾರೆ. ಇದರಿಂದ ಮೌಲ್ಯಾಧಾರಿತ ರಾಜಕಾರಣಿಗಳು ಚುನಾವಣೆಗಳಲ್ಲಿ ಗೆಲ್ಲಲು ಸಾಧ್ಯವಾಗುವುದಿಲ್ಲ, ಮತದಾರರು ಗೆಲ್ಲಿಸುವುದು ಇಲ್ಲ ಎಂದು ಶಾಸಕ ಜಿ.ಟಿ.ದೇವೇಗೌಡರು ಅಸಮಾಧಾನ ವ್ಯಕ್ತಪಡಿಸಿದರು.

ಅಪ್ಪಟ ಪ್ರಾಮಾಣಿಕ ರಾಜಕಾರಣಿ ನಿಜಲಿಂಗಪ್ಪ ಅವರನ್ನೆ ನಮ್ಮ ಜನರು ಸೋಲಿಸಿದರು. ಮೌಲ್ಯಾಧಾರಿತ ರಾಜಕಾರಣಿಗಳಿಗೆ ಬೆಲೆ ಇಲ್ಲ ಎಂಬುದಕ್ಕೆ ಇದೇ ಸ್ಪಷ್ಟ ನಿದರ್ಶನ ಎಂದು ಅಭಿಪ್ರಾಯಪಟ್ಟರು.

ಜಾತಿ ಮತ್ತು ಹಣ ಅಫೀಮು ಇದ್ದಂತೆ ಎಂದು ಕಾರ್ಲ್ ಮಾರ್ಕ್ಸ್ ಹೇಳಿದ್ದು, ಇಂದಿನ ರಾಜಕಾರಣ ಇದರಿಂದ ಮುಕ್ತವಾಗಬೇಕು. ಸಮಾಜಮುಖಿಯಾಗಬೇಕು ಎಂದು ಸಲಹೆ ನೀಡಿದರು.

ಸಿದ್ದರಾಮಯ್ಯ ಅವರು ಮೊದಲ ಬಾರಿಗೆ ಚುನಾವಣೆಯಲ್ಲಿ ಸ್ಪರ್ಧೆ ಮಾಡಿದಾಗ ಅವರ ಸಮುದಾಯದವರೇ ಬೆಂಬಲಕ್ಕೆ ಬರಲಿಲ್ಲ. ಅಂತಹ ಸಂದರ್ಭದಲ್ಲಿ ನಾನು ಅವರ ಪರ ಪ್ರಚಾರ ಮಾಡಿದೆ. ಮನೆ ಮನೆಯಲ್ಲಿ ಜನರು ವಿಳ್ಳೆದೆಲೆ ಕೊಟ್ಟು ಸಿದ್ದರಾಮಯ್ಯ ಅವರನ್ನು ಗೆಲ್ಲಿಸಿದರು ಎಂದರು.

ಅಂದು ಕಿಂಗ್ ಮೇಕರ್ ಆದ ಕಾಮರಾಜ್‌ರಂತಹ ಮೌಲ್ಯಾಧಾರಿತ ರಾಜಕಾರಣಿಗಳು ಬೆರಳಣಿಕೆಯಷ್ಟು ಇದ್ದರು. ಆದರೆ ಇಂದು ಮೌಲ್ಯಾಧಾರಿತ ಇಂತಹ ರಾಜಕಾರಣಿಗಳನ್ನು ಕಾಣಲು ಸಾಧ್ಯವಾಗುತ್ತಿಲ್ಲ ಎಂದು ಹೇಳಿದರು.

ಈ ಮೊದಲು ವಿಧಾನ ಪರಿಷತ್‌ಗೆ ವಿಷಯ ತಜ್ಞರನ್ನು ಆಯ್ಕೆ ಮಾಡಲಾಗುತ್ತಿತ್ತು. ವಿಧಾನಸಭೆಯಲ್ಲಿ ಅನುಮೋದನೆಗೊಂಡ ಕಾಯ್ದೆಗಳ ಬಗ್ಗೆ ಮೇಲ್ಮನೆ ವಿಧಾನ ಪರಿಷತ್‌ನಲ್ಲಿ ಸಮಗ್ರವಾಗಿ ಚರ್ಚೆ ಆಗುತ್ತಿತ್ತು. ವಿಷಯ ತಜ್ಞರು ಚರ್ಚೆ ಮಾಡಿ ಕಾಯ್ದೆಯ ಲೋಪಗಳನ್ನು ಉಲ್ಲೇಖಿಸುತ್ತಿದ್ದರು. ಆದರೆ ಈಗ ವಿಧಾನ ಪರಿಷತ್‌ಗೆ ಆಯ್ಕೆ ಆಗುತ್ತಿರುವವರು ಯಾರು ಎಂಬ ವಿಚಾರ ಓಪನ್ ಸಿಕ್ರೇಟ್ ಆಗಿದೆ. ಇದರಿಂದ ವಿಧಾನಪರಿಷತ್‌ನಲ್ಲಿ ವಿಷಯ ತಜ್ಞರಿಲ್ಲದೆ ಚರ್ಚೆಗಳೇ ಆಗುತ್ತಿಲ್ಲ ಎಂದು ಜಿ.ಟಿ.ದೇವೇಗೌಡರು ಬೇಸರ ವ್ಯಕ್ತಪಡಿಸಿದರು.

ಒಡೆದು ಆಳುವ ತೀರ್ಮಾನ: ಇದೇ ವೇಳೆ 'ಮೀಸಲು ಕ್ಷೇತ್ರದ ರಾಜಕಾರಣ' ಕುರಿತು ಮಾತನಾಡಿದ ಶಾಸಕ ಎ.ಆರ್. ಕೃಷ್ಣಮೂರ್ತಿ, ಒಳ ಮೀಸಲಾತಿಯಿಂದ ಪರಿಶಿಷ್ಟ ಜಾತಿಯಲ್ಲೇ ಒಡೆದು ಆಳುವ ತೀರ್ಮಾನವಾಗುತ್ತಿದೆ. ಆದರೆ ಪರಿಶಿಷ್ಟ ಜಾತಿ ಪಟ್ಟಿಯಲ್ಲಿರುವ 101 ಪಂಗಡದವರ ಅರಿವಿಗೆ ಬರುತ್ತಿಲ್ಲ ಎಂದರು.



ಒಳ ಮೀಸಲಾತಿ ಕಲ್ಪಿಸುವುದು ಜೇನು ಗೂಡಿಗೆ ಕೈ ಹಾಕಿದಂತೆ. ಈ ಸಮಸ್ಯೆ ಇಂದಿಗೆ ಪರಿಹಾರ ಆಗುವುದಿಲ್ಲ. ಇತರೆ ಜಾತಿಗಳಲ್ಲಿರುವ ಒಳ ಪಂಗಡದವರನ್ನು ಸುತ್ತಿಕೊಂಡು ಅವರನ್ನು ಇದು ಕಚ್ಚುತ್ತದೆ ಎಂದು ಎಚ್ಚರಿಸಿದರು.

ಕರ್ನಾಟಕ ಸೇರಿದಂತೆ ದೇಶದ ಹಲವು ರಾಜ್ಯಗಳಲ್ಲಿ ಇನ್ನೂ ಕೂಡ ದಲಿತರಿಗೆ ಮುಖ್ಯಮಂತ್ರಿ ಸ್ಥಾನ ದೊರೆತಿಲ್ಲ. ಇದನ್ನು ದಲಿತ ಸಮುದಾಯದವರು ಅರ್ಥ ಮಾಡಿಕೊಳ್ಳಬೇಕು ಎಂದು ಕೃಷ್ಣಮೂರ್ತಿ ಹೇಳಿದರು.



ಮೈಸೂರಿನ ಕರಾಮುವಿಯ ಕಾವೇರಿ ಸಭಾಂಗಣದಲ್ಲಿ ನಡೆದ ಕರ್ನಾಟಕ ರಾಜ್ಯ ರಾಜ್ಯಶಾಸ್ತ್ರ ಅಧ್ಯಾಪಕರ ಸಂಘದ 21ನೇ ಮಹಾ ಸಮ್ಮೇಳನ ಹಾಗೂ ರಜತ ಮಹೋತ್ಸವದಲ್ಲಿ ಶಾಸಕ ಜಿ.ಟಿ.ದೇವೇಗೌಡರು 'ಚುನಾವಣಾ ರಾಜಕಾರಣ' ಕುರಿತು ಮಾತನಾಡಿದರು.

ವಿಧಾನಸಭೆಯ ಕಲಾಪ ಪ್ರಲಾಪವಾಗುತ್ತಿದೆ!

ಇದೇ ವೇಳೆ 'ಸದನದ ಕಾರ್ಯಕಲಾಪಗಳು' ಕುರಿತು ಮಾತನಾಡಿದ ಹಿರಿಯ ಶಾಸಕ ಎಸ್.ಸುರೇಶ್ ಕುಮಾರ್, ವಿಧಾನಸಭೆಯ ಕಲಾಪದ ಗುಣಮಟ್ಟ ಕುಸಿಯುತ್ತಿದ್ದು, ಕಲಾಪ ಪ್ರಲಾಪವಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.


ಎಸ್.ಸುರೇಶ್ ಕುಮಾರ್

ವಿಧಾನಸಭೆಯ ಅಧಿವೇಶನದಲ್ಲಿ ಸರ್ಕಾರದಿಂದ ಉತ್ತರ ಸಿಗುತ್ತಿದೆಯೇ ಹೊರತು ನ್ಯಾಯ ಸಿಗುತ್ತಿಲ್ಲ. ಆದ ಕಾರಣ ಕಲಾಪದಲ್ಲಿ ಪಾಲ್ಗೊಳ್ಳುವುದಕ್ಕಿಂತ ಕ್ಷೇತ್ರದ ಜನರ ಮದುವೆ ಸೇರಿದಂತೆ ಇತರೆ ಸಮಾರಂಭದಲ್ಲಿ ಭಾಗಿಯಾದರೆ ಹೆಚ್ಚು ಮತ ಬರುತ್ತದೆ ಎಂಬ ಮನೋಭಾವ ಶಾಸಕರಲ್ಲಿದೆ. ದಿನೇ ದಿನೆ ಕಲಾಪದ ಗುಣಮಟ್ಟ ಕುಸಿಯುತ್ತಿದೆ ಎಂದು ಹೇಳಿದರು.

ಸದನದಲ್ಲಿ ಪಾಸಿಟಿವ್‌ಗಿಂತ ನೆಗೆಟಿವ್ ಮಾತುಗಳಿಗೆ ಹೆಚ್ಚು ಪ್ರಚಾರ ದೊರೆಯುತ್ತಿದೆ. ಬಾವಿಗಿಳಿದು ಪ್ರತಿಭಟನೆ ಮಾಡಿದರೆ ಪ್ರಚಾರ ಗಿಟ್ಟಿಸಬಹುದು ಎಂಬ ಪರಿಸ್ಥಿತಿ ನಿರ್ಮಾಣವಾಗಿದೆ. ಇದರಿಂದ ಗಂಭೀರ ಚರ್ಚೆಗಳು ತೆರೆಮರೆಗೆ ಸರಿಯುತ್ತಿದ್ದು, ಜನ ಸಾಮಾನ್ಯರ ಸಮಸ್ಯೆಗಳ ಬಗ್ಗೆ ಚರ್ಚೆಗಳು ನಡೆಯುತ್ತಿಲ್ಲ ಎಂದು ಸುರೇಶ್‌ಕುಮಾರ್ ಹೇಳಿದರು.

ವಿಧಾನಸಭೆಗೆ ನಂಬರ್ಸ್‌ಗಳು ಆಯ್ಕೆಯಾಗುತ್ತಿದೆಯೇ ಹೊರತು ಸಮರ್ಥ ಮೆಂಬರ್ಸ್ ಆಯ್ಕೆಗೊಳ್ಳುತ್ತಿಲ್ಲ. ಯಾವತ್ತು ಸಮರ್ಥ ಮೆಂಬರ್ಸ್ ಆಯ್ಕೆಯಾಗುತ್ತಾರೋ ಅಂದು ವಿಧಾನಸಭೆಯ ಕಲಾಪಕ್ಕೆ ಮೌಲ್ಯ ಬರುತ್ತದೆ ಎಂದರು.

ಇತ್ತೀಚೆಗೆ ಸದನದಲ್ಲಿ ಗ್ರೇಟರ್ ಬೆಂಗಳೂರು ಬಗ್ಗೆ ಚರ್ಚೆ ನಡೆಯುತ್ತಿತ್ತು. ಇದರ ಮಧ್ಯೆ ಚಿನ್ನಸ್ವಾಮಿ ಸ್ಟೇಡಿಯಂ ಬಗ್ಗೆ ಚರ್ಚೆ ಮಾಡುವಾಗ ಐಪಿಎಲ್ ವಿಚಾರ ಚರ್ಚಾ ವಿಷಯವಾಯಿತು. ಆ ವೇಳೆ ಗ್ರೇಟರ್ ಬೆಂಗಳೂರು ಕುರಿತ ಗಂಭೀರ ಚರ್ಚೆ ಮರೆಯಾಗಿ, ಶಾಸಕರಿಗೆ ಐಪಿಎಲ್ ನೋಡಲು ಟಿಕೆಟ್ ನೀಡುವ ವಿಚಾರ ಹೆಚ್ಚು ಚರ್ಚೆಗೆ ಗ್ರಾಸವಾಯಿತು. ನಂತರ ಐಪಿಎಲ್ ಮ್ಯಾಚ್ ನಡೆಯುವ ಚಿನ್ನಸ್ವಾಮಿ ಸ್ಟೇಡಿಯಂಗೆ ವಿಧಾನಸಭೆ ಕಲಾಪ ಸ್ಥಳಾಂತರ ಮಾಡಿದರೆ ಹೇಗೆ ಎಂಬ ಪ್ರಶ್ನೆ ಮೂಡಿತು ಎಂದರು. ಈ ಹಿನ್ನೆಲೆಯಲ್ಲಿ ಮೌಲ್ಯಾಧಾರಿತ ರಾಜಕಾರಣಿಗಳು ವಿಧಾನಸಭೆಗೆ ಆಯ್ಕೆಗೊಳ್ಳಬೇಕು. ಆಗ ಸದನದ ಕಲಾಪದ ಗುಣಮಟ್ಟ ಹೆಚ್ಚುತ್ತದೆ ಎಂದರು.

ಮೈನಿಂಗ್, ರಿಯಲ್ ಎಸ್ಟೇಟ್‌ನವರಿಂದ ಪ್ರಜಾಪ್ರಭುತ್ವ ಕೊಚ್ಚಿ ಹೋಗಿದೆ!

ಮೈಸೂರು: 2008ರಲ್ಲಿ ಮೈನಿಂಗ್ ಹಾಗೂ ರಿಯಲ್ ಎಸ್ಟೇಟ್ ನವರು ವಿಧಾನಸಭೆ ಪ್ರವೇಶಿಸಿದಾಗ ಪ್ರಜಾಪ್ರಭುತ್ವ ಕೊಚ್ಚಿಕೊಂಡು ಹೋಯಿತು ಎಂದು ಶಾಸಕ ಜಿ.ಟಿ.ದೇವೇಗೌಡರು ಬೇಸರ ವ್ಯಕ್ತಪಡಿಸಿದರು.

ಈ ಮೊದಲು ಚುನಾವಣೆಯಲ್ಲಿ ಬೂತ್ ಖರ್ಚಿಗಾಗಿ ನೂರು ರೂಪಾಯಿ ನೀಡುತ್ತಿದ್ದೆವು. ತರುವಾಯ 500 ಆಯಿತು, ತದ ನಂತರ ಸಾವಿರವಾಯಿತು. ಆದರೆ ಈಗ ಲಕ್ಷ ಕೊಟ್ಟರೂ ಸಾಲುವುದಿಲ್ಲ ಎಂಬ ಪರಿಸ್ಥಿತಿ ನಿರ್ಮಾಣವಾಗಿದೆ. ಹಣ ಹಾಗೂ ಜಾತಿ ಬಲ ಇದ್ದವರಿಗೆ ಮಾತ್ರವೇ ಚುನಾವಣೆಯಲ್ಲಿ ಸ್ಪರ್ಧೆ ಮಾಡಲು ಸಾಧ್ಯವಾಗಿದೆ ಎಂದರು.

ಉದಾರಿಕರಣದಿಂದ ಖಾಸಗಿ ಕಂಪನಿಗಳು ಲಗ್ಗೆ ಇಟ್ಟವು. ಇವುಗಳ ಅನುಕೂಲಕ್ಕೆ ತಕ್ಕಂತೆ ಕಾನೂನುಗಳು ಮಾರ್ಪಾಡುಗೊಂಡಿತು ಎಂದರು. ಕುಟುಂಬ ರಾಜಕಾರಣ ಮುಕ್ತಗೊಳಿಸಿ, ಹಣ ಬಲವಿಲ್ಲದ ಸಣ್ಣ ಸಮುದಾಯದವರಿಗೂ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವಕಾಶ ಕಲ್ಪಿಸುತ್ತಿದ್ದಾರೆ. ಸಣ್ಣ ಜಾತಿಯ ಬಹಳಷ್ಟು ರಾಜಕಾರಣಿಗಳನ್ನು ಗುರುತಿಸಿ ಈಗಾಗಲೇ ಮುಖ್ಯಮಂತ್ರಿ ಮಾಡಿದ್ದಾರೆ ಎಂದು ಜಿ.ಟಿ. ದೇವೇಗೌಡರು ಪ್ರಶಂಸೆ ವ್ಯಕ್ತಪಡಿಸಿದರು. ಹಣ, ಜಾತಿಗೆ ಬೆಲೆ ಕೊಡದೆ ರಾಜಕಾರಣವನ್ನು ಸರಿಯಾದ ದಿಕ್ಕಿಗೆ ತರಲು ಮೋದಿ ಅವರು ಪ್ರಯತ್ನ ಮಾಡುತ್ತಿದ್ದು, ರಾಜ್ಯ ಹಾಗೂ ದೇಶದಲ್ಲಿ ಮೋದಿ ಅವರಂತಹ ಮಾದರಿ ರಾಜಕಾರಣಿಗಳು ಬರಬೇಕು ಎಂದು ಅಭಿಪ್ರಾಯಪಟ್ಟರು.

ನಾನು ಕಳೆದ 24 ವರ್ಷದಿಂದ ಸಹಕಾರ ಮಹಾ ಮಂಡಲದಲ್ಲಿ ಇದ್ದೇನೆ. ಕರ್ನಾಟಕದ 30 ಸಹಕಾರ ಯೂನಿಯನ್‌ನಲ್ಲಿ ಒಬ್ಬನೆ ಒಬ್ಬ ದಲಿತ ಅಧ್ಯಕ್ಷನಾಗಿರಲಿಲ್ಲ. ನಾನು ನನ್ನ ಅಧ್ಯಕ್ಷ ಸ್ಥಾನವನ್ನು ತ್ಯಾಗ ಮಾಡಿ ದಲಿತನೊಬ್ಬನನ್ನು ಸಹಕಾರ ಯೂನಿಯನ್ ಅಧ್ಯಕ್ಷನನ್ನಾಗಿ ಮಾಡಿದೆ. ನನ್ನ ಈ ಮನೋಧರ್ಮ ಅರಿಯದ ಕೆಲವರು ನನ್ನನ್ನು ದಲಿತ ವಿರೋಧಿ ಎಂದು ಬಿಂಬಿಸಿದರು ಎಂದು ಶಾಸಕ ಜಿ.ಟಿ.ದೇವೇಗೌಡರು ನೋವು ತೋಡಿಕೊಂಡರು.

ಖಾಸಗಿ ಬಸ್ ಚಾಲಕನ ಅಚಾತುರ್ಯ; ಮೂರು ಬಸ್‌ಗಳ ನಡುವೆ ಸರಣಿ ಅಪಘಾತ

ಮೈಸೂರು, ಏ.25(ಎಂಟಿವೈ)– ಪ್ರಯಾಣಿಕರನ್ನು ಹತ್ತಿಸಿಕೊಳ್ಳುವ ಭರದಲ್ಲಿ ವೇಗವಾಗಿ ಚಲಿಸುತ್ತಿದ್ದ ಖಾಸಗಿ ಬಸ್ ಹಠಾತ್ ಬ್ರೇಕ್ ಹಾಕಿದ ಪರಿಣಾಮ ಸಾರಿಗೆ ಸಂಸ್ಥೆಯ ಎರಡು ಸೇರಿದಂತೆ ಮೂರು ಬಸ್‌ಗಳ ನಡುವೆ ಸರಣಿ ಅಪಘಾತ ಸಂಭವಿಸಿದ್ದು, ಅದೃಷ್ಟವಶಾತ್ ಯಾರಿಗೂ ತೊಂದರೆಯಾಗಿಲ್ಲ.

ಮೈಸೂರು–ತಿ.ನರಸೀಪುರ ರಸ್ತೆಯಲ್ಲಿ ಆಲನಹಳ್ಳಿ ಬಳಿ ಈ ಅಪಘಾತವಾಗಿದ್ದು, ಮೂರು ಬಸ್‌ಗಳಿಗೂ ಹಾನಿಯಾಗಿದೆ. ಶನಿವಾರ ಬೆಳಗ್ಗೆ ಮೂರು ಬಸ್‌ಗಳು ಒಂದರ ಹಿಂದೆ ಒಂದರಂತೆ ತಿ.ನರಸೀಪುರದ ಕಡೆಯಿಂದ ಮೈಸೂರಿಗೆ ಬರುತ್ತಿದ್ದವು. ರಿಂಗ್ ರಸ್ತೆ ದಾಟಿದ ಬಳಿಕ ಮುಂದೆ ಚಲಿಸುತ್ತಿದ್ದ ಖಾಸಗಿ ಬಸ್ ಚಾಲಕ ಪ್ರಯಾಣಿಕರನ್ನು ಹತ್ತಿಸಿಕೊಳ್ಳುವುದಕ್ಕಾಗಿ ಹಠಾತ್ತನೆ ಬ್ರೇಕ್ ಹಾಕಿದ್ದಾನೆ. ಈ ವೇಳೆ ಹಿಂದೆ ಬರುತ್ತಿದ್ದ ನಗರ ಸಾರಿಗೆ ಬಸ್ ಚಾಲಕ ಡಿಕ್ಕಿ ಅದಕ್ಕೆ ಹೊಡೆಯುವುದನ್ನು ತಪ್ಪಿಸಲು ಬ್ರೇಕ್ ಹಾಕಿದ್ದಾರೆ.



ಅಷ್ಟರಲ್ಲಾಗಲೇ ಕೊಳ್ಳೇಗಾಲದಿಂದ ಬರುತ್ತಿದ್ದ ಗ್ರಾಮಾಂತರ ಸಾರಿಗೆ ಬಸ್ ಸಿಟಿ ಬಸ್‌ಗೆ ಹಿಂಬದಿಯಿಂದ ಡಿಕ್ಕಿ ಹೊಡೆದಿದೆ. ಡಿಕ್ಕಿಯ ತೀವ್ರತೆಗೆ ಮಧ್ಯ ಇದ್ದ ಸಿಟಿ ಬಸ್ ಮುಂದೆ ನಿಂತಿದ್ದ ಖಾಸಗಿ ಬಸ್‌ಗೆ ಅಪ್ಪಳಿಸಿದೆ.

ಈ ಘಟನೆಯಿಂದ ಮೂರು ಬಸ್‌ಗಳಿಗೂ ಸಣ್ಣ ಪ್ರಮಾಣದ ಹಾನಿಯಾಗಿದೆ. ಈ ನಡುವೆ ಬಸ್‌ಗಳ ಚಾಲಕರು ಪರಸ್ಪರ ವಾಗ್ವಾದ ನಡೆಸಿದ್ದು, ಅಂತಿಮವಾಗಿ ರಾಜೀ ಮಾಡಿಕೊಂಡಿದ್ದಾರೆ. ಈ ಸಂಬಂಧ ಯಾವುದೇ ದೂರು ದಾಖಲಾಗಿಲ್ಲ.

ಕಟ್ಟುನಿಟ್ಟಿನ ಸೂಚನೆ ನೀಡಬೇಕು

ಕೊಳ್ಳೇಗಾಲ, ತಿ.ನರಸೀಪುರದ ಕಡೆ ಸಂಚರಿಸುವ ಖಾಸಗಿ ಬಸ್‌ಗಳ ಚಾಲಕರು ಮಿತಿ ಮೀರಿದ ವೇಗದಲ್ಲಿ ಚಾಲನೆ ಮಾಡಲಿದ್ದು, ಪ್ರಯಾಣಿಕರನ್ನು ಹತ್ತಿಸಿಕೊಳ್ಳಲು, ಇಳಿಸಲು ಹಠಾತ್ತನೇ ಬ್ರೇಕ್ ಹಾಕಿ ರಸ್ತೆ ಮಧ್ಯೆಯೇ ನಿಲ್ಲಿಸುತ್ತಿದ್ದಾರೆ. ಇದರಿಂದ ಹಿಂದೆ ಬರುವ ವಾಹನ ಸವಾರರಿಗೆ ತೊಂದರೆಯಾಗುತ್ತಿದ್ದು, ಜೀವ ಹಾನಿ ಸಂಭವಿಸುವ ಮುನ್ನ ಖಾಸಗಿ ಬಸ್‌ಗಳ ಚಾಲಕರಿಗೆ ಕಟ್ಟುನಿಟ್ಟಿನ ಸೂಚನೆ ನೀಡಬೇಕು. ಮೈಸೂರು ನಗರ ವ್ಯಾಪ್ತಿಯಲ್ಲಿ ವೇಗದ ಮಿತಿಯಲ್ಲಿ ಸಂಚರಿಸಬೇಕೆಂಬ ನಿಯಮವಿದ್ದರೂ, ಖಾಸಗಿ ಬಸ್‌ಗಳು ವೇಗವಾಗಿ ಚಾಲನೆ ಮಾಡುತ್ತ ಅಮಾಯಕರ ಜೀವದೊಂದಿಗೆ ಚೆಲ್ಲಾಟವಾಡುತ್ತಿದ್ದಾರೆ. ದ್ವಿಚಕ್ರ ವಾಹನಗಳ ತಪಾಸಣೆಯಲ್ಲಿ ತೊಡಗುವ ಸಂಚಾರ ಪೊಲೀಸರು ಖಾಸಗಿ ಬಸ್‌ಗಳ ಮಿತಿ ಮೀರಿದ ವೇಗಕ್ಕೆ ಕಡಿವಾಣ ಹಾಕಿ ಸುರಕ್ಷಿತವಾಗಿ ಬಸ್ ನಿಲ್ಲಿಸುವಂತೆ ಬಸ್ ಬೇ ಮಾರ್ಕ್ ಮಾಡಬೇಕು. ನಿಯಮ ಉಲ್ಲಂಘಿಸಿದ ಬಸ್ ಚಾಲಕರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಮಗಳ ಫೋಟೋ ಅಶ್ಲೀಲಗೊಳಿಸಿ ಇ–ಮೇಲ್ ಮಾಡಿ ಕಿರುಕುಳ

ವೈದ್ಯನಿಂದ ಸೆನ್ ಠಾಣೆಗೆ ದೂರು

ಮೈಸೂರು, ಏ.25(ಜಿಎ)–ತಂತ್ರಜ್ಞಾನ ಬಳಸಿಕೊಂಡು ಮಗಳ ಫೋಟೋಗಳನ್ನು ಅಶ್ಲೀಲಗೊಳಿಸಿ ಇ–ಮೇಲ್ ಮೂಲಕ ರವಾನಿಸಿ ತೊಂದರೆ ಕೊಡುತ್ತಿದ್ದಾರೆ ಎಂದು ವೈದ್ಯರೊಬ್ಬರು ಸೆನ್ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದಾರೆ.

2025ರ ಡಿ.21ರಂದು ಖಾಸಗಿ ವ್ಯಕ್ತಿಯ ಇಮೇಲ್ ಐಡಿ ಮೂಲಕ ನನ್ನ ಇಮೇಲ್ ಐಡಿ, ಮಗಳ ಐಡಿ ಹಾಗೂ ಅಳಿಯನ ಐಡಿಗೂ ಸೇರಿದಂತೆ ಇತರರ ಐಡಿಗಳಿಗೆ ಮಗಳಿಗೆ ಸಂಬಂಧಿಸಿದ ಪೋಟೋಗಳನ್ನು ಅಶ್ಲೀಲಗೊಳಿಸಿ ಕಳುಹಿಸಿದ್ದಾರೆ. ನಂತರ ಏ.3ರಂದು ಅದೇ ಫೋಟೋಗಳನ್ನು ಅದೇ ಇ–ಮೇಲ್ ಐಡಿ ಮೂಲಕ ಮೈಸೂರಿನ ಪ್ರತಿಷ್ಠಿತ ಖಾಸಗಿ ವಿವಿಗೆ ಹಾಗೂ ಮಗಳಿಗೂ ಕಳಿಸಿದ್ದು, ಈ ಸಂಬಂಧ ಮಗಳ ಬಳಿ ವಿಚಾರಿಸಿದಾಗ 2020ರಲ್ಲಿ ಓರ್ವನಿಗೆ ಇ ಮೇಲ್ ಮೂಲಕ ಫೋಟೋಗಳನ್ನು ಕಳುಹಿಸಿರುವ ಬಗ್ಗೆ ಮಾಹಿತಿ ನೀಡಿದ್ದಾರೆ. ಆದರೆ, ಆ ವ್ಯಕ್ತಿ ಈಗ ಎಲ್ಲರಿಗೂ ಈ ಫೋಟೋಗಳನ್ನು ಕಳುಹಿಸಿ ತೊಂದರೆ ಕೊಡುತ್ತಿದ್ದಾನೆ ಎಂದು ದೂರು ಸಲ್ಲಿಸಿದ್ದಾರೆ. ಈ ಸಂಬಂಧ ಸೆನ್ ಪೊಲೀಸರು ಪ್ರಕರಣವನ್ನು ದಾಖಲಿಸಿಕೊಂಡಿದ್ದಾರೆ.

ಭಗೀರಥ ಜಯಂತಿ


ಮೈಸೂರಿನ ಸರ್ ಎಂ ವಿಶ್ವೇಶ್ವರಯ್ಯ ನಲ್ಲಿ ಮತ್ತು ಒಳಚರಂಡಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಸಂಘದ ಕಛೇರಿಯಲ್ಲಿ ಶ್ರೀ ಭಗೀರಥ ಮಹರ್ಷಿ ಜಯಂತಿ ಆಚರಿಸಲಾಯಿತು. ಅಧ್ಯಕ್ಷ : ಮಹೇಶ್, ಉಪಾಧ್ಯಕ್ಷ : ಸುರೇಶ್ ಕುಮಾರ್, ಖಜಾಂಚಿ: ರವಿಕುಮಾರ್ ನಿರ್ದೇಶಕರಾದ : ಚಂದ್ರೇಗೌಡ, ಕುಮಾರ್ ಜಯನಗರ, ಕುಮಾರ್ ಬೋಗಾದಿ , ದಿನೇಶ್, ಯೋಗೇಶ್ ಜಯನಗರ ಉಪಸ್ಥಿತರಿದ್ದರು.

ಬೇಸಿಗೆ ಶಿಬಿರದಲ್ಲಿ ಹೊಸ ವಿಷಯ ಕಲಿಕೆಗೆ ಅವಕಾಶ

ಮಾಜಿ ಸಂಸದ ಪ್ರತಾಪ್ ಸಿಂಹ ಅಭಿಪ್ರಾಯ

ಮೈಸೂರು, ಏ.25(ಬಿಎಲ್ ಯು)– ಬೇಸಿಗೆ ಶಿಬಿರದಿಂದ ಹೊಸ ವಿಷಯ ಕಲಿಯಲು ಹಾಗೂ ಆತ್ಮ ವಿಶ್ವಾಸ ವೃದ್ಧಿಸಿಕೊಳ್ಳಲು ಮಕ್ಕಳಿಗೆ ಅವಕಾಶವಿರುತ್ತದೆ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಅಭಿಪ್ರಾಯಪಟ್ಟರು.

ಮೈಸೂರಿನ ಬಸವಮಾರ್ಗ ಫೌಂಡೇಷನ್‌ನಿಂದ ಆಯೋಜಿಸಿರುವ ಒಂದು ತಿಂಗಳ ವಸತಿ ಸಹಿತ ಬೇಸಿಗೆ ಶಿಬಿರಕ್ಕೆ ಭೇಟಿ ನೀಡಿ ಮಾತನಾಡಿದ ಅವರು, ಮಕ್ಕಳು ವರ್ಷವಿಡೀ ಓದಿನಲ್ಲಿ ಮಗ್ನರಾಗಿರುತ್ತಾರೆ. ಬೇಸಿಗೆ ಶಿಬಿರದಲ್ಲಿ ಪಾಲ್ಗೊಂಡಾಗ ಕಲೆ, ಕರಕುಶಲ, ನೃತ್ಯ, ಸಂಗೀತದಂತಹ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗಿಯಾಗಲು ಸಹಕಾರಿಯಾಗುತ್ತದೆ ಎಂದು ಹೇಳಿದರು.

ಈ ಮೂಲಕ ಬೇಸಿಗೆ ಶಿಬಿರಗಳು ಮಕ್ಕಳಲ್ಲಿರುವ ಸುಪ್ತ ಪ್ರತಿಭೆ ಹೊರ ತರುವ ಹಾಗೂ ಲವಲವಿಕೆ ಹೆಚ್ಚಿಸಲು ಸಹಕಾರಿಯಾಗುತ್ತದೆ ಎಂದು ಪ್ರತಾಪ್ ಸಿಂಹ ಅಭಿಪ್ರಾಯ ವ್ಯಕ್ತಪಡಿಸಿದರು.

ಇದೇ ವೇಳೆ ಮಾತನಾಡಿದ ಬಸವ ಮಾರ್ಗ ಫೌಂಡೇಷನ್ ಅಧ್ಯಕ್ಷ ಎಸ್.ಬಸವ ರಾಜು, ಒಂದು ತಿಂಗಳ ಕಾಲ ನಡೆಯುವ ಈ ಶಿಬಿರದಲ್ಲಿ ಮೈಸೂರು ಮಾತ್ರವಲ್ಲದೆ ರಾಜ್ಯದ ನಾನಾ ಜಿಲ್ಲೆಗಳಿಂದ ಮಕ್ಕಳು ಆಗಮಿಸಿದ್ದಾರೆ. ಮೊಬೈಲ್‌ನಲ್ಲಿ ತಲ್ಲೀನರಾಗಿ ಸಮಯ ವ್ಯರ್ಥ ಆಗುವುದನ್ನು ತಡೆಗಟ್ಟಲು ಈ ಶಿಬಿರ ಸಹಕಾರಿಯಾಗಿದೆ ಎಂದರು.

ಮೊಬೈಲ್ ಅಡಿಕ್ಷನ್ ಕುರಿತ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ಮಕ್ಕಳಿಗೆ ಬಹುಮಾನವಾಗಿ ಗೇರ್ ಸೈಕಲ್ ಹಾಗೂ ಸ್ಮಾರ್ಟ್ ವಾಚ್ ನೀಡಲಾಯಿತು. ಚಿತ್ರ ನಿರ್ಮಾಪಕ ರಮೇಶ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.


ಮೈಸೂರಿನ ಬಸವಮಾರ್ಗದಲ್ಲಿ ಆಯೋಜಿಸಿರುವ ಬೇಸಿಗೆ ಶಿಬಿರದಲ್ಲಿ ಮೊಬೈಲ್ ಅಡಿಕ್ಷನ್ ಕುರಿತ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗೆ ಮಾಜಿ ಸಂಸದ ಪ್ರತಾಪ್ ಸಿಂಹ ಅವರು ಗೇರ್ ಸೈಕಲ್ ಅನ್ನು ಬಹುಮಾನವಾಗಿ ನೀಡಿದರು.

ರಾಜ್‌ಕುಮಾರ್ ಪುತ್ಥಳಿಗೆ ಮಾಲಾರ್ಪಣೆ


ಡಾ.ರಾಜ್ ಕುಮಾರ್ ರವರ ಜನ್ಮದಿನಾಚರಣೆ ಪ್ರಯುಕ್ತ ಮೈಸೂರು ಪುನೀತ್ ರಾಜ್ ಕುಮಾರ್ ಬಳಗದ ವತಿಯಿಂದ ಮೈಸೂರು ಕುಪ್ಪಣ್ಣ ಪಾರ್ಕ್ ಬಳಿಯ ರಾಜ್‌ಕುಮಾರ್ ಪುತ್ಥಳಿಗೆ ಮಾಲಾರ್ಪಣೆ ಮಾಡಿದರು. ಪುನೀತ್ ರಾಜ್‌ಕುಮಾರ್ ಸಂಘದ ಅಧ್ಯಕ್ಷ ರಾಜು, ಸಮಾಜ ಸೇವಕ ಎಸ್.ಶ್ರೀಕಾಂತ್, ಧನಂಜಯ್, ಮಹದೇವಸ್ವಾಮಿ, ರವಿ, ರಂಗಸ್ವಾಮಿ, ಗೋವಿಂದರಾಜು ಇತರರು ಹಾಜರಿದ್ದರು.

ಸರಸ್ವತಿ ನಾಗರಾಜ್ 605 ಅಂಕ

ಮೈಸೂರು: 2025–26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಸರಸ್ವತಿ ನಾಗರಾಜ್ 625ಕ್ಕೆ 605 ಅಂಕ ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ.



ಈಕೆ ಪಿರಿಯಾಪಟ್ಟಣ ತಾಲೂಕು ಬೆಟ್ಟದಪುರ ಹೋಬಳಿಯ ಚಿಕ್ಕನೇರಳೆ ಸಂತೇಮಾಳ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ. ಈಕೆ ಲತಾ ಮತ್ತು ನಾಗರಾಜು ದಂಪತಿಯ ಪುತ್ರಿ.

ಇಂದು ವಿದ್ಯುತ್ ವ್ಯತ್ಯಯ

ಮೈಸೂರು: ವಿಜಯನಗರ ವಿದ್ಯುತ್ ವಿತರಣಾ ಕೇಂದ್ರದಿಂದ ವಿಘ್ನೇಶ್ವರ ವಿದ್ಯುತ್ ಮಾರ್ಗದಲ್ಲಿ ಭೂಗತ ಕೇಬಲ್ ಅಳವಡಿಸುವ ಕಾರ್ಯ ನಿಮಿತ್ತ ಏ.26ರಂದು ಬೆಳಗ್ಗೆ 10ರಿಂದ ಸಂಜೆ 5.30ರವರೆಗೆ ಯಾದವಗಿರಿ ಕೈಗಾರಿಕ ಪ್ರದೇಶ, ಮಂಜುನಾಥಪುರ, ಜಾವ ಸರ್ಕಲ್, ಜಾಯ್ ಐಸ್‌ಕ್ರೀಮ್ ಫ್ಯಾಕ್ಟರಿ, ಸುತ್ತಮುತ್ತ ವಿದ್ಯುತ್ ವ್ಯತ್ಯಯವಾಗಲಿದೆ

ಚೆಲುವಾಂಬ ಆಸ್ಪತ್ರೆಯಲ್ಲಿ ಇರುವೆ ಮುತ್ತಿ ಹಸುಳೆ ಸಾವು ಪ್ರಕರಣ

ಮೆಡಿಕಲ್ ಬೋರ್ಡ್‌ಗೆ ಪತ್ರ ಬರೆಯಲು ಪೊಲೀಸರ ನಿರ್ಧಾರ

ಮೈಸೂರು, ಏ.25(ಬಿಎಲ್‌ಯು)– ಮೈಸೂರಿನ ಚೆಲುವಾಂಬ ಆಸ್ಪತ್ರೆಯ ಐಸಿಯುನಲ್ಲಿ ಮೃತಪಟ್ಟ ಹಸುಳೆಯ ಮರಣೋತ್ತರ ಪರೀಕ್ಷೆ ವರದಿ ಬಂದ ನಂತರ ಇದು ವೈದ್ಯರ ನಿರ್ಲಕ್ಷ್ಯವೇ ಎಂಬ ಬಗ್ಗೆ ಅರಿಯಲು ಮೆಡಿಕಲ್ ಬೋರ್ಡ್‌ಗೆ ಪತ್ರ ಬರೆಯಲು ಪೊಲೀಸರು ನಿರ್ಧರಿಸಿದ್ದಾರೆ.

ಚೆಲುವಾಂಬ ಆಸ್ಪತ್ರೆಯಲ್ಲಿ ನೀಲಾ ಎಂಬಾಕೆ ಏಪ್ರಿಲ್ 15 ರಂದು ದಾಖಲಾಗಿ ಅವಧಿ ಪೂರ್ವ ಗಂಡು ಮಗುವಿಗೆ ಜನ್ಮ ನೀಡಿದ್ದರು. ಸುರಕ್ಷತೆ ದೃಷ್ಟಿಯಿಂದ ಐಸಿಯುನಲ್ಲಿ ಮಗುವನ್ನು ದಾಖಲಿಸಲಾಗಿತ್ತು. ಆದರೆ ಮಗುವಿಗೆ ಇರುವೆ ಮುತ್ತಿ ಸಾವನ್ನಪ್ಪಿದೆ ಎಂದು ನೀಲಾ ಅವರು ಮೈಸೂರಿನ ದೇವರಾಜ ಪೊಲೀಸ್ ಠಾಣೆಗೆ ದೂರು ನೀಡಿದ್ದರು.

ಈ ಸಂಬಂಧ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದು, ತನಿಖೆ ಕೈಗೊಂಡಿದ್ದಾರೆ. ಮೃತಪಟ್ಟ ಮಗುವಿನ ಮರಣೋತ್ತರ ಪರೀಕ್ಷೆಯ ವರದಿ ಬಂದ ನಂತರ ಹಸುಳೆ ವೈದ್ಯರ ನಿರ್ಲಕ್ಷ್ಯದಿಂದ ಸಾವನ್ನಪ್ಪಿದೆಯೇ ಎಂದು ತಿಳಿಯಲು ಮೆಡಿಕಲ್ ಬೋರ್ಡ್‌ಗೆ ಪತ್ರ ಬರೆಯಲು ಪೊಲೀಸರು ತೀರ್ಮಾನಿಸಿದ್ದಾರೆ.

ಮೆಡಿಕಲ್ ಬೋರ್ಡ್‌ನವರು ನೀಡುವ ವರದಿ ಆಧಾರದ ಮೇಲೆ ಮುಂದಿನ ಕ್ರಮ ಕೈಗೊಳ್ಳಲು ಪೊಲೀಸರು ನಿರ್ಧರಿಸಿದ್ದಾರೆ.

ಗೂಡ್ಸ್ ವಾಹನ ಚಾಲಕನ ಮೇಲೆ ಏಳು ಮಂದಿಯ ಗುಂಪಿನಿಂದ ಹಲ್ಲೆ

ಮೈಸೂರು, ಏ.25(ಜಿಎ)–ಗೂಡ್ಸ್ ವಾಹನ ಚಾಲಕನ ಮೇಲೆ ಏಳು ಜನ ದುಷ್ಕರ್ಮಿಗಳ ಗುಂಪೊಂದು ತೀವ್ರವಾಗಿ ಹಲ್ಲೆ ನಡೆಸಿ ಹಣವನ್ನು ಕಸಿದು ಪರಾರಿಯಾಗಿರುವ ಘಟನೆ ಸಂಭವಿಸಿದೆ.

ಬೆಳಗಾವಿ ಜಿಲ್ಲೆಯ ಪತ್ರೇಪ್ಪ ಯಲ್ಲಪ್ಪ ವತ್ರ(30) ಹಲ್ಲೆಗೆ ಒಳಗಾದ ವ್ಯಕ್ತಿ. ಗೂಡ್ಸ್ ವಾಹನ ಚಾಲಕನಾದ ಈತ ಏ.24ರ ಸಂಜೆ 7.45ರ ಸುಮಾರಿಗೆ ನಗರದ ಜೆಕೆ ಟೈರ್ಸ್‌ಗೆ ಲೋಡಿಂಗ್‌ಗಾಗಿ ಬಂದಿದ್ದರು. ಈ ವೇಳೆ ಊಟ ಮಾಡಲು ಹೋಗಿ ವಾಪಸ್ ಬರುವಾಗ ಆಟೋ ಮತ್ತು ಗೂಡ್ಸ್ ವಾಹನಕ್ಕೆ ತಾಕಿದ್ದು, ಈ ಸಂದರ್ಭದಲ್ಲಿ ಪತ್ರೇಪ್ಪ ಆಟೋ ಚಾಲಕನಿಗೆ ಮೊದಲು ಹಲ್ಲೆ ಮಾಡಿದ್ದಾನೆ. ಇಬ್ಬರ ನಡುವೆ ಜಗಳವಾಗಿದೆ. ನಂತರ ಹತ್ತಿರದ ಪೊಲೀಸ್ ಠಾಣೆಗೆ ಹೋಗೋಣ ಬಾ ಎಂದು ಆಟೋ ಚಾಲಕ ಕರೆದಿದ್ದು, ಪತ್ರೇಪ್ಪ ಆಟೋ ಹತ್ತಿ ತೆರಳಿದ್ದಾರೆ.

ಮಾರ್ಗ ಮಧ್ಯದಲ್ಲಿಯೇ ಆಟೋ ಚಾಲಕ ತನ್ನ ಸ್ನೇಹಿತರಿಗೆ ಕರೆ ಮಾಡಿ ಕರೆಸಿಕೊಂಡಿದ್ದಾನೆ. ಮೂರು ಆಟೋಗಳಲ್ಲಿ ಇದ್ದ ಏಳು ಜನರು ಯಾದವಗಿರಿಯ ಸಂಕಲ್ಪ ಅಪಾರ್ಟ್‌ಮೆಂಟ್ ಬಳಿಯ ನಿರ್ಜನ ಪ್ರದೇಶಕ್ಕೆ ಕರೆದೊಯ್ದು ತೀವ್ರವಾಗಿ ಹಲ್ಲೆ ನಡೆಸಿದ್ದಾರೆ. ಇದರ ಜತೆಗೆ ಹಣಕ್ಕಾಗಿ ಜೇಬುಗಳನ್ನು ಶೋಧ ಮಾಡಿ ಜೇಬಿನಲ್ಲಿದ್ದ 1300 ರೂ. ನಗದು ಕಸಿದುಕೊಂಡಿದ್ದಾರೆ. ನಂತರ ಪತ್ರೇಪ್ಪರನ್ನು ತಮ್ಮ ಆಟೋದಲ್ಲಿಯೇ ಕೂರಿಸಿಕೊಂಡು ಯಾದವಗಿರಿಯ ಗುರುದ್ವಾರದ ಬಳಿ ಇಳಿಸಿ ಪರಾರಿಯಾಗಿದ್ದಾರೆ.

ಲಾರಿ ಚಾಲಕ ಪತ್ರೇಪ್ಪ ಯಲ್ಲಪ್ಪರಿಗೆ ಎಡಭಾಗದ ಕಣ್ಣು, ಮೂಗಿನ ಎಡಭಾಗ, ಬಲಗೈಗೆ ತೀವ್ರವಾಗಿ ಪೆಟ್ಟಾಗಿದ್ದು, ಸ್ಥಳೀಯ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿದೆ. ಈ ಸಂಬಂಧ ಹೆಬ್ಬಾಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಉನ್ನತ ಶ್ರೇಣಿ



ಮೈಸೂರು, ಏ.25–ಮೈಸೂರಿನ ಸರಸ್ವತಿಪುರಂನಲ್ಲಿರುವ ವಿಜಯ ವಿಠಲ ಕಾಲೇಜಿನ ವಿದ್ಯಾರ್ಥಿ ದೊರೆನಂದನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 602 ಅಂಕ ಪಡೆದುಕೊಂಡು ಅತ್ಯುನ್ನತ್ತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ.

ಈತ ಯುವರಾಜ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಪ್ರೊ.ಸಿ.ಡಿ. ಪರಶುರಾಮ ಮತ್ತು ಜಿ.ಸೌಮ್ಯ ದಂಪತಿಯ ಪುತ್ರ.

ಪ್ರಸ್ತುತ ಸಮಾಜದಲ್ಲಿ ಮಾನವೀಯತೆಗೆ ಬೆಲೆಯಿಲ್ಲ: ಡಾ.ಸಿಪಿಕೆ ವಿಷಾದ

● ಹಿರಿಯ ವಕೀಲ ಎಚ್‌ವಿಎಸ್ ಮೂರ್ತಿ-೮೦ರ ಅಭಿನಂದನೆ ● ಬದುಕು-ಹೋರಾಟದ ಅವಲೋಕನ ಪುಸ್ತಕ ಬಿಡುಗಡೆ

ಮೈಸೂರು, ಏ.25– ಪ್ರಸ್ತುತ ಸಮಾಜದಲ್ಲಿ ಮಾನವೀಯತೆಗೆ ಬೆಲೆಯಿಲ್ಲ ಎಂದು ಹಿರಿಯ ಸಾಹಿತಿ ಪ್ರೊ.ಸಿ.ಪಿ. ಕೃಷ್ಣಕುಮಾರ್ ವಿಷಾದಿಸಿದರು.

ವಿಶ್ವೇಶ್ವರ ನಗರದಲ್ಲಿ ಶನಿವಾರ ಏರ್ಪಡಿಸಿದ್ದ ಹಿರಿಯ ವಕೀಲ ಎಚ್‌ವಿಎಸ್ ಮೂರ್ತಿ ಅವರ 80ನೇ ವರ್ಷದ ಅಭಿನಂದನಾ ಸಮಾರಂಭದಲ್ಲಿ 'ಎಚ್‌ವಿಎಸ್ ಮೂರ್ತಿ ಬದುಕು ಹೋರಾಟದ ಅವಕಲೋಕನ' ಕೃತಿ ಬಿಡುಗಡೆ ಮಾಡಿ ಮಾತನಾಡಿದ ಅವರು, ಇದಲ್ಲದೇ ಪ್ರಸ್ತುತ ಪುಸ್ತಕ, ಸತ್ಯಾಗ್ರಹಗಳಿಗೆ ಬೆಲೆ ಇಲ್ಲದಂತಾಗಿದೆ ಎಂದರು.

ಎಚ್‌ವಿಎಸ್ ಮೂರ್ತಿ ಅವರು, ಜ್ಞಾನ ವೃದ್ಧರು ಹಾಗೂ ತಪೋವೃದ್ಧರೂ ಹೌದು. ಅವರ ನಡೆ– ನುಡಿಯನ್ನು ಸಂಕೇತಿಸುವ ಕೃತಿ ಇದು. ಅವರು ಬದುಕು– ಹೋರಾಟದ ಬಗ್ಗೆ ಕೇಳದವರು ವಿರಳ. ಅಪರೂಪದ ಆತ್ಮೀಯ ಎನಿಸಬಹುದಾದ ಗ್ರಂಥ ಇದಾಗಿದ್ದು, ಅವರು ಬರೆದಿಲ್ಲ. ಆದರೆ ಲಿಪಿಕಾರರ ಮೂಲಕ ಅದನ್ನು ದಾಟಿಸಿದ್ದಾರೆ ಎಂದರು


ಎಚ್‌ವಿಎಸ್ ಮೂರ್ತಿ ಬದುಕು ಹೋರಾಟದ ಅವಲೋಕನ ಕೃತಿಯನ್ನು ಹಿರಿಯ ಸಾಹಿತಿ ಡಾ.ಸಿಪಿಕೆ ಬಿಡುಗಡೆ ಮಾಡಿದರು. ಸ್ವಾಮಿ ಸರ್ವಜಯಾನಂದಜೀ, ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಸ್. ಲೋಕೇಶ್, ಕಾರ್ಯದರ್ಶಿ ಎ.ಜಿ. ಸುಧೀರ್, ರಾಜ್ಯ ಪರಿಷತ್ ಸದಸ್ಯ ಚಂದ್ರಮೌಳಿ, ಜೆಡಿಎಸ್ ನಗರಾಧ್ಯಕ್ಷ ಎಸ್.ಬಿ.ಎಂ.ಮಂಜು, ನಾರಾಯಣರಾವ್, ಯು.ಎನ್. ಪದ್ಮನಾಭರಾವ್ ಇದ್ದಾರೆ.

ಈ ಕೃತಿಯಲ್ಲಿ ಹಿರಿ–ಕಿರಿಯರು ತಿಳಿದುಕೊಳ್ಳಬಹುದಾದ ಸಾಕಷ್ಟು ವಿಷಯಗಳಿವೆ ಸಂದೇಶ ಮತ್ತು ಸೂಕ್ತಿಗಳು ತುಂಬಿ ತುಳುಕುತ್ತಿವೆ. ಮೂರ್ತಿ ಅವರು ಕೃಷಿಯಲ್ಲಿ ಅಪಾರ ಜ್ಞಾನವುಳ್ಳವರು ಮತ್ತು ಶಾರದಾ ನಿಕೇತನದ ಸಂಸ್ಥಾಪಕರಲ್ಲಿ ಒಬ್ಬರು. ಇದೊಂದು ರೀತಿಯಲ್ಲಿ ಆತ್ಮಕತೆ ಇದ್ದಹಾಗೆ. ಕೃಷಿಯ ಮೌಲಿಕತೆಯನ್ನು ಕೃತಿಯಲ್ಲಿ ಹೇಳಿದ್ದಾರೆ ಎಂದು ಅವರು ಹೇಳಿದರು.

ಮಹಾಸಾಧಕರು ಹಾಗೂ ಬೋಧಕರು ಎಂದು ಗುರುತಿಸಬಹುದು. ವಿನಯಶಾಲಿ ನಿಷ್ಠೆ ನಿಸ್ವಾರ್ಥತೆ ಶ್ರದ್ಧೆ ಹಾಗೂ ಪ್ರಯತ್ನದಲ್ಲಿ ಕೇಂದ್ರೀಕರಿಸಿರುತ್ತಾರೆ ಎಂಬ ಪ್ರಕಾಶಕರ ಮಾತು ಸತ್ಯ. ಮೂರ್ತಿ ಅವರ ಬದುಕು ವನಸುಮದಂತೆ ಎಂದು ಸಿಪಿಕೆ ಬಣ್ಣಿಸಿದರು.

ಶ್ರೀ ರಾಮಕೃಷ್ಣ ಆಶ್ರಮದ ಸ್ವಾಮಿ ಸರ್ವಜಯಾನಂದಜಿ ಸಾನ್ನಿಧ್ಯ ವಹಿಸಿದ್ದರು. ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್. ಶ್ರೀವತ್ಸ ಅಧ್ಯಕ್ಷತೆ ವಹಿಸಿದ್ದರು. ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಸ್. ಲೋಕೇಶ್, ಕಾರ್ಯದರ್ಶಿ ಎ.ಜಿ. ಸುಧೀರ್, ರಾಜ್ಯ ಪರಿಷತ್ ಸದಸ್ಯ ಚಂದ್ರಮೌಳಿ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಶಾರದ ವಿಲಾಸ ಶಿಕ್ಷಣ ಸಂಸ್ಥೆ ಮಾಜಿ ಅಧ್ಯಕ್ಷ ಎಸ್. ನಾರಾಯಣ ರಾವ್, ನಂಜನಗೂಡಿನ ಸಮಾಜ ಸೇವಕ ಯು.ಎನ್.ಪದ್ಮನಾಭರಾವ್, ಎಂಕೆಬಿಎಸ್ ಅಧ್ಯಕ್ಷ ವಿಶ್ವನಾಥಯ್ಯ, ನಗರ ಜೆಡಿಎಸ್ ಅಧ್ಯಕ್ಷ ಎಸ್‌ಬಿಎಂ ಮಂಜು, ಪ್ರಕಾಶಕ ಶ್ರೀಧರ್ ಮುಖ್ಯಅತಿಥಿಗಳಾಗಿದ್ದರು.

ನಗರಪಾಲಿಕೆ ಮಾಜಿ ಸದಸ್ಯ ಎಂ.ಸುನಿಲ್ ಸ್ವಾಗತಿಸಿದರು. ಕನ್ನಡ ಚಳವಳಿಗಾರ ಬಿ.ಎ. ಶಿವಶಂಕರ್ ನಿರೂಪಿಸಿದರು. ಎಚ್.ಎಸ್. ವೀಣಾ ಮೂರ್ತಿ ಪ್ರಾಸ್ತಾವಿಕ ಭಾಷಣ ಮಾಡಿದರು. ಎಚ್.ಎಸ್. ವಿದ್ಯಾ ಮೂರ್ತಿ, ಡಾ.ಎಚ್.ಎಸ್. ವಾಣಿ ಮೂರ್ತಿ, ಶ್ರೀನಿಧಿ ಜೋಷಿ, ಎಂಕೆಎಸ್ ಈಶ್ವರ್, ಎಂ.ಎಸ್. ರವೀಂದ್ರ, ಎಚ್.ವಿ. ರವಿಕಾಂತ್, ಸಿ. ಗುರುಸ್ವಾಮಿ, ಶೈಲೇಂದ್ರ ಮೊದಲಾದವರು ಇದ್ದರು.

ಮೈಸೂರು ಕರಗ ಉತ್ಸವ

ಸಾವಿರಾರು ಭಕ್ತರಿಂದ ಮಾರಮ್ಮ, ಚಾಮುಂಡೇಶ್ವರಿಗೆ ವಿಶೇಷ ಪೂಜೆ; ಮಿನಿ ದಸರಾ ಕಣ್ಣಿಗೆ ಕಟ್ಟಿದ ವರ್ಣರಂಜಿತ ಮೆರವಣಿಗೆ





ಮೈಸೂರಿನಲ್ಲಿ ಕರಗ ಮಹೋತ್ಸವ ಮೆರವಣಿಗೆ ಮೈಸೂರಿನ ಬೀದಿ ಬೀದಿಗಳಲ್ಲಿ ವಿಜೃಂಭಣೆಯಿಂದ ನಡೆಯಿತು.

ಮೈಸೂರು, ಏ.25(ವಿವಿಹೆಚ್)– ಸಾಂಸ್ಕೃತಿಕ ನಗರಿ ಮೈಸೂರಿನ 'ಮಿನಿ ದಸರಾ' ಎಂದೇ ಪರಿ ಗಣಿಸಲ್ಪಟ್ಟಿರುವ 'ಮೈಸೂರು ಕರಗ' ಮೆರವಣಿಗೆಯು ಭಕ್ತಿ, ಸಂಭ್ರಮ ಹಾಗೂ ಸಾಂಪ್ರದಾಯಿಕ ವೈಭವದ ನಡುವೆ ಶನಿವಾರ ವಿಜೃಂಭಣೆಯಿಂದ ಜರುಗಿತು. ಸಾವಿರಾರು ಭಕ್ತರು ಹಾಗೂ ಸಾರ್ವಜನಿಕರ ಸಮ್ಮುಖದಲ್ಲಿ ನಡೆದ ಮೆರವಣಿಗೆ ನಗರಕ್ಕೆ ಹಬ್ಬದ ವಾತಾವರಣವನ್ನು ತಂದಿತು. ಮಾರಮ್ಮ, ಚಾಮುಂಡೇಶ್ವರಿ ದೇವಿಯನ್ನು ಕಣ್ತುಂಬಿಕೊಂಡು ಭಕ್ತರು ಪುನೀತರಾದರು.

ನಗರ, ಜಿಲ್ಲೆ, ರಾಜ್ಯದ ನಾನಾ ಭಾಗಗಳಿಂದ ಆಗಮಿಸಿದ್ದ ಭಕ್ತರು ದೇವಾಲಯದ ಆವರಣದಲ್ಲಿ ವಿಶೇಷ ಪೂಜೆ ಸಲ್ಲಿಸಿದರು. ಮುನೇಶ್ವರ ಸ್ವಾಮಿ ದೇವಸ್ಥಾನ, ಶ್ರೀ ಮಾರಮ್ಮನವರ ದೇವಸ್ಥಾನ(ಕರಗ ದೇವಸ್ಥಾನ), ಮಡಿವಾಳ ಮಾಚಿದೇವರ ದೇವಸ್ಥಾನದಲ್ಲಿ ಉತ್ಸವ ಮೂರ್ತಿಗಳಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು. ಬಳಿಕ ಸಂಪ್ರದಾಯಬದ್ಧ ವಿಧಿವಿಧಾನಗಳೊಂದಿಗೆ ರಥದಲ್ಲಿ ಚಾಮುಂಡಿ, ಮಾರಮ್ಮ ದೇವರನ್ನು ಕೂರಿಸಲಾಯಿತು. ಈ ವೇಳೆ ಉದ್ಯಮಿ, ದೇವಸ್ಥಾನದ ಟ್ರಸ್ಟ್ ಅಧ್ಯಕ್ಷ ಸಂದೇಶ್ ನಾಗರಾಜ್ ಪುಷ್ಪಾರ್ಚನೆ ಮಾಡುವ ಮೂಲಕ ಮೆರವಣಿಗೆಗೆ ಚಾಲನೆ ನೀಡಿದರು. ಡೊಳ್ಳು, ನಾದಸ್ವರ, ತಮಟೆ ಹಾಗೂ ವಿವಿಧ ವಾದ್ಯಗಳ ಘೋಷದ ನಡುವೆ ಕರಗ ಸಾಗಿದ ದೃಶ್ಯ ಭಕ್ತರಲ್ಲಿ ಆಧ್ಯಾತ್ಮಿಕ ಭಾವ ಮೂಡಿಸಿತು.

ಈ ವೇಳೆ ಮಾಜಿ ಶಾಸಕ ಎಸ್.ಕೆ.ಸೋಮಶೇಖರ್, ಉಪಾಧ್ಯಕ್ಷ ಟಿ.ನೀಲಕಂಠು, ಕಾರ್ಯದರ್ಶಿಗಳಾದ ಶಿವಪ್ರಕಾಶ್, ಸುಂದರ್, ಜಂಟಿ ಕಾರ್ಯದರ್ಶಿ ಹರೀಶ್ ಕುಮಾರ್, ಖಜಾಂಚಿ ಶಾಂಭವ ಮೂರ್ತಿ ಸೇರಿದಂತೆ ಇಟ್ಟಿಗೆ ಗೂಡಿನ ಮುಖಂಡರು, ಯಜಮಾನರು ಜೊತೆಯಾದರು.

ವರ್ಷಕ್ಕೊಮ್ಮೆ ನಡೆಯುವ ಈ ಕರಗ ಮಹೋತ್ಸವ ಮೈಸೂರಿನ ಸಾಂಸ್ಕೃತಿಕ ಹಾಗೂ ಧಾರ್ಮಿಕ ಪರಂಪರೆಯ ಪ್ರತೀಕವಾಗಿದ್ದು, ಎಲ್ಲ ಸಮುದಾಯದ ಜನರು ಒಗ್ಗಟ್ಟಿನಿಂದ ಭಾಗವಹಿಸುವ ಮೂಲಕ ಸಾಮರಸ್ಯದ ಸಂದೇಶ ಸಾರಿತು.

73 ಅವಿವಾಹಿತರಿಂದ ಕರಗ ಸೇವೆ: ಈ ಬಾರಿ 73 ಮಂದಿ ಅವಿವಾಹಿತ ಪುರುಷರು ಚಾಮುಂಡೇಶ್ವರಿ, ಮಾರಮ್ಮನ ಕರಗ ಮೂರ್ತಿಯನ್ನು ಹೊರುವ ಮೂಲಕ ತಮ್ಮ ಹರಕೆಯನ್ನು ತೀರಿಸಿದರು. ಮೆರವಣಿಗೆಯ ದಿನದಂದು ಯಾವುದೇ ಜಾತಿ–ಭೇದವಿಲ್ಲದೇ ಯಾರೇ ಅವಿವಾಹಿತರು ಕರಗ ಹೊತ್ತು ತಮ್ಮ ಹರಕೆಯನ್ನು ತೀರಿಸಬಹುದಾಗಿದ್ದು, ಅದರಂತೆ ಈ ಬಾರಿ 73 ಮಂದಿ ಕರಗ ಹೊತ್ತು ಸಾಗಿದರು.

ಮೈ ತುಂಬಾ ಹರಿಶಿಣ ಬಳಿದುಕೊಂಡು, ಕಾಲಿಗೆ ಗೆಜ್ಜೆ ಕಟ್ಟಿಕೊಂಡು ತಾಯಿಯ ಉತ್ಸವ ಮೂರ್ತಿಯನ್ನು ಹೊತ್ತು ಸಾಗುವ ಮೂಲಕ ತಾಯಿಯ ಕೃಪೆಗೆ ಪಾತ್ರರಾದರು.

ಚಾಮುಂಡಿ ಮೆರವಣಿಗೆ ರಥದಲ್ಲಿ ಮಹಿಷ: ಕರಗ ಮೆರವಣಿಗೆ ರಥಕ್ಕೆ ಸೂಜಿ ಮಲ್ಲಿಗೆ, ಜಾಜಿ ಮಲ್ಲಿಗೆ, ಗುಲಾಬಿ, ಚೆಂಡು ಹೂ ಸೇರಿದಂತೆ ಬಗೆ ಬಗೆಯ ಹೂವುಗಳಿಂದ ಅಲಂಕಾರ ಮಾಡಲಾಗಿತ್ತು. ಅವುಗಳಿಗೆ ಹೊಂದಾಣಿಕೆಯಾಗುವಂತೆ ತಾವರೆ ಮೊಗ್ಗು, ಕಬ್ಬಿನ ಜಲ್ಲೆ, ಬಾಳೆ ಗೊನೆ, ಅನಾನಸ್ ಹಣ್ಣುಗಳನ್ನು ಅಲ್ಲಲ್ಲಿ ಜೋಡಿಸಲಾಗಿತ್ತು. ಮಲ್ಲಿಗೆ ಹೂಗಳ ಮಧ್ಯದಲ್ಲಿ ಮೈಸೂರು ಮನೆತನದ ಗಂಡಭೇರುಂಡ ಲಾಂಛನವನ್ನು ಜೋಡಿಸಿದ್ದು, ರಥದ ಅಂದವನ್ನು ಮತ್ತಷ್ಟು ಹೆಚ್ಚಿಸಿತು. ರಥದ ಮುಂಭಾಗದ ಎರಡು ಬದಿಗಳಲ್ಲಿ ಮಹಿಷಾಸುರ ಪ್ರತಿಮೆಗಳನ್ನು ನಿಲ್ಲಿಸಿ, ಅವುಗಳನ್ನೂ ಹೂಗಳಿಂದ ಅಲಂಕರಿಸಲಾಗಿದ್ದು, ನೋಡುಗರಿಗೆ ಸಾಮರಸ್ಯ ಭಾವ ಮೂಡುವಂತೆ ರಥವನ್ನು ಸಿಂಗರಿಸಲಾಗಿತ್ತು.



ಮೈಸೂರು ಕರಗ ಉತ್ಸವದಲ್ಲಿ ಮಾಜಿ ಎಂಎಲ್‌ಸಿ ಸಂದೇಶ್ ನಾಗರಾಜ್, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಮಾಜಿ ಮೇಯರ್ ಸಂದೇಶ್ ಸ್ವಾಮಿ, ಚಿತ್ರ ನಿರ್ಮಾಪಕ ಎನ್.ಸಂದೇಶ್, ನಗರ ಪಾಲಿಕೆ ಮಾಜಿ ಸದಸ್ಯ ಸಾತ್ವಿಕ್ ಇತರರು ಉಪಸ್ಥಿತರಿದ್ದರು.

ಕಲಾ ತಂಡಗಳ ಮೆರಗು: ನವೀನ ಪಂಬೈ, ಸಿಲಂಬು, ಉಡಿಕ್ಕ್, ನಾದಸ್ವರ ವಾದ್ಯ, ಬ್ಯಾಂಡ್ ಸೆಟ್, ವೀರಗಾಸೆ, ದೇವರಕುಣಿತ, ಕಂಸಾಳೆ, ಕೊಂಬು, ಕಹಳೆ, ಗಾರುಡ ಗೊಂಬೆ, ಚನ್ನಪಟ್ಟಣ ತಮಟೆ, ಗೊರವನ ಕುಣಿತ, ಕಂಸಾಳೆ, ಕೀಲು ಕುದುರೆ, ಮಂಗಳೂರು ಯಕ್ಷಗಾನ ಕಲಾ ತಂಡ, ಮಂಗಳೂರು ಶೈಲಿಯ ಜಾನಪದ ನೃತ್ಯ, ಕರಗಟ್ಟಂ, ಮಾರಿ ಕುಣಿತ, ನಗಾರಿ, ಬೆಂಗಳೂರಿನ ಶ್ರೀ ಅಂಗಾಳ ಪರಮೇಶ್ವರಿ ಮತ್ತು ಕಾಳಿಕಾದೇವಿ ದೇವಸ್ಥಾನದವರ ತಂಡ, ಡಿಜೆ ಸೇರಿದಂತೆ ಹಲವಾರು ಬಗೆಯ ಕಲಾ ತಂಡಗಳು ಮೆರವಣಿಗೆಗೆ ಮತ್ತಷ್ಟು ಮೆರಗು ನೀಡಿದವು. ತಮಟೆ, ನಗಾರಿ ಏಟಿಗೆ ಯುವಕ–ಯುವತಿಯರು ಹೆಜ್ಜೆ ಹಾಕುತ್ತಾ ಮೆರವಣಿಗೆಯಲ್ಲಿ ಸಾಗಿದರು.

14 ಕಿ.ಮೀ ಮೆರವಣಿಗೆ: ರಾತ್ರಿ 9.30ರ ವೇಳೆಗೆ ಪ್ರಾರಂಭವಾದ ಕರಗ ಮೆರವಣಿಗೆಯೂ ನಗರದ ಪ್ರಮುಖ ಬೀದಿ–ಬೀದಿಗಳಲ್ಲಿ ಸಾಗಿ ಮರುದಿನ (ಏ.26) ಬೆಳಿಗ್ಗೆ 10 ಗಂಟೆ ವೇಳೆಗೆ ದೇವಾಲಯ ಆವರಣ ತಲುಪಿದವು.

ದೇವಸ್ಥಾನದಿಂದ ಉತ್ತರಾಭಿಮುಖವಾಗಿ ಹೊರಟು, ಪ್ಯಾಲೆಸ್ ಆಫೀಸ್ ರಸ್ತೆ, ನೂರಡಿ ರಸ್ತೆ, ನಾರಾಯಣ ಶಾಸ್ತ್ರಿ ರಸ್ತೆ, ನಲ್ಲಪ್ಪ ಠಾಣಾ ರಸ್ತೆ, ಶಿವರಾಂಪೇಟೆ, ಸಯ್ಯಾಜಿರಾವ್ ರಸ್ತೆ, ಮಿಷನ್ ಆಸ್ಪತ್ರೆ ರಸ್ತೆ, ಕಬೀರ್ ರಸ್ತೆ, ಕಾಳಮ್ಮ ಗುಡಿ ರಸ್ತೆ, ಇರ್ವಿನ್ ರಸ್ತೆ, ಕುರುಬಗೇರಿ, ಕುಂಬಾರಗೇರಿ, ಅಶೋಕಾ ರಸ್ತೆ, ನಜರ್‌ಬಾದ್, ಮೃಗಾಲಯ ರಸ್ತೆಯ ಮಾರ್ಗವಾಗಿ ದೇವಸ್ಥಾನಕ್ಕೆ ಮರಳಿ ಮೆರವಣಿಗೆ ಸಾಗಲಿದೆ.

ಮೈಸೂರು ವಿಮಾನ ನಿಲ್ದಾಣ ರನ್‌ವೇ ವಿಸ್ತರಣೆ; 7 ಎಕರೆಯ ಪರಿಹಾರ ಸಮಸ್ಯೆ ಶೀಘ್ರ ಪರಿಹರಿಸಿ

● ಕೆಐಎಡಿಬಿ ಅಧಿಕಾರಿಗಳಿಗೆ ಸಂಸದ ಯದುವೀರ್ ಒಡೆಯರ್ ಸೂಚನೆ ● ವಿಮಾನ ನಿಲ್ದಾಣ ಅಭಿವೃದ್ಧಿ ಕುರಿತ ಸಭೆಯಲ್ಲಿ ಮಹತ್ವದ ಚರ್ಚೆ ● ಚಾಮುಂಡೇಶ್ವರಿ ಕ್ಷೇತ್ರದ ಹಿರಿಯ ಶಾಸಕ ಜಿ.ಟಿ.ದೇವೇಗೌಡರು ಭಾಗಿ



ಮೈಸೂರಿನ ವಿಮಾನ ನಿಲ್ದಾಣದ ಸಮುದಾಯ ಭವನದಲ್ಲಿ ಶನಿವಾರ ನಡೆದ ಸಭೆಯಲ್ಲಿ ಸಂಸದ ಯದುವೀರ್ ಒಡೆಯರ್, ಶಾಸಕ ಜಿ.ಟಿ.ದೇವೇಗೌಡ ಸೇರಿದಂತೆ ಅಧಿಕಾರಿಗಳು ಭಾಗವಹಿಸಿದ್ದರು.

ಮೈಸೂರು,ಏ.25(ಪಿಎಂ)– ಮೈಸೂರು ವಿಮಾನ ನಿಲ್ದಾಣ ರನ್‌ವೇ ವಿಸ್ತರಣೆಗೆ ಮಹತ್ವದ ಪ್ರದೇಶವಾದ ನಿಲ್ದಾಣದ ಉತ್ತರ ಭಾಗದ 7 ಎಕರೆಯ ಕಂದಾಯ ಬಡಾವಣೆಯಲ್ಲಿ ಬಾಕಿ ಉಳಿದಿರುವ ಪರಿಹಾರದ ಸಮಸ್ಯೆಯನ್ನು ಶೀಘ್ರ ಬಗೆಹರಿಸುವಂತೆ ಕೆಐಎಡಿಬಿ ಅಧಿಕಾರಿಗಳಿಗೆ ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಮೈಸೂರು ವಿಮಾನ ನಿಲ್ದಾಣದ ಸಮುದಾಯ ಭವನದಲ್ಲಿ ಶನಿವಾರ ಹಮ್ಮಿಕೊಂಡಿದ್ದ ವಿಮಾನ ನಿಲ್ದಾಣ ಅಭಿವೃದ್ಧಿ ಕುರಿತು ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮಂಡಕಳ್ಳಿ ವಿಮಾನ ನಿಲ್ದಾಣದ ಉತ್ತರ ಭಾಗದಲ್ಲಿನ 7 ಎಕರೆ ಪ್ರದೇಶದಲ್ಲಿರುವ ಕಂದಾಯ ಬಡಾವಣೆಯು ರನ್‌ವೇ ವಿಸ್ತರಣೆಗೆ ಮಹತ್ವದ ಭಾಗ. ಅದಾಗ್ಯೂ ಇಲ್ಲಿ ಬಾಕಿ ಪರಿಹಾರದ ಸಮಸ್ಯೆ ಹಾಗೆ ಉಳಿದಿದ್ದು, ಎಎಐಗೆ ಹಸ್ತಾಂತರಿಸುವ ಮೊದಲು ಈ ಸಮಸ್ಯೆ ಪರಿಹರಿಸಬೇಕಾಗುತ್ತದೆ ಎಂದು ವಿಮಾನ ನಿಲ್ದಾಣದ ನಿರ್ದೇಶಕಿ ಪಿ.ವಿ. ಉಷಾಕುಮಾರಿ ತಿಳಿಸಿದ ಹಿನ್ನೆಲೆಯಲ್ಲಿ ಸಂಸದರು ಸೂಚನೆ ನೀಡಿದರು. ವಿಸ್ತರಣಾ ಕಾರ್ಯಕ್ಕೆ ಇದು ಅಡ್ಡಿಯಾಗುವ ಕಾರಣ ಸಮಸ್ಯೆಯನ್ನು ಶೀಘ್ರದಲ್ಲಿ ಪರಿಹರಿಸಬೇಕೆಂದು ಸಂಸದರು, ಕೆಐಎಡಿಬಿ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಮೈಸೂರು ವಿಮಾನ ನಿಲ್ದಾಣದ ಸಮಗ್ರ ಅಭಿವೃದ್ಧಿ ಮತ್ತು ಮೂಲಸೌಕರ್ಯ ಸುಧಾರಣೆಗಳನ್ನು ಮುಂದುವರೆಸಲು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರ (ಎಎಐ)ದ ಅಧಿಕಾರಿಗಳು ವಿಚಾರಗಳನ್ನು ಮಂಡಿಸಿದರು. ಫೇಸ್–1ರಲ್ಲಿ ರನ್‌ವೇ 09/27 ಅನ್ನು ವಿಸ್ತರಣೆ ಬಗ್ಗೆ ಸಭೆಯಲ್ಲಿ ಪ್ರಮುಖ ಚರ್ಚೆ ನಡೆಯಿತು.

ಉದ್ದೇಶಿತ ರನ್‌ವೇನಲ್ಲಿ ದೊಡ್ಡ ವಿಮಾನ ಕಾರ್ಯಾಚರಣೆ: ಪ್ರಸ್ತುತ 1,740 ಮೀಟರ್ X 30 ಮೀಟರ್ ಅಳತೆಯ ಈ ರನ್‌ವೇ ಎಟಿಆರ್–72 ವಿಮಾನಗಳಿಗೆ ಸೂಕ್ತವಾಗಿದೆ. ಇದನ್ನು 2,300 ಮೀಟರ್ X 45 ಮೀಟರ್‌ಗೆ ವಿಸ್ತರಿಸಿ, ದೊಡ್ಡದಾದ ಏರ್‌ಬಸ್ ಎ–320 ಮತ್ತು ಬೋಯಿಂಗ್ 737 ಮಾದರಿ ವಿಮಾನಗಳ ಕಾರ್ಯಾಚರಣೆಗೆ ಸ್ಥಳಾವಕಾಶ ಕಲ್ಪಿಸುವ ಉದ್ದೇಶಿತ ಯೋಜನೆ ಬಗ್ಗೆ ಚರ್ಚಿಸಲಾಯಿತು.

ಈ ಉದ್ದೇಶಿತ ಯೋಜನೆಗಾಗಿ 240 ಎಕರೆ ಭೂಮಿಯ ಅಗತ್ಯವಿದೆ. ಈ ಪೈಕಿ 206 ಎಕರೆಗಳನ್ನು ಕೆಐಎಡಿಬಿ ಸ್ವಾಧೀನಪಡಿಸಿಕೊಂಡಿದೆ. ಅಲ್ಲದೆ, ಭೂ ಮಾಲೀಕರಿಗೆ ಸಂಪೂರ್ಣವಾಗಿ ಪರಿಹಾರ ವಿತರಿಸಲಾಗಿದೆ (ಕೋರ್ಟ್‌ನಲ್ಲಿ ಠೇವಣಿ ಮೂಲಕ). ಉಳಿದ 34 ಎಕರೆ ಸರ್ಕಾರಿ ಭೂಮಿಯಾಗಿದೆ ಎಂದು ಅಧಿಕಾರಿಗಳು ಸಭೆಯ ಗಮನಕ್ಕೆ ತಂದರು.

ರನ್‌ವೇ ವಿಸ್ತರಣೆ ಸಂಬಂಧ ಎನ್‌ಹೆಚ್–766 ಅನ್ನು ತಿರುಗಿಸುವ ಕುರಿತು ಸಭೆಯಲ್ಲಿ ಪರಿಶೀಲಿಸಲಾಯಿತು. ಈ ಸಂಬಂಧ ಸಭೆಗೆ ಮಾಹಿತಿ ನೀಡಿದ ಎನ್‌ಹೆಚ್ ಎಐನ ಪಿಡಿ (ಪ್ರಾಜೆಕ್ಟ್ ಡೈರೆಕ್ಟರ್) ಅಧಿಕಾರಿ, 2025ರ ಡಿ.15ರಂದು ಎನ್‌ಹೆಚ್‌ಎಐ ಅಂತಿಮ ಜೋಡಣೆ ಮತ್ತು ಕರಡು ಡಿಪಿಆರ್ ಅನ್ನು ಸಲ್ಲಿಸಿದ್ದು, ಇದನ್ನು ಎಎಐ ಅನುಮೋದಿಸಿದೆ. 520 ಮೀಟರ್ ಭೂಗತ ಬಾಕ್ಸ್ ಸುರಂಗ, ಮೂರು ಕಾಲುವೆ ಬಾಕ್ಸ್ ಸುರಂಗಗಳು ಮತ್ತು ಕೆಪಿಟಿಸಿಎಲ್ ಯುಟಿಲಿಟಿ ಡಕ್ಟ್ ಸೇರಿದಂತೆ 3.5 ಕಿ.ಮೀ. ತಿರುವು ಕಾರ್ಯ ಕೈಗೊಳ್ಳಲು 612 ಕೋಟಿ ರೂ. ಪರಿಷ್ಕೃತ ವೆಚ್ಚದಲ್ಲಿ (2018ರ ಅಂದಾಜಿಗಿಂತ 102 ಕೋಟಿ ರೂ. ಹೆಚ್ಚಳ) ಪ್ರಸ್ತಾಪಿಸಲಾಗಿದೆ.

2013ರ ಹಿಂದಿನ ಭೂಸ್ವಾಧೀನ ಒಪ್ಪಂದಗಳು ಸೇರಿದಂತೆ ಹೆಚ್ಚುವರಿ ವೆಚ್ಚವನ್ನು ಎನ್‌ಹೆಚ್‌ಎಐ ಭರಿಸಬೇಕೆಂದು ಎಎಐ ಕೇಳಿದೆ. ಈ ಸಂಬಂಧ ಶೀಘ್ರ ಕ್ರಮ ಕೈಗೊಳ್ಳಲು ನವದೆಹಲಿಯ ಎನ್‌ಹೆಚ್‌ಎಐ ಕೇಂದ್ರ ಕಚೇರಿ ಗಮನಕ್ಕೆ ತರಲಾಗುವುದು ಎಂದು ತಿಳಿಸಿದರು.

ಸುರಕ್ಷತೆ ಮತ್ತು ನಿಯಂತ್ರಕ ನವೀಕರಣಗಳಲ್ಲಿ ರನ್‌ವೇ ವಿಸ್ತರಣೆ ಮತ್ತು ಸುರಂಗಗಳಿಗೆ ಬಿಸಿಎಎಸ್ ವಿನ್ಯಾಸ ಹಂತದ ಭದ್ರತಾ ಪರಿಶೀಲನೆ ಸೇರಿದೆ (2026ರ ಜ.9ರಂದು ಪ್ರಾಥಮಿಕ ಪಾಲುದಾರರ ಸಭೆ ; ತಜ್ಞರ ಸಮಿತಿ ರಚನೆಯನ್ನು ಶಿಫಾರಸ್ಸು ಮಾಡಲಾಗಿದೆ ಮತ್ತು 12 ಸುರಂಗ ಪ್ರವೇಶ/ನಿರ್ಗಮನ ಬಿಂದುಗಳನ್ನು ನಿರ್ವಹಿಸಲು ಏ.7ರಂದು ರಾಜ್ಯ ಪೊಲೀಸ್ ಒಪ್ಪಿಗೆಯನ್ನು ಕೋರಲಾಗಿದೆ) ಎಂದೂ ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

ಸಂಸದರು, ಶಾಸಕರ ಸೂಚನೆ: ಸ್ವಾಧೀನಪಡಿಸಿಕೊಂಡ ಭೂಮಿಯಲ್ಲಿರುವ ಕಟ್ಟಡ ಹಾಗೂ ಮರಗಳಿಗೆ ಸಂಬಂಧಿಸಿದಂತೆ ಪರಿಹಾರ ಮೌಲ್ಯಮಾಪನ ಹಾಗೂ ಪರಿಹಾರ ವಿತರಣೆ ಪ್ರಕ್ರಿಯೆ ಶೀಘ್ರಗತಿಯಲ್ಲಿ ಪೂರ್ಣಗೊಳಿಸುವಂತೆ ಕೆಐಎಡಿಬಿ ಅಧಿಕಾರಿಗಳಿಗೆ ಸಂಸದರು, ಚಾಮುಂಡೇಶ್ವರಿ ಕ್ಷೇತ್ರದ ಹಿರಿಯ ಶಾಸಕರೂ ಆದ ಮಾಜಿ ಸಚಿವ ಜಿ.ಟಿ.ದೇವೇಗೌಡ ಸೂಚನೆ ನೀಡಿದರು. ಇದರಿಂದ ಭೂಮಿಯನ್ನು ಮುಂದಿನ ಅಭಿವೃದ್ಧಿಗೆ ಸಾಧ್ಯವಾದಷ್ಟು ಶೀಘ್ರದಲ್ಲಿ ಎಎಐಗೆ ಹಸ್ತಾರಿಸಬಹುದು ಎಂದು ತಿಳಿಸಿದರು.

ವಿಮಾನ ನಿಲ್ದಾಣದ ವಿಸ್ತರಣಾ ಯೋಜನೆಯನ್ನು ಆದಷ್ಟು ಶೀಘ್ರದಲ್ಲಿ ಪೂರ್ಣಗೊಳಿಸಲು ಸಮನ್ವಯದಿಂದ ಕಾರ್ಯನಿರ್ವಹಿಸುವಂತೆ ವಿವಿಧ ಇಲಾಖಾಧಿಕಾರಿಗಳಿಗೆ ಸಂಸದರು, ಶಾಸಕರು ಸೂಚನೆ ನೀಡಿದರು. ಭೂಸ್ವಾಧೀನ, ಕಟ್ಟಡ ಮತ್ತು ಮರಗಳಿಗೆ ಪರಿಹಾರ, ವಿದ್ಯುತ್ ಮಾರ್ಗಗಳ ಬದಲಾವಣೆ, ಹೆದ್ದಾರಿ ಮತ್ತು ಕಾಲುವೆ ಸ್ಥಳಾಂತರ ಮತ್ತು ಇತರ ಸಂಬಂಧಿತ ಕೆಲಸಗಳು ಸೇರಿದಂತೆ ಸಂಬಂಧಿತ ವಿಷಯಗಳಿಗೆ ಗಮನ ನೀಡುವಂತೆಯೂ ಸೂಚಿಸಿದರು.

ಈ ವೇಳೆ ಡಿಸಿಪಿ ಡಾ.ಹರ್ಷ ಪ್ರಿಯಂವದ, ಅಪರ ಜಿಲ್ಲಾಧಿಕಾರಿ ಐಶ್ವರ್ಯ ಆರಾಧ್ಯ ವಿಮಾನ ನಿಲ್ದಾಣ ಅಭಿವೃದ್ಧಿ ಪ್ರಾಧಿಕಾರದ ಸದಸ್ಯರಾದ ಎಂ.ಸಿ.ಮಲ್ಲಿಕಾರ್ಜುನ ಹಾಗೂ ಭಾಸ್ಕರ್ ಕಳಲೆ ಸೇರಿದಂತೆ ವಿಮಾನ ನಿಲ್ದಾಣದ ಸಲಹಾ ಸಮಿತಿ ಸದಸ್ಯರು, ಕೆಪಿಟಿಸಿಎಲ್, ನೈರುತ್ಯ ರೈಲ್ವೆ, ನೀರಾವರಿ ಇಲಾಖೆ, ಎನ್‌ಹೆಚ್‌ಎಐ, ಎಎಐ, ಕೆಐಎಡಿಬಿ ಸೇರಿದಂತೆ ವಿವಿಧ ಇಲಾಖಾಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

ವಿಮಾನ ನಿಲ್ದಾಣ ವಿಸ್ತರಣೆ ಯೋಜನೆ ಕಾರ್ಯ ತ್ವರಿತಗೊಳಿಸಲು ಸಂಸದರ ಸೂಚನೆ

ಮೈಸೂರು: ಮೈಸೂರು ವಿಮಾನ ನಿಲ್ದಾಣ ವಿಸ್ತರಣೆ ಯೋಜನೆಯನ್ನು ತ್ವರಿತವಾಗಿ ಪೂರ್ಣಗೊಳಿಸುವ ನಿಟ್ಟಿನಲ್ಲಿ ಭೂ ಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸುವ ಕುರಿತು ಸಚಿವರೊಂದಿಗೆ ಚರ್ಚಿಸಲಾಗುವುದು ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದರು.

ಸಭೆಯಲ್ಲಿ ಮಾತನಾಡಿದ ಅವರು, ಕ್ಷಿಪ್ರಗತಿಯಲ್ಲಿ ಕಾರ್ಯಗಳನ್ನು ಕೈಗೊಳ್ಳಬೇಕಾದ ಅಗತ್ಯವಿದೆ. ದೀರ್ಘಕಾಲೀನ ಯೋಜನೆಗೆ ಸ್ಪಷ್ಟ ರೂಪ ನೀಡಬೇಕಾಗಿದೆ. ವಿಮಾನ ನಿಲ್ದಾಣ ಅಭಿವೃದ್ಧಿಗೆ ಸಂಬಂಧಿಸಿದ ಸಮಗ್ರವಾದ ಯೋಜನಾ ವರದಿ (ಡಿಪಿಆರ್) ಅನ್ನು ಶೀಘ್ರದಲ್ಲಿ ಸಿದ್ಧಪಡಿಸಲು ಅಧಿಕಾರಿಗಳು ಮುಂದಾಗಬೇಕು ಎಂದು ಸೂಚನೆ ನೀಡಿದರು.

ಮೈಸೂರು ಹಾಗೂ ಸುತ್ತಮುತ್ತಲಿನ ಪ್ರದೇಶಗಳ ಜನತೆಗೆ ಪ್ರಮುಖ ನಗರಗಳೊಂದಿಗೆ ನಿರಂತರ ಹಾಗೂ ಪೂರ್ಣಕಾಲಿಕ, ದೀರ್ಘಕಾಲೀನ ವಿಮಾನ ಸಂಪರ್ಕವನ್ನು ಸ್ಥಾಪಿಸುವುದು ನಮ್ಮ ಧ್ಯೇಯ. ಇದಕ್ಕಾಗಿ ಹಂತ ಹಂತವಾಗಿ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ಮೈಸೂರಿನಿಂದ ಶಾಶ್ವತ– ವಿಶ್ವಾಸಾರ್ಹ ವಿಮಾನ ಸಂಚಾರಕ್ಕೆ ಅವಕಾಶ ಕಲ್ಪಿಸಬಹುದು ಎಂದು ಹೇಳಿದರು.



ಮೈಸೂರು ಮಿತ್ರ

ರಾಜಕೀಯ ಮೀಸಲಾತಿಗೆ ಕಾಂಗ್ರೆಸ್‌ನಿಂದ ದ್ರೋಹ



ಸಂಸದ ಯದುವೀರ್ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಮಡಿಕೇರಿ, ಏ.25–ಮಹಿಳೆಯರಿಗೆ ರಾಜಕೀಯ ಸ್ಥಾನಮಾನಗಳನ್ನು ಕಲ್ಪಿಸುವ ಕೇಂದ್ರದ ನಾರಿ ಶಕ್ತಿ ವಂದನ್ ಅಧಿನಿಯಮಕ್ಕೆ ಕಾಂಗ್ರೆಸ್ ಒಳಗೊಂಡಂತೆ ವಿಪಕ್ಷಗಳು ಬೆಂಬಲ ನೀಡದ ಕಾರಣ ಮಹಿಳೆಯರು ರಾಜಕೀಯ ಮೀಸಲಾತಿಯಿಂದ ವಂಚನೆಗೆ ಒಳಗಾಗಿದ್ದಾರೆ ಎಂದು ಸಂಸದ ಯದುವೀರ್ ಬೇಸರ ವ್ಯಕ್ತಪಡಿಸಿದರು.

ಮುಖ್ಯವಾಗಿ ಮೀಸಲಾತಿಯೊಂದಿಗೆ ಲೋಕಸಭಾ ಸ್ಥಾನಗಳ ಪುನರ್ವಿಂಗಡಣೆಯ ಬಗ್ಗೆ ಕೇಂದ್ರ ಗೃಹ ಸಚಿವರು ಅಗತ್ಯ ಮಾಹಿತಿಗಳನ್ನು ನೀಡಿದ್ದು, ಯಾವುದೇ ರಾಜ್ಯಗಳಿಗೆ ಪುನರ್ವಿಂಗಡಣೆಯಿಂದ ಅನ್ಯಾಯವಾಗದಂತೆ, ಪ್ರಸ್ತುತ ರಾಜ್ಯಗಳಲ್ಲಿ ಇರುವ ಸಂಸತ್ ಕ್ಷೇತ್ರಗಳಿಗೆ ಸರಿ ಸುಮಾರು ಶೇ.50ರಷ್ಟು ಹೆಚ್ಚುವರಿ ಸ್ಥಾನಗಳು ಸೇರ್ಪಡೆಯಾಗುತ್ತವೆಂದು ತಿಳಿಸಿದ್ದಾರೆ. ಕರ್ನಾಟಕದಲ್ಲಿ ಪ್ರಸ್ತುತ ಇರುವ 28 ಲೋಕಸಭಾ ಸ್ಥಾನಗಳು ಪುನರ್ವಿಂಗಡಣೆಯೊಂದಿಗೆ 43 ಆಗುತ್ತಿತ್ತು ಎಂದು ಸುದ್ದಿಗೋಷ್ಠಿಯಲ್ಲಿ ಮಾಹಿತಿಯನ್ನು ನೀಡಿದರು.

ಮಹಿಳಾ ಕಲ್ಯಾಣಕ್ಕೆ ಕ್ರಮ: ವಿಧೇಯಕಕ್ಕೆ ಅನುಮೋದನೆ ದೊರಕದಿದ್ದರೂ ಮಹಿಳೆಯರ ಕಲ್ಯಾಣಕ್ಕಾಗಿ ಕೇಂದ್ರ ಸರ್ಕಾರ ಹತ್ತಾರು ಯೋಜನೆಗಳನ್ನು ಜಾರಿಗೊಳಿಸಿ ಕೊಂಡು ಬರುತ್ತಿದೆ. ಈ ಹಿಂದೆಯೇ ಜಾರಿ ಮಾಡಿರುವ ಮುದ್ರಾ ಯೋಜನೆಯಡಿ ಇಲ್ಲಿಯವರೆಗೆ ಶೇ.69ರಷ್ಟು ಮಹಿಳಾ ಫಲಾನುಭವಿಗಳು ಪ್ರಯೋಜನವನ್ನು ಪಡೆದುಕೊಂಡಿದ್ದಾರೆ. ಉಜ್ವಲ ಸೇರಿದಂತೆ ಮಹಿಳಾ ಸ್ವಾವಲಂಬನೆಗೆ ಪೂರಕವಾದ ಯೋಜನೆಗಳ ಪ್ರಯೋಜನವನ್ನು ಶೇ.84 ರಷ್ಟು ಮಹಿಳೆಯರು ಪಡೆದುಕೊಳ್ಳುತ್ತಿರುವ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಲೋಕಸಭಾ ಸ್ಥಾನಗಳ ಪುನರ್ವಿಂಗಡಣೆಯಾಗಿದ್ದರೆ, ಜಿಲ್ಲೆಗೆ ಪ್ರತ್ಯೇಕ ಲೋಕಸಭಾ ಸ್ಥಾನ ದೊರಕುವ ನಿರೀಕ್ಷೆ ಇತ್ತು. ಈ ಹಿಂದೆ ದಕ್ಷಿಣ ಕನ್ನಡ ಲೋಕಸಭಾ ಸ್ಥಾನಕ್ಕೆ ಸೇರಿದ್ದ ಕೊಡಗು ಬಳಿಕ ಮೈಸೂರಿಗೆ ಸೇರ್ಪಡೆಗೊಂಡಿತ್ತು. ಕೊಡಗು-ಮೈಸೂರು ಕ್ಷೇತ್ರ ಭೌಗೋಳಿಕವಾಗಿ ತುಂಬಾ ವಿಸ್ತಾರವಾಗಿದ್ದು, ಸುಮಾರು 22 ಲಕ್ಷ ಮತದಾರರನ್ನು ಹೊಂದಿದೆ. ಇಂತಹ ದೊಡ್ಡ ಕ್ಷೇತ್ರದ ಭಾಗವಾದ ಕೊಡಗು ಜಿಲ್ಲೆಗೆ ಪ್ರತ್ಯೇಕ ಲೋಕಸಭಾ ಕ್ಷೇತ್ರ ದೊರಕುವ ನಿರೀಕ್ಷೆ ಇತ್ತು, ಆದರೆ ಕಾಂಗ್ರೆಸ್ ಸೇರಿದಂತೆ ವಿಪಕ್ಷಗಳು ಇದಕ್ಕೆ ಅಡ್ಡಿಪಡಿಸಿವೆ ಎಂದು ಕಿಡಿಕಾರಿದರು.

ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯ ರೀನಾ ಪ್ರಕಾಶ್, ಮಾಜಿ ಸಚಿವ ಅಪ್ಪಚ್ಚು ರಂಜನ್ ಮಾತನಾಡಿ, ನಾರಿ ವಂದನ್ ಅಧಿನಿಯಮವನ್ನು ವಿರೋಧಿಸುವ ಮೂಲಕ ಕಾಂಗ್ರೆಸ್ ಒಳಗೊಂಡ ವಿಪಕ್ಷಗಳು ಮಹಿಳೆಯರಿಗೆ ದ್ರೋಹ ಬಗೆದಿರುವುದಾಗಿ ಟೀಕಿಸಿದರು.

ಎಂಎಲ್‌ಸಿ ಸುಜಾ ಕುಶಾಲಪ್ಪ, ಮಾಜಿ ಎಂಎಲ್‌ಸಿ ಸುನಿಲ್ ಸುಬ್ರಮಣಿ, ನಗರಸಭಾ ಅಧ್ಯಕ್ಷೆ ಪಿ.ಕಲಾವತಿ, ಎ.ಕೆ.ಲೋಕೇಶ್, ಯಮುನಾ, ಲೋಕೇಶ್ವರಿ, ಬಿ.ಕೆ. ಜಗದೀಶ್, ಕನ್ನಿಕೆ ಮತ್ತಿತರರಿದ್ದರು.

ಕಾಡು ಪ್ರಾಣಿಗಳ ಹಾವಳಿಯನ್ನ ಶಾಶ್ವತವಾಗಿ ತಡೆಗಟ್ಟಲು ಆಗ್ರಹ

ಅರಣ್ಯ ಇಲಾಖೆ ಅಧಿಕಾರಿಗಳ ಜಂಟಿ ಸಭೆಯಲ್ಲಿ ಬೆಳೆಗಾರರ ಒತ್ತಾಯ

ಸಿದ್ದಾಪುರ, ಏ.25–ಕಾಡು ಪ್ರಾಣಿಗಳ ಹಾವಳಿಯಿಂದ ನೆಮ್ಮದಿಯ ಜೀವನ ನಡೆಸಲು ಸಾಧ್ಯವಾಗದಂತಹ ಪರಿಸ್ಥಿತಿ ನಿರ್ಮಾಣವಾಗಿದ್ದು ವರ್ಷವಿಡಿ ಕಷ್ಟಪಟ್ಟು ಬೆಳೆದ ಫಸಲುಗಳು ಕಾಡು ಪ್ರಾಣಿಗಳ ಪಾಲಾಗುತ್ತಿದೆ. ರೈತರು, ಕಾರ್ಮಿಕರು, ಶಾಲಾ ವಿದ್ಯಾರ್ಥಿಗಳು, ಸಾರ್ವಜನಿಕರು ಆತಂಕದ ಜೀವನ ನಡೆಸುವಂತಾಗಿದೆ. ಸರ್ಕಾರ ಹಾಗೂ ಅರಣ್ಯ ಇಲಾಖೆ ಅಧಿಕಾರಿಗಳು ವೈಜ್ಞಾನಿಕವಾಗಿ ಕಾಡು ಪ್ರಾಣಿಗಳ ಹಾವಳಿಯನ್ನ ಶಾಶ್ವತವಾಗಿ ತಡೆಗಟ್ಟಬೇಕೆಂದು ಚೆನ್ನಂಗಿ ಕಾವೇರಿ ಸೇವಾ ಸಂಘದ ಸ್ಥಾಪಕ ಅಧ್ಯಕ್ಷ ಡಾ. ಎ.ಸಿ ಗಣಪತಿ ಒತ್ತಾಯಿಸಿದ್ದಾರೆ.



ಚೆನ್ನಂಗಿ ಕಾವೇರಿ ಸೇವಾ ಸಂಘದ ಸಭಾಂಗಣದಲ್ಲಿ ಬೆಳೆಗಾರರು ಹಾಗೂ ಅರಣ್ಯ ಇಲಾಖೆ ಅಧಿಕಾರಿಗಳೊಂದಿಗೆ ಜಂಟಿ ಸಭೆ ನಡೆಸಿದರು.

ವಿರಾಜಪೇಟೆ ತಾಲೂಕಿನ ಪಾಲಿಬೆಟ್ಟ ಸಮೀಪದ ಚೆನ್ನಂಗಿ ಕಾವೇರಿ ಸೇವಾ ಸಂಘದ ಸಭಾಂಗಣದಲ್ಲಿ ಬೆಳೆಗಾರರು ಹಾಗೂ ಅರಣ್ಯ ಇಲಾಖೆ ಅಧಿಕಾರಿಗಳೊಂದಿಗೆ ನಡೆದ ಜಂಟಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಜಿಲ್ಲೆಯ ರೈತರು ಕೃಷಿಯನ್ನು ನಂಬಿ ಜೀವನ ನಡೆಸುತ್ತಿದ್ದಾರೆ. ಸಾಲ ಮಾಡಿ ಕಷ್ಟಪಟ್ಟು ಬೆಳೆದ ಕೃಷಿ ಫಸಲುಗಳು ಕಾಡು ಪ್ರಾಣಿಗಳ ಪಾಲಾಗುತ್ತಿದೆ. ಇದರಿಂದ ರೈತ ಆರ್ಥಿಕ ಸಂಕಷ್ಟ ಎದುರಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿ ಕೃಷಿ ಬೆಳೆಯಿಂದ ದೂರವಿದ್ದು ಸಂಕಷ್ಟದ ಜೀವನ ನಡೆಸುವಂತಾಗಿದೆ ಎಂದು ಅಳಲು ತೋಡಿಕೊಂಡರು.

ಉಪ ಸಂರಕ್ಷಣಾಧಿಕಾರಿ ಸೀಮ ಸಾರ್ವಜನಿಕರ ಅಹವಾಲು ಆಲಿಸಿ ಅರಣ್ಯ ಇಲಾಖೆ ಕೈಗೊಂಡಿರುವ ಯೋಜನೆಗಳು ಹಾಗೂ ಕಾಡು ಪ್ರಾಣಿಗಳ ಹಾವಳಿ ತಡೆಗಟ್ಟುವ ನಿಟ್ಟಿನಲ್ಲಿ ಕಾರ್ಯ ಯೋಜನೆಗಳ ಬಗ್ಗೆ ಮಾಹಿತಿ ನೀಡಿ ಕಾಡು ಪ್ರಾಣಿಗಳನ್ನು ತಡೆಗಟ್ಟುವ ಹಾಗೂ ಸೆರೆಹಿಡಿದು ಸ್ಥಳಾಂತರಿಸುವ ಕಾರ್ಯಚರಣೆ ಸಂದರ್ಭದಲ್ಲಿ ಅರಣ್ಯ ಇಲಾಖೆಯೊಂದಿಗೆ ಸಹಕರಿಸಬೇಕೆಂದರು.

ಹುಣಸೂರು ಸಹಾಯಕ ಉಪ ಅರಣ್ಯ ಸಂರಕ್ಷಣಾಧಿಕಾರಿ ಲಕ್ಷ್ಮೀಕಾಂತ್, ವಲಯ ಅರಣ್ಯ ಅಧಿಕಾರಿ ದೇವರಾಜು, ಉಪವಲಯ ಅಧಿಕಾರಿ ಚೆನ್ನವೀರೇಶ್, ಶಶಿ, ಶ್ರೀನಿವಾಸ್, ಗ್ರಾ.ಪಂ. ಮಾಜಿ ಅಧ್ಯಕ್ಷ ಅರುಣ್ ಕುಮಾರ್, ಬೆಳೆಗಾರರಾದ ಎಂಎಸ್ ಟಿವಿ, ಎ.ಎಸ್.ಶ್ಯಾಮ್, ಪಿ.ಎ.ಅನಂತರಾಮ್, ಎ.ಬಿ.ವಿನು ಪೊನ್ನಪ್ಪ, ಮುಲ್ಲೇಂಗಡ ಕಿಶೋರ್, ವಿ.ಬಿ.ಸುರೇಶ್, ಮುಸ್ತಫಾ ಸೇರಿದಂತೆ ಗ್ರಾಮಸ್ಥರು ಉಪಸ್ಥಿತರಿದ್ದರು.

ವಿಜೃಂಭಣೆಯಿಂದ ಜರುಗಿದ ರಾಟೆ ಭಗವತಿ ದೇವಿಯ ಉತ್ಸವ

ನಾಪೋಕ್ಲು, ಏ.25 (ದುಗ್ಗಳ)–ಸಮೀಪದ ಬಲ್ಲಮಾವಟಿ ಗ್ರಾಮದ ರಾಟೆ ಭಗವತಿ ದೇವಿಯ ಉತ್ಸವವು ಎರಡು ದಿನಗಳ ಕಾಲ ವಿಜೃಂಭಣೆಯಿಂದ ಜರುಗಿತು.

ಉತ್ಸವದ ಅಂಗವಾಗಿ ಗುರುವಾರ ತಕ್ಕರ ಮನೆಯಿಂದ ಭಂಡಾರ ತಂದು ಬಳಿಕ ಮಹಾಪೂಜೆ ತೀರ್ಥ ಪ್ರಸಾದ ವಿತರಿಸಲಾಯಿತು. ಆನಂತರ ಹರಕೆ ರೂಪದಲ್ಲಿ ಭಕ್ತಾದಿಗಳು ವಿವಿಧ ವೇಷಗಳನ್ನು ಧರಿಸಿ ಬೇಡು ಹಬ್ಬ ಜರುಗಿತು. ಶುಕ್ರವಾರ ಬೆಳಗ್ಗೆ ಕಾರೇರಿಯಂಡ ತಕ್ಕರಲ್ಲಿಂದ ಮೆರವಣಿಗೆಯಲ್ಲಿ ಬಾಳು ಭಂಡಾರ ತರಲಾಯಿತು. ಬಳಿಕ ಆರಾಟ್, ಬೊಳಕಾಟ್ ನಡೆದು ನಂತರ ಭಕ್ತಾದಿಗಳು ತಮ್ಮ ಇಷ್ಟಾರ್ಥ ಸೇವೆಗಳನ್ನು ದೇವರಿಗೆ ಹರಕೆ ಒಪ್ಪಿಸಿದರು

ಉತ್ಸವದಲ್ಲಿ ಭಗವತಿ, ಭದ್ರಕಾಳಿ ಅಮ್ಮನ ವಿಗ್ರಹವನ್ನು ರಾಟೆ ಉಯ್ಯಾಲೆಯಲ್ಲಿ ತೂಗುವುದು ಮಾತ್ರವಲ್ಲದೆ ಬೇಡು ಹಬ್ಬ, ಪೀಲಿಯಾಟ್, ಕ್ಷೇತ್ರಪಾಲ, ಸಾತರ್ಾವು, ಭದ್ರಕಾಳಿ ತೆರೆಮುಡಿ. ಮೂರು ದೈವಗಳ ಕೋಲಗಳನ್ನು ಭಕ್ತರು ವೀಕ್ಷಿಸಿ ಸಂಭ್ರಮಿಸಿ ವಿವಿಧ ಧಾರ್ಮಿಕ ಹಾಗೂ ಸಾಂಪ್ರದಾಯಿಕ ಆಚರಣೆಗಳು ಶ್ರದ್ಧಾ ಭಕ್ತಿಯಿಂದ ಜರುಗಿತು. ಶಾಸಕ



ಬಲ್ಲಮಾವಟಿ ರಾಟೆ ಭಗವತಿ ದೇವಿಯ ಉತ್ಸವ

ಎ.ಎಸ್ ಪೊನ್ನಣ್ಣ ವಾರ್ಷಿಕೋತ್ಸವದಲ್ಲಿ ಪಾಲ್ಗೊಂಡು ನಾಡಿನ ಸಮಸ್ತ ಭಕ್ತಾದಿಗಳಿಗೆ ಹಾಗೂ ಜೀವ ಸಂಕುಲಕ್ಕೆ ಭಗವಂತ ಒಳಿತನ್ನು ಮಾಡಲಿ ಎಂದು ಪ್ರಾರ್ಥಿಸಿದರು.

ದೇವಾಲಯದ ಆಡಳಿತ ಮಂಡಳಿ ಎಡಿಕೇರಿ.ಇ.ಗೋಪಾಲ ಉಪಾಧ್ಯಕ್ಷ ಚೋಕಿರ ಚೆಂಗಪ್ಪ, ಕಾರ್ಯದರ್ಶಿ ಹೆಡಿಕೇರಿ ಮಧು, ತಕ್ಕ ಮುಖ್ಯಸ್ಥರಾದ ಹೆಡಿಕೇರಿ ವಾಸು ಸೇರಿದಂತೆ ಇನ್ನಿತರ ಮುಖ್ಯಸ್ಥರು, ವಿವಿಧ ಪಕ್ಷದ ಪ್ರಮುಖರು ಸೇರಿದಂತೆ ಊರ ಪರ ಊರ ಭಕ್ತಾದಿಗಳು ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಹೋಂಸ್ಟೇ, ಟ್ರಾವೆಲ್ಸ್ ಮಾಲೀಕರೊಂದಿಗೆ ಎಸ್‌ಪಿ ಸಭೆ

ಮಡಿಕೇರಿ,ಏ.25– ಜಿಲ್ಲಾ ಪೊಲೀಸ್ ಇಲಾಖೆ, ಜಿಲ್ಲೆಯ ಹೋಂಸ್ಟೇ, ಹೊಟೇಲ್ ಮತ್ತು ಟ್ರಾವೆಲ್ಸ್ ಮಾಲೀಕರ ಸಂಘದ ಪದಾಧಿಕಾರಿಗಳ ಸಭೆ ನಡೆಸಿತು. ಎಸ್ಪಿ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಎಸ್ಪಿ ಆರ್.ಎನ್.ಬಿಂದುಮಣಿ ಹಾಗೂ ಉಪ ವಿಭಾಗಾಧಿಕಾರಿ ನಿತಿನ್ ಚಕ್ಕಿ ಅವರು ಪ್ರವಾಸಿಗರ ಸುರಕ್ಷತೆಯ ಕುರಿತು ಸಲಹೆ ಸೂಚನೆಗಳನ್ನು ನೀಡಿದರು. ಹೋಂಸ್ಟೇ, ಹೊಟೇಲ್‌ಗಳ ನೋಂದಣಿ, ಪ್ರವಾಸಿಗರ ಸುರಕ್ಷತೆ, ಕಾರ್ಮಿಕರ ಗುಣ ನಡತೆ ಪರಿಶೀಲನೆ, ವಿದೇಶಿ ಪ್ರವಾಸಿಗರ ನೋಂದಣಿ ಮುಂತಾದ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

ಜಿಲ್ಲಾ ಬಂಟರ ಭವನಕ್ಕೆ ಮೇ 1 ಭೂಮಿಪೂಜೆ

ವಿರಾಜಪೇಟೆ, ಏ.25– ಕೊಡಗು ಜಿಲ್ಲಾ ಬಂಟರ ಭವನದ ನಿರ್ಮಾಣ ಕಾಮಗಾರಿಯ ಭೂಮಿಪೂಜೆ ಮೇ.1 ರ ಬೆಳಿಗ್ಗೆ 11.30ಕ್ಕೆ ಮಡಿಕೇರಿಯ ಅಬ್ಬಿಫಾಲ್ಸ್ ರಸ್ತೆಯಲ್ಲಿನ ನಿವೇಶನದಲ್ಲಿ ಶಾಸಕ ಡಾ.ಮಂತರ್ ಗೌಡ ನೆರವೇರಿಸುವರು. ಗುರುದೇವ ದತ್ತಸಂಸ್ಥಾನಮ್ ಓಡಿಯೂರಿನ ಗುರುದೇವಾನಂದ ಸ್ವಾಮೀಜಿ, ಶಾಸಕರಾದ ಎ.ಎಸ್. ಪೊನ್ನಣ್ಣ, ಅಶೋಕ್ ಕುಮಾರ್ ರೈ, ಮಾಜಿ ಸಚಿವ ಅಪ್ಪಚ್ಚು ರಂಜನ್, ಮಾಜಿ ಸಭಾಪತಿ ಕೆ.ಜಿ.ಬೋಪಯ್ಯ, ಸಂಸದ ಯದುವೀರ್, ನಗರ ಸಭಾಧ್ಯಕ್ಷೆ ಕಲಾವತಿ ಮೊದಲಾದವರು ಭಾಗವಹಿಸುವರೆಂದು ಸಂಘದ ಅಧ್ಯಕ್ಷ ಬಿ.ಡಿ. ಜಗದೀಶ್ ರೈ ತಿಳಿಸಿದ್ದಾರೆ.

ಅರ್ಥಪೂರ್ಣ ಮದ್ದೂರು ಉತ್ಸವಕ್ಕೆ ಅಗತ್ಯ ಕ್ರಮ



ಮ್ಯಾರಥಾನ್ ಜಾಥಾಕ್ಕೆ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಹಸಿರುನಿಶಾನೆ ತೋರಿದರು.

ಮದ್ದೂರು, ಏ.25–ಮದ್ದೂರಿನಲ್ಲಿ ಕದಲೂರು ಉದಯ್ ಚಾರಿಟಬಲ್ ಟ್ರಸ್ಟ್ ವತಿಯಿಂದ ಮದ್ದೂರು ಉತ್ಸವ ಅದ್ದೂರಿಯಾಗಿ ಆಚರಿಸಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ ಎಂದು ಶಾಸಕ ಕೆ.ಎಂ.ಉದಯ್ ತಿಳಿಸಿದರು.

ನಗರದ ಪ್ರವಾಸಿ ಮಂದಿರದ ಬಳಿ ಶನಿವಾರ ಮದ್ದೂರು ಉತ್ಸವದ ಪ್ರಾರಂಭೋತ್ಸವದ ಅಂಗವಾಗಿ ಹಮ್ಮಿಕೊಂಡಿದ್ದ ಬೃಹತ್ ಮ್ಯಾರಾಥಾನ್ ಜಾಥಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಮದ್ದೂರು ಇತಿಹಾಸದ ಪುಟಗಳಲ್ಲಿ ಜನರ ಮನಸಿನಲ್ಲಿ ಶಾಶ್ವತವಾಗಿ ಉಳಿಯುವ ರೀತಿಯಲ್ಲಿ ಮದ್ದೂರು ಉತ್ಸವವನ್ನು ವ್ಯವಸ್ಥಿತವಾಗಿ ಆಚರಿಸುವ ಉದ್ದೇಶ ದಿಂದ ಹಲವಾರು ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಜನರು ಅಗತ್ಯ ಸಹಕಾರ ನೀಡಬೇಕು ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಮನವಿ ಮಾಡಿದರು.

ಮದ್ದೂರು ಉತ್ಸವಕ್ಕೆ ಚಾಲನೆ ನೀಡಿದ ಸಚಿವ ಎನ್.ಚಲುವರಾಯಸ್ವಾಮಿ, ಮುಂದಿನ ವರ್ಷದಿಂದ ರಾಜ್ಯಮಟ್ಟದ ಉತ್ಸವವನ್ನಾಗಿ ಆಚರಿಸಲು ಕ್ರಮ ಕೈಗೊಳ್ಳಲಾಗುವುದು. ಸ್ಥಳೀಯ ಕಲಾವಿದರಿಗೆ ಶಾಶ್ವತ ವೇದಿಕೆ ನಿರ್ಮಿಸಲು 2 ಕೋಟಿ ರೂ. ಅನುದಾನ ಬಿಡುಗಡೆ ಮಾಡಲಾಗುವುದು. ಮದ್ದೂರು ಕೆರೆಯನ್ನು ಪ್ರವಾಸಿ ತಾಣವಾಗಿ ಅಭಿವೃದ್ಧಿಪಡಿಸಿ, ದೋಣಿ ವಿಹಾರಕ್ಕೆ ವ್ಯವಸ್ಥೆ ಮಾಡಲಾಗುವುದು. ಎಂದರು.

ಮ್ಯಾರಥಾನ್‌ಗೂ ಮುನ್ನ ಸಚಿವ ಎನ್. ಚಲುವರಾಯಸ್ವಾಮಿ, ಶಾಸಕರಾದ ಕೆ.ಎಂ. ಉದಯ್, ದಿನೇಶ್ ಗೂಳಿಗೌಡ ಹಾಗೂ ಅಧಿಕಾರಿಗಳು ಗೋಪೂಜೆ ಮಾಡಿದರು. ಪ್ರವಾಸಿ ಮಂದಿರದಿಂದ ಪಟ್ಟಣದ ಪ್ರಮುಖ ಬೀದಿಗಳ ಶಿವಪುರ ಸತ್ಯಾಗ್ರಹ ಸೌಧವರೆಗೆ ಶಾಸಕರಾದ ಕೆ.ಎಂ.ಉದಯ್, ದಿನೇಶ್ ಗೌಡ ಅವರು ಕಾಲ್ನಡಿಗೆ ಜಾಥಾದಲ್ಲಿ ಆಗಮಿಸಿ ಮ್ಯಾರಾಥಾನ್‌ಗೆ ಸಾಥ್ ನೀಡಿದರು.

ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ, ಜಿ.ಪಂ.ಸಿಇಒ ಕೆ.ಆರ್. ನಂದಿನಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶೋಭಾರಾಣಿ, ಮೈಷುಗರ್ ಅಧ್ಯಕ್ಷ ಸಿ.ಡಿ.ಗಂಗಾಧರ್, ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಚಲುವರಾಜು, ತಹಸೀಲ್ದಾರ್ ಪರಶುರಾಮ್ ಸತ್ತಿಗೇರಿ, ನಗರಸಭಾ ಪೌರಾಯುಕ್ತೆ ರಾಧಿಕಾ, ನಗರಸಭಾ ಮಾಜಿ ಅಧ್ಯಕ್ಷೆ ಕೋಕಿಲಾ, ಮಾಜಿ ಉಪಾಧ್ಯಕ್ಷ ಟಿ.ಆರ್.ಪ್ರಸನ್ನಕುಮಾರ್ ಸೇರಿದಂತೆ ಇತರರು ಹಾಜರಿದ್ದರು.

ಪ್ರಬುದ್ಧರಾಗಿರುವ ನಮಗೆ ಕಾಂಗ್ರೆಸ್ ಅನಿವಾರ್ಯ ಅಲ್ಲ

ಧರ್ಮಗುರುಗಳ ಆಕ್ರೋಶ



ಮುಸ್ಲಿಂ ಧರ್ಮಗುರುಗಳು ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಮಂಡ್ಯ, ಏ.25–ಬಿಜೆಪಿ ಮುಸ್ಲಿಮರ ವಿರೋಧಿ ಎಂದು ನಮ್ಮನ್ನು ನಂಬಿಸಿ ಕಳೆದ 2023ರ ಚುನಾವಣೆಯಲ್ಲಿ ನಮ್ಮ ಸಮುದಾಯದ ಮತಗಳನ್ನು ಪಡೆದು ಅಧಿಕಾರಕ್ಕೆ ಬಂದ ಕಾಂಗ್ರೆಸ್, ನಮ್ಮನ್ನು ಗುಲಾಮರಂತೆ ನಡೆಸಿಕೊಳ್ಳುತ್ತಿದೆ ಎಂದು ಮುಸ್ಲಿಂ ಧರ್ಮಗುರುಗಳು ಆರೋಪ ಮಾಡಿದ್ದಾರೆ.

ದಾವಣಗೆರೆ ಕ್ಷೇತ್ರಕ್ಕೆ ನಡೆದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸಮರ್ಥ್ ಪರ ಪ್ರಚಾರ ಮಾಡಿಲ್ಲ ಎಂದು ನಸೀರ್ ಅಹ್ಮದ್ ಹಾಗೂ ಅಬ್ದುಲ್ ಜಬ್ಬಾರ್ ಅವರನ್ನು ಏಕಾಏಕಿ ಹುದ್ದೆಯಿಂದ ವಜಾ ಮಾಡಲಾಗಿದೆ. ಮತ ಎಣಿಕೆವರೆಗೂ ಕಾಯದೆ ಹಾಗೂ ಅವರಿಗೆ ಯಾವುದೇ ನೋಟಿಸ್ ನೀಡದೆ ಕಿತ್ತು ಹಾಕಲಾಗಿದೆ ಎಂದು ಮುಸ್ಲಿಂ ಧರ್ಮಗುರು ಅಬ್ದುಲ್ ಖದೀರ್ ಅಹ್ಮದ್ ಸುದ್ದಿಗೋಷ್ಠಿಯಲ್ಲಿ ಆಕ್ರೋಶ ವ್ಯಕ್ತಪಡಿಸಿದರು.

ನಮಗೆ ನಿಮ್ಮ ಅವಶ್ಯಕತೆ ಇಲ್ಲ: ನಿಮಗೆ ನಮ್ಮ ಅವಶ್ಯಕತೆ ಇದೇ ಹೊರತು, ನಮಗೆ ನಿಮ್ಮ ಅವಶ್ಯಕತೆ ಇಲ್ಲ. 136 ಶಾಸಕರು ಗೆಲ್ಲಲು ಎಲ್ಲ ಸಮಾಜದ ಕೊಡುಗೆ ಇದೆ. ಆದರೆ, ನಮ್ಮ ಮುಸ್ಲಿಂ ಸಮುದಾಯ ಶೇ. 92ರಷ್ಟು ಮತ ಹಾಕಿದ್ದರಿಂದಲೇ ಇಂದು ನೀವು ಅಧಿಕಾರ ಅನುಭವಿಸುತ್ತಿರುವುದು. ಅಧಿಕಾರಕ್ಕೆ ಬಂದ ಮೇಲೆ ನಮ್ಮ ಸಮುದಾಯಕ್ಕೆ ಏನು ಮಾಡಿದ್ದೀರಿ ಎಂದು ಪ್ರಶ್ನಿಸಿದರು.

ಕಾಂಗ್ರೆಸ್ ಮಾತ್ರ ಅನಿವಾರ್ಯವಲ್ಲ: ಇಂದು ನಾವೂ ಪ್ರಬುದ್ಧರಾಗಿದ್ದೇವೆ. ನಮಗೆ ಎಲ್ಲ ಪಕ್ಷಗಳು ಬೇಕೆಂದು ತಿಳಿದಿದೆ. ಇಲ್ಲಿಯ ತನಕ ನಮ್ಮ ಕಣ್ಣಿಗೆ ಬಟ್ಟೆ ಕಟ್ಟಿ ನಿಮಗೆ ಬೇಕಾದಂತೆ ಬಳಸಿಕೊಂಡಿದ್ದೀರಿ. ನಮಗೆ ಕಾಂಗ್ರೆಸ್ ಮಾತ್ರ ಅನಿವಾರ್ಯವಲ್ಲ. ಇದನ್ನು ಕಾಂಗ್ರೆಸ್ ನಾಯಕರು ಮನಗಾಣಬೇಕೆಂದು ಖಡಕ್ ಎಚ್ಚರಿಕೆ ನೀಡಿದರು. ಚುನಾವಣೆ ಇನ್ನೂ ಎರಡು ವರ್ಷ ಇದೆ. ಚುನಾವಣೆ ಹತ್ತಿರ ಬಂದಾಗ ನೋಡೋಣ ಎಂಬ ಭಾವನೆ ನಿಮ್ಮದು. ಮತದಾರರು ಇವತ್ತು ಪ್ರಬುದ್ಧರಾಗಿದ್ದಾರೆ. 2028ರ ಚುನಾವಣೆಗೆ ತಕ್ಕ ಪಾಠ ಕಲಿಸಬೇಕಾಗುತ್ತದೆ. ಸದ್ಯದಲ್ಲೇ ಕಾಂಗ್ರೆಸ್ ತಮ್ಮ ನಿರ್ಧಾರ ಬದಲಿಸಬೇಕು. ನಮಗೆ ನ್ಯಾಯ ಒದಗಿಸದಿದ್ದಲ್ಲಿ ಮುಂದಿನ ದಿನಗಳಲ್ಲಿ ಬೆಂಗಳೂರಿನ ಅರಮನೆ ಮೈದಾನದಲ್ಲಿ ಬೃಹತ್ ಸಮಾವೇಶ ನಡೆಸಿ ಮುಂದಿನ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ಖಡಕ್ ಎಚ್ಚರಿಕೆ ನೀಡಿದರು.

ಅಕ್ಕರೆಯ ಅಂಗಳದಲ್ಲಿ ಮಕ್ಕಳೊಂದಿಗೆ ಸಚಿವ ಚಲುವರಾಯಸ್ವಾಮಿ ಸಂವಾದ

ಶ್ರೀರಂಗಪಟ್ಟಣ, ಏ.25–ತಾಲೂಕಿನ ಪಾಲಹಳ್ಳಿ ಗ್ರಾಮದಲ್ಲಿ ಗ್ರಾಮ ಪಂಚಾಯತ್ ಹಾಗೂ ಅರಿವು ಕೇಂದ್ರ ಆಯೋಜಿಸಿರುವ ಗ್ರಾಮೀಣ ಮಕ್ಕಳ ಬೇಸಿಗೆ ಶಿಬಿರ "ಅಕ್ಕರೆಯ ಅಂಗಳ"ಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಭೇಟಿ ನೀಡಿ ಮಕ್ಕಳೊಂದಿಗೆ ಸಂವಾದ ನಡೆಸಿದರು. ಈ ವೇಳೆ ಅವರು ಮಕ್ಕಳ ಮಾನಸಿಕ ಸ್ಥೈರ್ಯ, ಪಠ್ಯೇತರ ಚಟುವಟಿಕೆಗಳನ್ನು ಹೆಚ್ಚಿಸಲು ಬೇಸಿಗೆ ಶಿಬಿರಗಳು ಸಹಕಾರಿ ಎಂದರು. ಶಾಸಕರಾದ ರಮೇಶ್ ಬಾಬು ಬಂಡಿಸಿದ್ದೇಗೌಡ, ಜಿಪಂ ಸಿಇಓ ಕೆಆರ್ ನಂದಿನಿ, ಜಿಲ್ಲಾ ಉಪ ಕಾರ್ಯದರ್ಶಿ ಲಕ್ಷ್ಮೀ, ಕಾರ್ಯನಿರ್ವಹಣಾಧಿಕಾರಿ ಚಂದ್ರ, ತ್ರಿವೇಣಿ, ಪಿಡಿಓ ರವಿ, ಪಿಎಸ್ ಚಂದ್ರಶೇಖರ್, ಗೋವಿಂದ ರಾಜು ಮತ್ತು ಅರಿವು ಕೇಂದ್ರದ ಗ್ರಂಥಪಾಲಕ ಚಂದ್ರು ಹಾಜರಿದ್ದರು.



ಬೃಂದಾವನ ಕಾರಂಜಿ ನವೀಕರಣ ಅಭಿವೃದ್ಧಿ ಕಾರ್ಯಕ್ಕೆ ಗುದ್ದಲಿ ಪೂಜೆ



ತಾಲೂಕಿನ ವಿವಿಧೆಡೆ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ರಮೇಶ್ ಬಂಡಿಸಿದ್ದೇಗೌಡ ಗುದ್ದಲಿ ಪೂಜೆ ನೆರವೇರಿಸಿದರು.

ಶ್ರೀರಂಗಪಟ್ಟಣ, ಏ.25– ಕೆಆರ್‌ಎಸ್ ಬೃಂದಾವನದ ಕಾರಂಜಿ ಅಭಿವೃದ್ಧಿಯೂ ಸೇರಿದಂತೆ ತಾಲೂಕಿನ ವಿವಿಧೆಡೆ ಹಲವು ಕಾಮಗಾರಿಗಳಿಗೆ ಶಾಸಕ ರಮೇಶ್ ಬಂಡಿಸಿದ್ದೇಗೌಡ ಶನಿವಾರ ಚಾಲನೆ ನೀಡಿದರು.

ಬೆಳಗೊಳ ಹೋಬಳಿಯಲ್ಲಿ ಬೆಳಗ್ಗೆ 9 ಗಂಟೆಗೆ ಪ್ರವಾಸ ಆರಂಭಿಸಿದ ಶಾಸಕರು, ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಅಂಕಗಳೊಂದಿಗೆ ಉತ್ತೀರ್ಣರಾದ ಹುಲಿಕೆರೆ ಗ್ರಾಪಂ ವ್ಯಾಪ್ತಿಯ ಶಾಲಾ ಮಕ್ಕಳನ್ನು ಅಭಿನಂದಿಸಿದರು. ಇದೇ ವೇಳೆ ವಿಕಲಚೇತನರಿಗೆ ಮೂರು ಚಕ್ರದ ಬೈಸಿಕಲ್ ವಿತರಿಸಿದರು. ಮಹಿಳೆಯರಿಗೆ ಹೊಲಿಗೆ ಯಂತ್ರ ವಿತರಿಸಿದರು. ನಂತರ ಹುಲಿಕೆರೆ ಗ್ರಾಮದಲ್ಲಿ 3 ಕೋಟಿಯ ಅಂದಾಜು ವೆಚ್ಚದ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿದರು.

ಬಳಿಕ ಜಲಧಾರೆ ಯೋಜನೆ ಅಡಿ 24 ಗಂಟೆ ನಿರಂತರ ನೀರು ಪೂರೈಸುವ ಬಹುಗ್ರಾಮ ಕುಡಿಯುವ ನೀರು ಯೋಜನೆಯಡಿ 33 ಕೋಟಿಯ ಬೃಹತ್ ಕಾಮಗಾರಿಗೆ ಕೆಆರ್‌ಎಸ್ ಗ್ರಾಮದಲ್ಲಿ ಶಾಸಕರು ಗುದ್ದಲಿ ಪೂಜೆ ನೆರವೇರಿಸಿದರು. ನಂತರ 10 ಕೋಟಿ ವೆಚ್ಚದ ಕಾವೇರಿ ನೀರಾವರಿ ನಿಗಮದ ಕಚೇರಿ ಕಟ್ಟಡ ನಿರ್ಮಾಣ, 47.50 ಲಕ್ಷ ರೂ. ಗಳಲ್ಲಿ ಕೆಆರ್‌ಎಸ್ ಸಂತೇಮಾಳದ ಬಳಿ ಅತ್ಯಾಧುನಿಕ ಬಸ್ ಪ್ರಯಾಣಿಕರ ತಂಗುದಾಣ ನಿರ್ಮಾಣ ಹಾಗೂ ಸುಮಾರು 5 ಕೋಟಿ ವೆಚ್ಚದಲ್ಲಿ ಕೈಗೊಂಡಿರುವ ಬೃಂದಾವನ ಕಾರಂಜಿಯ 3ನೇ ಅಂಕಣದ ಅಭಿವೃದ್ಧಿ ಕಾಮಗಾರಿಗೂ ಚಾಲನೆ ನೀಡಿದರು.

ಸುಮಾರು 5 ಕೋಟಿ ರೂ. ಅಂದಾಜು ವೆಚ್ಚದ ಕೆಆರ್‌ಎಸ್ ಗ್ರಾಮದ ರೈಲ್ವೆ ಸ್ಟೇಷನ್ ರಸ್ತೆ ಅಭಿವೃದ್ಧಿ, 5 ಕೋಟಿ ವೆಚ್ಚದಲ್ಲಿ ಅರಳಿ ಕಟ್ಟೆ ವೃತ್ತದಲ್ಲಿ ಕೈಗೊಂಡಿರುವ ಬೃಹತ್ ಕ್ಲಾಕ್ ಟವರ್ ನಿರ್ಮಾಣ ಹಾಗೂ ಸುಮಾರು 40 ಲಕ್ಷ ಅಂದಾಜು ಮೊತ್ತದಲ್ಲಿ ಅಲ್ಪಸಂಖ್ಯಾತರ ಕಾಲೋನಿಯ ರಸ್ತೆ ಅಭಿ ವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿದರು.

ತಹಸೀಲ್ದಾರ್ ಚೇತನ ಯಾದವ್, ನೀರಾವರಿ ನಿಗಮದ ಇಇ ಜಯಂತ್, ತಾಪಂ ಇಓ ಚಂದ್ರು, ಕೆಇಬಿ ಎಇಇ ಮಂಜುಪ್ರಸಾದ್, ಕೆಆರ್‌ಎಸ್ ಸಿಪಿಐ ವಿವೇಕಾನಂದ ಸೇರಿದಂತೆ ಅಧಿಕಾರಿ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ನಾರಿಶಕ್ತಿ ಫೋರಂ ಮಹಿಳಾ ಘಟಕದಿಂದ ಪ್ರತಿಭಟನೆ

ಚಾಮರಾಜನಗರ: ನಾರಿಶಕ್ತಿ ವಂದನಾ ಅಧಿನಿಯಮವನ್ನು ಜಾರಿಯಾಗದಂತೆ ತಡೆದ ಕಾಂಗ್ರೆಸ್ ಹಾಗೂ ಮಿತ್ರಪಕ್ಷಗಳ ವಿರೋಧಿ ಧೋರಣೆ ಖಂಡಿಸಿ ನಗರದಲ್ಲಿ ನಾರಿಶಕ್ತಿ ಫೋರಂ ಮಹಿಳಾ ಘಟಕದ ಪದಾಧಿಕಾರಿಗಳಿಂದ ಪ್ರತಿಭಟನೆ ನಡೆಸಲಾಯಿತು.



ಚಾಮರಾಜನಗರದಲ್ಲಿ ನಾರಿಶಕ್ತಿ ಫೋರಂ ವತಿಯಿಂದ ಶನಿವಾರ ಪ್ರತಿಭಟನೆ ನಡೆಸಲಾಯಿತು.

ನಗರದ ಚಾಮರಾಜೇಶ್ವರಸ್ವಾಮಿ ದೇವಾಲಯದ ಆವರಣದಿಂದ ಘೋಷಣೆಗಳನ್ನು ಕೂಗಿ ಭುವನೇಶ್ವರಿ ವೃತ್ತದಲ್ಲಿ ಜಮಾವಣೆಗೊಂಡ ಮಹಿಳೆಯರು ಕಾಂಗ್ರೆಸ್ ಹಾಗೂ ಮಿತ್ರಪಕ್ಷಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಮಹಿಳೆಯರನ್ನು ಸಾಮಾಜಿಕ, ಆರ್ಥಿಕವಾಗಿ, ರಾಜಕೀಯವಾಗಿ ಮೇಲೆ ತರಲು ಪ್ರಧಾನಮಂತ್ರಿ ನರೇಂದ್ರ ಮೋದಿ, ನಾರಿ ಶಕ್ತಿ ವಂದನ ಅಧಿನಿಯಮ ಜಾರಿಗೊಳಿಸುವ ಸಂಬಂಧ ಸರ್ವ ಪಕ್ಷಗಳ ಅಂಗೀಕಾರ ಪಡೆಯಲು ಸದನದಲ್ಲಿ ಮಂಡಿಸಿದ್ದರು. ಕಾಂಗ್ರೆಸ್ ಹಾಗೂ ಮಿತ್ರಪಕ್ಷಗಳು ಅಧಿನಿಯಮಕ್ಕೆ ವಿರೋಧ ವ್ಯಕ್ತಪಡಿಸಿ, ಸಹಿ ಹಾಕಲಿಲ್ಲ, ಮಹಿಳೆಯರಿಗೆ ಕಾಂಗ್ರೆಸ್ ಗೌರವ ಕೊಡದೇ, ಅವರಿಗೆ ಅವಮಾನ ಮಾಡಿದೆ, ಮಹಿಳೆಯರ ಪಾತ್ರವನ್ನು ವಿರೋಧಿಸುವ ಗುಂಪಿನಲ್ಲಿ ಕಾಂಗ್ರೆಸ್ ಮಹತ್ವದ ಪಾತ್ರ ವಹಿಸುತ್ತ ಬಂದಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಈ ವೇಳೆ ಘಟಕದ ಡಾ.ನಿರ್ಮಲ ಮಾತನಾಡಿ, ಪ್ರಸ್ತುತ ಮಹಿಳೆಯರ ಜನಸಂಖ್ಯೆ ಶೇ. 50ರಷ್ಟು ಹೆಚ್ಚು ಎಲ್ಲಾ ರಂಗದಲ್ಲೂ ಸಮನಾಗಿ ದುಡಿಯುತ್ತಿದ್ದಾರೆ. 2023ರಲ್ಲಿ ಮಂಡನೆಯಾಗಿರುವ ಮಹಿಳಾ ಮೀಸಲಾತಿಯನ್ನು ರಾಜಕೀಯ ಕಾರಣಕ್ಕಾಗಿ ವಿರೋಧ ಪಕ್ಷಗಳು ತಡೆಹಿಡಿದಿರುವುದು ಖಂಡನೀಯ ಎಂದು ತಿಳಿಸಿದರು.

2011ರ ಜನಗಣತಿ ಅನುಸಾರ ರಾಜಕೀಯವಾಗಿ ಶೇ. 33ರಷ್ಟು ಮೀಸಲಾತಿ 2026ಕ್ಕೆ ಜಾರಿಯಾಗಬೇಕು. ಇಂದಿರಾ ಗಾಂಧಿ, ಮಮತಾ ಬ್ಯಾನರ್ಜಿ, ನಿರ್ಮಲಾ ಸೀತರಾಮನ್ ಸೇರಿದಂತೆ ಅನೇಕ ಮಹಿಳೆಯರು ತಮಗೆ ಅಧಿಕಾರ ಸಿಕ್ಕಿದರೆ ಏನು ಮಾಡುತ್ತೇವೆ ಎಂಬುದನ್ನು ಮಾಡಿ ತೋರಿಸಿದ್ದಾರೆ. ಆದ್ದರಿಂದ ಪಕ್ಷಾತೀತವಾಗಿ ಎಲ್ಲರೂ ಒಗ್ಗೂಡಿ ನಾರಿ ಶಕ್ತಿ ವಂದನಾ ಅಧಿನಿಯಮವನ್ನು ಜಾರಿಯಾಗುವಂತೆ ಮಾಡಬೇಕು ಎಂದು ಆಗ್ರಹಿಸಿದರು.

ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ಮಲೆಯೂರು ಕಮಲಮ್ಮ, ಪ್ರಧಾನ ಕಾರ್ಯದರ್ಶಿ ಶೈಲಾ, ಕುಮಚಹಳ್ಳಿ ಪಾರ್ವತಮ್ಮ, ಸರೋಜಾ, ರಾಜೇಶ್ವರಿ, ವನಜಾಕ್ಷಿ, ರೇಖಾ ಸೇರಿದಂತೆ ಮಹಿಳೆಯರು ಹಾಜರಿದ್ದರು.

ಬಸವೇಶ್ವರ ವೃತ್ತ ನಾಮಫಲಕ ಅನಾವರಣ

ಚಾಮರಾಜನಗರ: ನಗರದ 26ನೇ ವಾರ್ಡ್‌ನಲ್ಲಿರುವ ವಿವೇಕ ನಗರ ಬಡಾವಣೆಯ ವೃತ್ತಕ್ಕೆ ಶ್ರೀ ಬಸವೇಶ್ವರ ವೃತ್ತ ಎಂದು ನಾಮಕರಣ ಮಾಡಲಾಗಿದ್ದು, ಮರಿಯಾಲ ಮಠ ಹಾಗೂ ನಗರದ ವಿರಕ್ತ ಮಠದ ಶ್ರೀಗಳು ನಾಮಫಲಕ ಅನಾವರಣ ಮಾಡಿದರು.

ಅಲ್ಲದೇ ವರ್ತಕರ ಭವನದ ಪಕ್ಕದ ಪೆಟ್ರೋಲ್ ಬಂಕ್ ಪಕ್ಕದಿಂದ ವಿವೇಕನಗರಕ್ಕೆ ಬರುವ ರಸ್ತೆಗೆ ಶರಣೆ ಅಕ್ಕ ಮಹಾದೇವಿ ರಸ್ತೆ ಎಂದು ನಾಮಕರಣ ಮಾಡಿ ನಾಮಫಲಕ ಅನಾವರಣ ಮಾಡಲಾಯಿತು.

ನೂತನ ಬಸವೇಶ್ವರ ವೃತ್ತದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮರಿಯಾಲ ಮಠದ ಶ್ರೀ ಮುರುಘರಾಜೇಂದ್ರ ಸ್ವಾಮೀಜಿ ಹಾಗೂ ನಗರದ ಸಿದ್ಧಮಲ್ಲೇಶ್ವರ ವಿರಕ್ತ ಮಠದ ಶ್ರೀ ಚೆನ್ನ ಬಸವಸ್ವಾಮೀಜಿ ನಾಮಫಲಕ ಅನಾವರಣ ಮಾಡಿದರು.

ಈ ಸಂದರ್ಭದಲ್ಲಿ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಮಾತನಾಡಿದ ಮರಿಯಾಲದ ಶ್ರೀ ಮುರುಘರಾಜೇಂದ್ರ ಸ್ವಾಮೀಜಿ, 12ನೇ ಶತಮಾನದಲ್ಲಿ ಬಸವಣ್ಣನವರು ತಮ್ಮ ವಚನಗಳ ಮೂಲಕ ಹೇಳದಿರುವ ಯಾವ ವಿಚಾರಗಳೂ ಇಲ್ಲ. ಅವರು ವಚನಗಳ ಮೂಲಕ ಸಮಾಜದ ಎಲ್ಲ ವಿಷಯಗಳ ಬಗ್ಗೆ ತಿಳಿಸಿದ್ದಾರೆ ಎಂದರು.

ಸಿದ್ದಮಲ್ಲೇಶ್ವರ ವಿರಕ್ತ ಮಠದ ಶ್ರೀ ಚನ್ನಬಸವ ಸ್ವಾಮೀಜಿ ಮಾತನಾಡಿ, ಬಸವಣ್ಣನವರು 12ನೇ ಶತಮಾನದಲ್ಲೇ ಸಾಮಾಜಿಕ ಕ್ರಾಂತಿ ಮಾಡಿದರು. ವೈಚಾರಿಕತೆಯನ್ನು ಸಾರಿದರು. ಬಸವಣ್ಣನವರ ನಾಮಫಲಕ ಅಳವಡಿಸಿರುವುದು ಶ್ಲಾಘನೀಯ. ಅವರ ವಿಚಾರಗಳನ್ನೂ ಮೈಗೂಡಿಸಿಕೊಳ್ಳಬೇಕು ಎಂದರು.



ಬಸವೇಶ್ವರ ವೃತ್ತ ನಾಮಫಲಕ ಅನಾವರಣ ಮಾಡಿದ ಗಣ್ಯರು.

ವೀರಶೈವ ನೌಕರರ ಕ್ಷೇಮಾಭಿವೃದ್ಧಿ ಸಂಘದ ಮಾಜಿ ಅಧ್ಯಕ್ಷ ಆರ್.ಎಂ.ಸ್ವಾಮಿ ಮಾತನಾಡಿ ಈ ವೃತ್ತದಲ್ಲಿ ಬಸವೇಶ್ವರ ಪ್ರತಿಮೆ ನಿರ್ಮಾಣ ಮಾಡಲು ಎಲ್ಲರೂ ಕೈಜೋಡಿಸಬೇಕು. ತಾವು 1 ಲಕ್ಷ ರೂ. ನೀಡುವುದಾಗಿ ಪ್ರಕಟಿಸಿದರು. ವಿವೇಕನಗರ ಮುಖಂಡ ಬಿಎಸ್‌ಎನ್‌ಎಲ್ ಗುರುಸ್ವಾಮಿ, ಕಾಡಾ ಅಧ್ಯಕ್ಷ ಪಿ. ಮರಿಸ್ವಾಮಿ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ ಮೂಡ್ಲುಪುರ ನಂದೀಶ್, ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಡಾ. ಶ್ವೇತಾ ಶಶಿಧರ್, ನಗರಸಭೆ ಮಾಜಿ ಸದಸ್ಯೆ ಕುಮುದಾ ಕೇಶವಮೂರ್ತಿ ಮಾತನಾಡಿದರು.

ಜಿ.ಶಶಿಧರ್, ಸಿದ್ದಮಲ್ಲಪ್ಪ,ಉದ್ಯಮಿ ಬಸವಟ್ಟಿಗೆ ಬಸವರಾಜು, ಯೋಗೀಶ್, ನಂದೀಶ್ ಕೊಮಾರನಪುರ, ದೊ.ರಾ.ಪೇಟೆ ಕುಮಾರ್, ನಾಗರಾಜು, ಕಿಲಗೆರೆ ಚಂದ್ರಶೇಖರ್, ಎಸ್‌ಜಿಎಂ ಪ್ರಭುಸ್ವಾಮಿ, ಸಿ. ನಾಗಣ್ಣ, ಡಿ.ಎಸ್. ಗಿರೀಶ್ ಮತ್ತಿತರರು ಉಪಸ್ಥಿತರಿದ್ದರು.

50 ಅಡಿ ಆಳಕ್ಕೆ ಟಿಪ್ಪರ್ ಬಿದ್ದು ಚಾಲಕ ಸಾವು



ಗುಂಡ್ಲುಪೇಟೆ, ಏ.25– ಬಿಳಿಕಲ್ಲು ಹೊರ ತರುತ್ತಿದ್ದ ಟಿಪ್ಪರ್ ಚಾಲಕನ ನಿಯಂತ್ರಣ ತಪ್ಪಿ 50 ಅಡಿ ಆಳಕ್ಕೆ ಬಿದ್ದು ಚಾಲಕ ಸಾವಿಗೀಡಾದ ಘಟನೆ ತಾಲೂಕಿನ ಗುಗ್ಗ ಹಳ್ಳಿ ಸಮೀಪ ನಡೆದಿದೆ.

ದೊಡ್ಡಬಳ್ಳಾಪುರ ಮೂಲದ ರಾಜು ಎಂಬುವರ ಪುತ್ರ ಸುಬ್ಬು (35) ಮೃತರು. ಉದ್ಯಮಿ ಮಧು ಎಂಬುವರಿಗೆ ಸೇರಿದ ಕ್ವಾರಿಯಿಂದ ಕಲ್ಲನ್ನು ಮೇಲೆ ಸಾಗಿಸುವಾಗ ಚಾಲಕನ ನಿಯಂತ್ರಣ ತಪ್ಪಿದ



ಪರಿಣಾಮ 50 ಅಡಿ ಆಳಕ್ಕೆ ಟಿಪ್ಪರ್ ಬಿದ್ದಿದೆ. ಇದರಿಂದ ಟಿಪ್ಪರ್ ಜೊತೆ ಬಿದ್ದ ಚಾಲಕ ಕೂಡ ಸ್ಥಳದಲ್ಲೆ ಸಾವನ್ನಪ್ಪಿದ್ದಾನೆ. ಈ ಬಗ್ಗೆ ಪಟ್ಟಣದ ಪೊಲೀಸರು ಮೃತದೇಹವನ್ನು ಹೊರತೆಗೆಸಿ ಮರಣೋತ್ತರ ಪರೀಕ್ಷೆಗೆ ಕೊಂಡೊಯ್ದರು. ಇನ್ನೂ ಪ್ರಕರಣ ದಾಖಲಾಗಿಲ್ಲ

ಸಾಲುಮರಗಳನ್ನು ಉಳಿಸಲು ಮುಂದಾಗಿ: ಜಿ.ನಿಜಗುಣರಾಜು

ಚಾಮರಾಜನಗರ, ಏ.25– ಕಳೆದ ಹತ್ತು ವರ್ಷಗಳ ಹಿಂದೆ ನೆಟ್ಟ ಸಾಲು ಗಿಡಗಳು ಇಂದು ಮರಗಳಾಗಿ ಉತ್ತಮವಾದ ಆಮ್ಲಜನಕವನ್ನು ಮತ್ತು ನೆರಳನ್ನು ನೀಡುತ್ತಿದೆ. ಇದನ್ನು ಸಂರಕ್ಷಣೆ ಮಾಡಲು ಮುಂದಾಗಬೇಕಾಗಿದೆ ಎಂದು ಮಾಜಿ ಕಾಡ ಅಧ್ಯಕ್ಷ ಜಿ.ನಿಜಗುಣರಾಜು ಕರೆ ನೀಡಿದರು.

ನಗರದ ರೈಲ್ವೆ ನಿಲ್ದಾಣದ ರಸ್ತೆಯಲ್ಲಿ ಈಶ್ವರಿ ಸೋಷಿಯಲ್ ಟ್ರಸ್ಟ್ ಆಯೋಜಿಸಿದ್ದ ಸಾಲು ಗಿಡಮರಗಳ ದಶಮಾನೋತ್ಸವ ಕಾರ್ಯಕ್ರಮವನ್ನು ಗಿಡನೆಡುವುದರ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು. ಬಿ.ರಾಚಯ್ಯ ಜೋಡಿರಸ್ತೆಯಲ್ಲಿ ಅಭಿವೃದ್ಧಿ ಕಾಮಗಾರಿಯು ನಡೆಯುತ್ತಿದ್ದು ಇದರಿಂದ ಸಾಲುಮರಗಳಿಗೆ ಹಾನಿಯಾಗಿದೆ ಕಾನೂನಿನನ್ವಯ ಮರದ ಸುತ್ತ ನೀರು ಹಿಂಗಲು ಸ್ಥಳ ಬಿಡಬೇಕು. ಅದರೆ ಗುತ್ತಿಗೆದಾರರು ಈ ಕೆಲಸ ಮಾಡದೆ, ಮರದ ಸುತ್ತ ಜಲ್ಲಿಕಲ್ಲುಗಳನ್ನು ತುಂಬಿ ಅದರ ಬೆಳವಣಿಗೆಯನ್ನು ಕುಂಟಿತ ಮಾಡಿದ್ದಾರೆ. ಇದಕ್ಕೆ ವಿಷಾದವನ್ನು ವ್ಯಕ್ತ ಪಡಿಸುತ್ತೇನೆ. ಮುಂದಿನ ದಿನಗಳಲ್ಲಿ ತಾಪಮಾನವು ಅಧಿಕವಾಗುವ ಮುನ್ಸೂಚನೆ ಇರುವುದರಿಂದ ಸಾಲು ಮರಗಳ ರಕ್ಷಣೆಗೆ ಮುಂದಾಗಬೇಕು ಎಂದರು.

ಈ ಸಂದರ್ಭದಲ್ಲಿ ಸಾಲುಮರದ ವೆಂಕಟೇಶ್ ಅವರ ಕೆಲಸಕ್ಕೆ ಮೆಚ್ಚುಗೆ ವ್ಯಕ್ತ ಪಡಿಸಿದರು.

ಮುಖ್ಯ ಅತಿಥಿಗಳಾಗಿ ಪರಿಸರವಾದಿ ಪುಣಜನೂರು ದೊರೆಸ್ವಾಮಿ ಅವರು ಮಾತನಾಡಿ ನಗರದಲ್ಲಿ ಹಿಂದೆ ದೊಡ್ಡ ದೊಡ್ಡ ಕೆರೆಕಟ್ಟೆಗಳು ಇದ್ದವು ಅದರಿಂದ ನಮಗೆ ಕುಡಿಯುವ ನೀರು ದೊರೆಯುತ್ತಿತ್ತು ರಾಜಕಾರಣಿಗಳ ನಿರ್ಲಕ್ಷತನದಿಂದ ಅವುಗಳನ್ನು ಮುಚ್ಚಿ ನೀರಿಗೆ ಆಹಾಕಾರ ಪಡುವಂತಾಗಿ ಕುಡಿಯುವ ನೀರನ್ನು ಟಿ.ನರಸಿಪುರದಿಂದ ಚಾಮರಾಜ ನಗರಕ್ಕೆ ಪಡೆದುಕೊಳ್ಳುವಂತಾಯಿತು. ಹೀಗೆ ಪರಿಸರವನ್ನು ನಾಶಮಾಡದೇ ಅದನ್ನು ಉಳಿಸಿ ಮುಂದಿನ ಪೀಳಿಗೆಗೆ ಕೊಡುವಂತಾಗಬೇಕು. ಇದಲ್ಲದೆ ಕೆರೆಕಟ್ಟೆಗಳನ್ನು ಮುಚ್ಚಿ ಅಲ್ಲಿ ಬೃಹತ್ ಕಟ್ಟಡಗಳನ್ನು ನಿರ್ಮಿಸಿದರು. ಇದರಿಂದ ಅಂತರ್ ಜಲ ಮಟ್ಟ ಕುಸಿಯಿತು. ನಾವು ಗಿಡಮರಗಳನ್ನು ಬೆಳೆಸುವುದರಿಂದ ಅಂತರ್‌ಜಲ ಮಟ್ಟವನ್ನು ಹೆಚ್ಚಿಸಬಹುದಾಗಿದೆ ಎಂದು ಹೇಳಿದರು.

ಈಶ್ವರಿ ಸೋಷಿಯಲ್ ಟ್ರಸ್ಟ್ ಸಂಸ್ಥಾಪಕ ಸಾಲುಮರದ ಸಿ.ಎಂ.ವೆಂಕಟೇಶ್ ಮಾತನಾಡಿ ಈ ಹತ್ತು ವರ್ಷಗಳಲ್ಲಿ 17 ಸಾವಿರ ಸಾಲು ಗಿಡಮರಗಳನ್ನು ಬೆಳೆಸಲು ಹಾಗೂ ಪೋಷಣೆಮಾಡಲು ಸಹಕಾರ ಮತ್ತು ಸಹಾಯಮಾಡಿದ ಜಿಲ್ಲೆಯ ಜನತೆಗೆ ಮತ್ತು ಸಂಘ ಸಂಸ್ಥೆಗಳಿಗೆ ಕೃತಜ್ಞತೆಯನ್ನು ತಿಳಿಸಿದರು.



ರೋಟರಿ ವಲಯ–09 ಸಹಾಯಕ ಗೌರ್ನರ್ ಡಿ.ಎಸ್.ಗಿರೀಶ್, ವರ್ತಕರಾದ ಆರ್.ಯೋಗರಾಜು, ಮಹದೇವಸ್ವಾಮಿ, ಮಾಜಿ ನಗರಸಭಾ ಸದಸ್ಯ ಇಮ್ರಾನ್, ಕನ್ನಡಪರ ಹೋರಾಟಗಾರ ಚಾ.ಹ.ಶಿವರಾಜು, ಗಾಯಕ ಆರ್.ಮಹೇಂದ್ರ ಮುಂತಾದವರು ಇದ್ದರು.

ವಾರದ ಮಿತ್ರ
ಸಾಪ್ತಾಹಿಕ ಪುರವಣಿ
ಮೈಸೂರು ಮಿತ್ರ
ಭಾನುವಾರ 26-04-2026


'ಮೈಸೂರು ಮಿತ್ರ' ವಾರ್ಷಿಕ ಕಥಾ ಸ್ಪರ್ಧೆ-2026

ದ್ವಿತೀಯ ಬಹುಮಾನಿತ ಕಥೆ

ಕತ್ತಲೆಯ ಕಣ್ಣು



ಲೇಖಕರು
ಎನ್. ರಾಜಶೇಖರ ಆರಾಧ್ಯ
(ಎನ್.ಆರ್. ಆರಾಧ್ಯ ನೆಬೆ)
ಬಿಳಿಕೆರೆ, ಹುಣಸೂರು
ತಾಲೂಕು, ಮೈಸೂರು-03
ಮೊ : 73489 10224



ಹೆಚ್.ಜಿ.ಎನ್.ಪ್ರಸಾದ್.

ಇಡೀ ಕೇರಿಯ ಧೂಳನ್ನು ಎಬ್ಬಿಸುತ್ತಾ ಅಕ್ಕ ಪಕ್ಕದ ಮನೆಗಳಿಗೆ ಧೂಳಿನ ಪೌಡರ್ ಸಿಂಪಡಿಸುತ್ತಾ, ಬೊಯ್ಯುಗುಡುತ್ತಾ ವೇಗವಾಗಿ ಬಂದು ಎರಡು ಬಿಳಿಕಾರು, ಒಂದು ಕೆಂಪನೆಯ ಕಾರು ಗುಡ್ಡಳ್ಳಿಯ ಯಜಮಾನ ಪರಮೇಶಿಗೌಡ ಮನೆ ಬಳಿ ಧೊತ್ತನೆ ನಿಂತವು. ಅಲ್ಲೆ ಮುಂದೆ ಕುಂತಿದ್ದ ಕೆಂಪ ಕಾರನ್ನು ನೋಡೇ ಇಲ್ಲವೇನೋ ಅನ್ನುವಂತಿತ್ತು ಅವನ ಮಂದಾರ. ಕಾರಿನಿಂದ ಇಳಿದ ಮಂದಿ. ಗೌಡ್ರೆ... ಗೌಡ್ರೆ... ಗೌಡ್ರರಿದ್ದಾರೇನಪ್ಪಾ.. ಕೆಂಪನನ್ನು ಪ್ರಶ್ನಿಸಿದರು. ಮಬ್ಬಿಂದ ಎದ್ದು ಬಂದಂತಿದ್ದ ಕೆಂಪ, ಗೌಡರ ಮುಂಬಾಗಿಲ ತಳ್ಳಿ ತಲೆಯನ್ನು ತೂರಿಸಿ, ಗೌಡ್ರೆ ಗೌಡ್ರೆ ಎಂದು ಅರಚಿದ. ಯಾಕ್ಲಾ ಅಂಗೆ ಅರ್ಚಿಯಾ, ಯಾರು ಬಂದ್ರು 'ಪ್ಯಾಟೇಯಾಗಿನ ಮಂದಿ ಬಂದ್ಯಾರ. ನಿಮ್ಮನ್ನ ಕೇಳ್ತಾವ್ರೆ' ಜೋರಾಗೆ ಒಳಗಿದ್ದವರಿಗೆಲ್ಲಾ ಕೇಳಿಸುವಂತೆ ಕೂಗಾಕಿದ. 'ಹೂಂ ಹೂಂ ಬಂದೆ ಅಲ್ಲೆ ಜಗಲಿ ಮ್ಯಾಲೆ ಕೂರಿಸು' ಅಂದ್ರು ಗೌಡ್ರು ಒಳಗಿಂದ್ಲೆ. 'ಕೂತ್ಕಬೇಕಂತೆ ಕಣ್ರಪ್ಪೋ' ಇಲ್ಲೆ ಇಲ್ಲೆ ಕುಂತ್ಕಳಿ ಜಗಲಿ ತೋರಿಸಿದ ಕೆಂಪ. ಅಲ್ಲೇ ಇದ್ದ ಚಾಪೇನಾ ಬಂದ ಮಂದೀನೆ ಎಳ್ಕೊಂಡು ಹಾಸಿ ಕೂತ್ಕೊಂಡ್ರು. ಹಣೆಯಾಗ ಪಟ್ಟೆ ವಿಭೂತಿ ಹಾಕಿದ, ದೊಡ್ಡನೆಯ ಮೀಸೆಯೊತ್ತ , ಹೆಗಲಮ್ಯಾಲ ಶಾಲು ಹೊದ್ದುಕೊಂಡಿದ್ದ ಪರಮೇಶಿಗೌಡ್ರು ಹೊರಗೆ ಬಂದು ಎಲ್ರಿಗೂ ನಮಸ್ಕರಿಸಿದರು. ಪರಸ್ಪರ ಪರಿಚಯ ಮಾಡಿಕೊಂಡರು. ಹೇಳಿ ನನ್ನಿಂದ ಏನಾಗಬೇಕಿತ್ತು. ನಾವು ಫ್ಯೂಚರ್ ಡೆವಲೆಪರ್ಸ್‌ನಿಂದ ಬಂದಿದ್ದೇವೆ. ನಿಮ್ಮ ಹಳ್ಳಿ ಸಿಟಿಗೆ 25 ಕಿಲೋಮೀಟರ್ ಇದೆ. ನಿಮ್ಮ ಸುತ್ತಮುತ್ತ ಪರಿಸರ ಕೂಡ ಚೆನ್ನಾಗಿದೆ. ಇಲ್ಲೆ ನೂರೈವತ್ತು ಎಕ್ರೆ ಪರ್ಚೇಸ್ ಮಾಡಿ ವಸತಿ ಉದ್ದೇಶಕ್ಕೆ ನಿಮ್ಮೂರ್ನ ಹೆಸರ್ನೆ ಗುಡ್ಡಳ್ಳಿ ಎನ್‌ಕ್ಲೈವ್ ಅಂತ ಇಟ್ಟಿದ್ದೇವೆ. ನಮ್ಮ ಎನ್‌ಕ್ಲೈವ್ ಪಕ್ಕದಲ್ಲೇ ನಿಮ್ಮದು ಒಟ್ಟು 30 ಎಕ್ರೆ ಇದೆ. ಕೊಟ್ರೆ ನಿಮ್ಮ ಹೊಲದ ಪಕ್ಕದಲ್ಲೆ ಈರಮ್ಮನ ಗುಡ್ಡ ಇದೆ. ನಮ್ಮ ಬಡಾವಣೆಗೆ ಒಂದು ಹೊಸತನ ಕೊಡಬಹುದು. ಇದುವರೆಗೂ ಎಲ್ರೂಗೂ ಒಂದು ಎಕ್ರೆಗೆ ಎಷ್ಟು ಕೊಟ್ಟಿದ್ದೇವೆ ಅಂತ ನಿಮಗೇನೆ ಗೊತ್ತಿದೆ. ಆದ್ರೆ ನಿಮಗೆ ಒಂದು ಎಕ್ರೆಗೆ ಒಂದೂವರೆ ಕೋಟಿ ಕೊಡ್ತೇವೆ. ಇದು ಫೈನಲ್ ರೇಟ್ ನೋಡಿ ಕೊಡೊದಾದ್ರೆ, ಅಷ್ಟರಲ್ಲಿ ಗೌಡತಿ ಟೀ ನೀಡುತ್ತಾರೆ. ನೋಡಿ ನಿಮ್ಗೆ ಆಗ್ಲೇ ನನ್ನ ನಿರ್ಧಾರನ ಹೇಳಿವ್ನಿ. ಇರೋ ಭೂತಾಯಿನ ಕುಡಿಕೆ ಕಾಸ್ಗೆ ಕೊಟ್ಟುಬುಟ್ಟು , ಆಮೇಕೆ ನಾನು ಯಾನ ಮಾಡಕಾದಾತು. ಕೊಡೊಂಗಿಲ್ಲ ಆಗ್ಲೂ ಹೇಳಿವ್ನಿ, ಈಗ್ಲೂ ಹೇಳ್ತಾ ಇವ್ನಿ. ನೀವೆಲ್ಲ ಜನ್ರಿಗೆ ಧನಧಾನ್ಯ ಕೊಡೋ ಜಮೀನ ತಕ್ಕಂಡು ಬಡಾವಣೆ ಮಾಡ್ತಾ, ಯಾರ್ಯಾರಿಗೋ ಮಾರ್ಕೊಂಡು ಕಾಸು ಮಾಡ್ಕಳ್ತಾರು ನೀವು. ಮಾರಿದ್ದ ಹಣದಿಂದ ಅಲ್ಪದಿವ್ಸ ತಲೇಲೇ ತೇಲಿ ಖರ್ಚು ಮಾಡ್ಕೊಂಡು ಬೀದಿಗೆ ಬೀಳ್ತಾರು ರೈತರು. ನೀವು ಹೀಂಗೆ ಮಾಡ್ತಾ ಹೊಂಟ್ರೆ ಹೆಂಗೆ ಅಂತಾ! ಬೇಸಾಯ ಮಾಡೋಕೆ ಭೂಮಿ ಇಲ್ದೆ, ಕಾಳು ಕಾಳುಗೆ ಬ್ಯಾರೆ ರಾಷ್ಟ್ರದತ್ತ ಅಂಗೈ ಚಾಚುವಂಗೆ ಆಗ್ತಾತೈತೆ. ಮೊದ್ಲು ತಕ್ಕಡಿ ಹಿಡ್ದು ಬ್ಯಾರೆ ದೇಸದ್ವಾರು ಮೂನ್ನೂರು ವರ್ಷ ಆಳುದ್ರು, ಈಗ ಹೀಂಗೆ. ನಿಮ್ದು ಏನೇ ಇದ್ರೂ ಸಿಟಿ ಅಕ್ಕಪಕ್ಕ ಇಟ್ಕಳ್ಳಿ, ಬೇಸಾಯ ಮಾಡೋ ಮಂದಿ ಸಹವಾಸಕ್ಕೆ ಬರ್ಬೇಡಿ. ಇಲ್ಲೋ ನವ್ವುನ ಭವಿಷ್ಯಾನ ಯೋಚ್ನೆ ಮಾಡ್ದೆ ಇರೋ ಜಮೀನು ಮಾರ್ಕಂಡು ಖರ್ಚಾದ್ಮೇಲೆ,

ಹೆಗ್ಲು ಮ್ಯಾಲೆ ಟವಲ್ ಹಾಕ್ಕೊಂಡು ಕೈಯಲ್ಲೊಂದು ಟಿಫನ್‌ಬಾಕ್ಸ್ ಇಟ್ಕೊಂಡು ಪ್ಯಾಟೇಲಿ ಸರ್ಕಲ್‌ನಲ್ಲಿ ಕೂಲಿನಾಲಿ ಕಾಯ್ತಂಗಾತಿದೆ. ಈಗ್ಲೆ ಆಗೈತಿ ಬಿಡಿ. ನೀವು ಯಾನೇ ಆಸೆ ಕೊಟ್ರೂ ನಾನಂತೂ ಕೊಡಾಂಗಿಲ್ಲ. ನನ್ನ ಭೂಮಿಗೆ ನಿಮ್ಮ ಲೇ ಔಟ್‌ನಿಂದ್ಲೆ ನಾನು ಹೋಗ್ಬೇಕು. ನಾನು ಕೊಡ್ಲಿಲ್ಲಾ ಅಂದ್ರೆ, ನನ್ನ ದಾರಿಗೇನಾದ್ರು ನೀವು ತಡೆ ಹಾಕಿದ್ರಿ ಅನ್ಕೊಳ್ಳಿ. ಈಗ ಹೊಸ ಕಾನೂನು ಆಗೈತಿ, ನಮ್ಮ ಜಮೀನಿಗೆ ಹೋಗಾಕೆ ದಾರಿಯಿಲ್ಲಾಂದ್ರೆ, ತಹಸೀಲ್ದಾರ್ಗೆ ದೂರು ಕೊಟ್ಟರು ಸಾಕು, ನೀವು ಬಿಡ್ಬೇಕು, ನಿಮ್ಮಪ್ಪಾನು ಬುಡ್ಬೇಕು ತಿಳೀತಾ!. ಹೋ ಗೌಡ್ರು ಕಾನೂನು ಎಲ್ಲಾನು ತಿಳ್ಕಂಡವ್ರೆ ಕಣ್ರಪ್ಪೋ ಅಲ್ಲಿದ್ದವ್ರೊಬ್ಬ ಉಸುರಿದ 'ಗೌಡ್ರೆ ಅದು ಇದು ಬ್ಯಾಡ ನೀವು ಕೊಡೋವ್ರೋ ಇಲ್ಲಾ ಅನ್ನೌವ್ರೋ' ಆಗ್ಲೇ ಹೇಳಿದ್ನಲ್ಲ ಮೊಗ, ನಾನು ನನ್ನ ಜಮೀನು ಕೊಡುವ್ನಲ್ಲ ಬಂದ ದಾರಿಗೆ ಸುಂಕವಿಲ್ಲ ಅಂತ ವಾಪಸ್ಸೋಗಿ. ನಿಮ್ಮ ಬದುಕು ನೀರ್ನ ಮೇಲ್ನ ಗುಳ್ಳೆತರ. ನಮ್ಮಂತಹ ರೈತರ ಬದುಕು ವಜ್ರತರ ಗಟ್ಟಿಮುಟ್ಟು ಹೊಳೆಯುವಾಗ ಹೊಳೆಯುತ್ತೆ , ಬೇಕೆಂದಾಗ ಗಾಜನ್ನೆ ಕುಯ್ಯುತ್ತೆ. ಹೂಂ ಹೊರಡಿ, ಎದ್ದು ಶಾಲನ್ನೊಮ್ಮೆ ಒದ್ರಿ "ಲೋ ಕೆಂಪ ಕರೆಂಟು ಬಂತು, ತೌಟಕ್ಕೆ ಹೋಗು ನೀರಾಯಿಸ್ತಿರು, ನಾನು ತಂಗ್ಲಿಟ್ಟು ತಿಂದು ನಿನಗೂ ಅಲ್ಗೆ ತರ್ತೀನಿ" ಅಂದು ಒಳಹೊಕ್ಕರು.

* * * *

ಈ ಹಳ್ಳಿಗೆ ಗುಡ್ಡಳ್ಳಿ ಅಂತ ಹೆಸರು ಬರಲು ಒಂದು ಕಾರಣವಿದೆ. ಹಳ್ಳಿಗೆಹೊಂದಿಕೊಂಡಂತೆ ಸುಮಾರು 15 ಎಕರೆ ವಿಸ್ತಾರದಲ್ಲಿ ಒಂದು ಗುಡ್ಡವಿದೆ. ಅದ್ರ ತುದೀಲಿ ಯಾರೋ ಪುಣ್ಯಾತ್ಮರು ಹೆಣ್ಣು ದ್ಯಾವರ್ನ ಸ್ಥಾಪನೆ ಮಾಡಿ, ಈರಮ್ಮ ಅಂತ ಕರೆದ್ರೂ, ಅಂದಿನಿಂದಲೂ ಈ ಗುಡ್ಡಳ್ಳಿ ಮಂದಿಗೆ ಈರಮ್ಮನೇ ಮನೆದೇವತೆ ಯಾದ್ಳು. ಗುಡ್ಡದ ಪಕ್ಕದಲ್ಲೇ ಒಂದು ಸಣ್ಣ ತೊರೆ ಹರಿಂಯೋದ್ರಿಂದ ಇಡೀ ವರ್ಷ ಗುಡ್ಡಳ್ಳಿಯ ಗುಡ್ಡ ಹಸಿರಿನಿಂದ ನಳನಳಿಸುತ್ತಾ ಇರುತ್ತದೆ. ಯಾರೂ ಕೂಡ ಸಂಜೇ ಮ್ಯಾಗೆಗುಡ್ಡದತ್ರ ಹೋಗ್ತಾ ಇರಲಿಲ್ಲ. ಕಡಿದಾದ ಬೆಟ್ಟ ಸಣ್ಣಪುಟ್ಟ ಮೃಗಗಳುಗುಡ್ಡದತ್ರ ಹೋದವ್ರ್ನ ತಿಂದು ಮುಗಿಸುತ್ತಿದ್ದವು. ಯಾವತ್ತೂಕೂಡ ಗುಡ್ಡದಲ್ಲಿದ್ದ ಪ್ರಾಣಿಗಳು ಊರ್ನ ಒಳಗೆ ಬಂದು ಮನುಸರನ್ನತಿಂದಾಕ್ದೆ ಇರೋಹಂಗೆ ಈರಮ್ಮನೇ ನೋಡ್ಕೋತಾಳೆ ಅನ್ನೋ ಪ್ರತೀತಿ ಇತ್ತು. ಆದ್ರೆ ಕುರಿ ಮೇಕೆ ದನಗಳಿಗೆ ಇದು ಒಗ್ಗುತ್ತಿರಲಿಲ್ಲ, ಆಗಾಗ್ಗೆ ಕುರಿ, ಮೇಕೆ, ದನಗಳು ಅಲ್ಲಿಯ ಮೃಗಗಳಿಗೆ ಆಹಾರವಾಗುತ್ತಿದ್ದವು. ಬೇಸಾಯಕ್ಕಂತೂ ಹೇಳಿ ಮಾಡಿಸಿದಂತಹ ಭೂಮಿ, ಊರಿನ ಅರ್ಧಕರ್ಧ ಮಂದಿ ತಮ್ಮ ಜಮೀನನ್ನು ಮಾರಿ ಬಂದ ಹಣದಲ್ಲಿ ಸೀಮೆ ಹೆಂಚಿನ ಮನೆಯನ್ನು ತಾರಸಿಯಾಗಿಸಿದ್ದರು, ಬುದ್ಧಿವಂತರಾದವರು ಕೂಡಿಟ್ಟುಕೊಂಡರು, ಐಷಾರಾಮಿಯ ಕನಸು ಕಂಡವರು, ಕಲಿಯಬಾರದ್ದನ್ನು ಕಲಿತವರು ಖಜಾನೆ ಬರಿದು ಮಾಡಿಕೊಂಡರು. ಊರಿನ ವಿಶೇಷವೆಂದರೆ 25 ಮಂದಿ ಹುಡುಗರು ಉನ್ನತ ವ್ಯಾಸಂಗ ಮುಗಿಸಿ ಇಂಜಿನಿಯರ್‌ಗಳಾಗಿ ಹೊರ ದೇಶಗಳಲ್ಲಿ ಉದ್ಯೋಗಸ್ಥರಾಗಿದ್ದರು. ಜೊತೆಗೆ ಜಮೀನನ್ನು ಕೋಟಿಗಟ್ಟಲೆಗೆ ಮಾರಿ ಕುಬೇರನ ಮೂಲೆಯ ತಿಜೋರಿ ತುಂಬಿ ತುಳುಕಾಡುತ್ತಿದ್ದುದು ಮತ್ತು ವಿದೇಶಗಳಲ್ಲಿ ದುಡಿಯುತ್ತಿದ್ದ ಮಕ್ಕಳ ಪೋಷಕರನ್ನು ಹಿಡಿದು ಕಟ್ಟಲು ದೊಡ್ಡ ಹಗ್ಗವೇ ಬೇಕಾಗಿತ್ತು. ಬೇಸಾಯದಲ್ಲಿ ದುಡಿದು ಏನೂ ಮಾಡದಿದ್ದರು, ಮಕ್ಕಳನ್ನಂತೂ ವಿದ್ಯಾವಂತರನ್ನಾಗಿಸಿದ್ದರು.

ತಾಲ್ಲೂಕಿನಲ್ಲೇ ಅತಿ ಹೆಚ್ಚು ಮಂದಿ ವಿದೇಶದಲ್ಲಿರುವ ಮಕ್ಕಳು ಎಂಬ ಹೆಮ್ಮೆ ಗುಡ್ಡಳ್ಳಿ ಮಡಿಲಿಗಿತ್ತು. ಗುಡ್ಡಳ್ಳಿಯಲ್ಲಿ ಶೇಕಡ 60 ರಷ್ಟು ಜಮೀನು ಕಳೆದುಕೊಂಡಿದ್ದರು, ಉಳಿದ ಶೇಕಡ 40 ರಲ್ಲಿ ಪರಮೇಶಿ ಗೌಡರೇ 30 ಎಕರೆಯ ಒಡೆಯರಾಗಿದ್ದರು. ರಿಯಲ್ ಎಸ್ಟೇಟ್‌ನವರ ಹೊಡೆತವನ್ನು ತಡೆದುಕೊಂಡು ಜಮೀನನ್ನು ಕಳೆದುಕೊಂಡರೆ ನಾವು ಬಿಕಾರಿಯಾಗುವುದಂತೂ ಖಂಡಿತವೆಂದು ಭಾವಿಸಿದ ಗೌಡರು ಜಮೀನನ್ನು ಮಾರಲು ಸುತಾರಾಂ ಒಪ್ಪಲಿಲ್ಲ. ಭೂಮಿಯನ್ನೇ ದೇವರೆಂದು ಭಾವಿಸಿದವರು ಪರಮೇಶಿಗೌಡರು.

* * * *

ರಾತ್ರಿ ಊಟವಾದ್ಮೇಲೆ ಎರಡು ಏಲಕ್ಕಿ ಬಾಳೆ ಹಣ್ಣು ತಿಂದು, ಒಂದು ಲೋಟ ಬಿಸಿಬಿಸಿ ಹಾಲು ಕುಡಿದು ಹೆಂಡತಿ ಮಡಚಿಕೊಟ್ಟ ವೀಳ್ಯದೆಲೆಯನ್ನು ದವಡೆಗೆ ಒತ್ತರಿಸುತ್ತಾ, ಲೋ ಕೃಷ್ಣ ಬಾರೋ ಇಲ್ಲಿ, ಟೀವಿಲಿ ನ್ಯೂಸ್ ಹಾಕ್ಬಾ, ಈ ಹೆಂಗಸ್ರು ಧಾರಾವಾಹಿ ಬಿಟ್ಟರೆ ಪರಪಂಚವೇ ಇಲ್ಲ ಎಂದು ಗೊಣಗಿದರು. ಅಷ್ಟರಲ್ಲಿ ನ್ಯೂಸ್ ಚಾನೆಲ್ ಹಾಕಿದ ಮೊಮ್ಮಗ ಕೃಷ್ಣ. ಇವತ್ತು ನ್ಯೂಸ್ ಚಾನೆಲ್‌ನಲ್ಲಿ ಅದ್ಯಾವುದೋ ಹೊಸ ಇಚಾರ ಬತ್ತಾದೆ ಎಂದು ಗೌಡರು ಗಮನವಿಟ್ಟು ಟಿವಿಯಿಂದ ದೃಷ್ಟಿ ಬೇರೆ ಕಡೆ ಹಾಯಿಸಲೇ ಇಲ್ಲ. ಬ್ರೇಕಿಂಗ್ ನ್ಯೂಸ್ "ಹೊಸ ತಲೆಮಾರಿನ ಇಂಜಿನಿಯರೊಬ್ಬ ತಯಾರಿಸಿದ ಎ.ಐ ಅಂದ್ರೆ ಕೃತಕಬುದ್ಧಿಮತ್ತೆ ಯಂತ್ರದಿಂದ ಹತ್ತು ಮಂದಿ ಮಾಡುವ ಕೆಲಸವನ್ನು ಒಂದೇ ಒಂದು ಎ.ಐ ಯಂತ್ರ ಮಾಡುತ್ತಾನೆ. ಅದರಿಂದ ಐ.ಟಿ. ಬಿ.ಟಿ ಕಂಪೆನಿಗಳಿಗೆ ಲಕ್ಷಾಂತರ ಕೋಟಿ ಉಳಿಯುತ್ತೆ. ಈಗಾಗಲೇ ಕೆಲಸ ಮಾಡುತ್ತಿರುವ ಸಾವಿರಾರು ಮಂದಿ ಕೆಲಸಗಾರರನ್ನು ಐ.ಟಿ. ಬಿ.ಟಿ ಕಂಪೆನಿಗಳವರು ತೆಗೆಯುತ್ತಿದ್ದಾರೆ. ಮಾನವ ಮಾಡುವ ಕಡೆಯಲ್ಲೆಲ್ಲಾ ಎ.ಐ ಕೆಲಸ ಮಾಡುತ್ತಿದೆ. ಹೀಗೆ ಇದು ಮುಂದುವರಿದೇ ಆದಲ್ಲಿ ನಿರುದ್ಯೋಗವು ಹೆಮ್ಮರವಾಗಿ ಬೆಳೆಯುತ್ತಿದೆ. ಇಂಜಿನಿಯರ್‌ಗಳೆಲ್ಲ ಬೀದಿಗೆ ಬೀಳುತ್ತಾರೆ. ಅದೂ ಇದೂ ಅಂತ ಹೇಳಿದ್ದೇ ಹೇಳಿದ್ದು. ಗೌಡರು ಚಿಂತಿತರಾದರು. ನನ್ನ ಎರಡನೇ ಮಗ ಕೂಡ ಇಂಜಿನಿಯರ್ ಪದವಿ ಮುಗಿಸಿ ಅಮೆರಿಕದಲ್ಲಿ ಕೆಲ್ಸ ಮಾಡ್ತಾವ್ನೆ, ಇವನ್ದೇನಾದ್ರು ಕೆಲಸ ಹೋದಾತ. ಹೋಗ್ಬಿಟ್ರೆ ಎಂಗೆ ಮಾಡೋದು. ಹಿರಿ ಮಗ ಹೊಲಗದ್ದೆ ನೋಡ್ಕತಾ ಅವ್ನೆ, ಸೂರ್ಯನ ಕತೆಯೇನು? ಎಂದು ಚಿಂತಿತರಾದರು. ಆದ್ರೂ ಮನದಲ್ಲಿ ಒಂದು ತರಾ ಧೈರ್ಯ ಅಲ್ಪಸ್ವಲ್ಪ ಹೊಲ ಐತಿ. ನೋಡೋಣ ಏನಾಗುತ್ತೋ ಆ ಭಗವಂತ್ನೆ ನೋಡ್ಕೋಬೇಕು ಅಂತ ಅನ್ಕೊಂಡು ಮೌನವಾದ್ರು. ತಕ್ಷಣವೇ ಸೂರ್ಯನಿಗೆ ಫೋನ್ ಹಚ್ಚಿದರು. "ಹಲೋ ಅಪ್ಪ ಹೇಳಿ" ಸೂರ್ಯ ಪ್ರೀತಿಯಿಂದ ಮಾತನಾಡಿದ "ಎಲ್ಲಾ ಕ್ಷೇಮವೇ ಮೊಗ" ಗೌಡರು "ಹೂ ಅಪ್ಪಾ, ಚೆನ್ನಾಗಿ ಕೆಲ್ಸ ಚೆನ್ನಾಗಿ ನಡೀತಾ ಇದೆ" ನಗುತ್ತಾ ಹೇಳಿದ "ಮೊಗ, ಅದೇನೋ ಎಐ ಅಂತಾ ಟೀಮಿಲಿ ಬೊಗುಳ್ತಾವ್ರೆ, ಅದೇನ್ಲಾ ಅಂಗಂದ್ರೆ ಹತ್ತು ಜನ ಮಾಡೋದು ಒಂದೇ ಮಾಡದಂತೆ" ಆತಂಕದಿಂದ ಕೇಳಿದರು. "ಹೂ ಅಪ್ಪಾ, ಅದೊಂದು ಹೊಸ ಟೆಕ್ನಾಲಜಿ. ಈಗ ಪ್ರಾರಂಭ ಆಗಿದೆ. ಎಲ್ಲಾ ಮಲ್ಟಿ ನ್ಯಾಷನಲ್ ಕಂಪೆನಿಗಳಲ್ಲಿ ಅಳವಡಿಸ್ತಿದ್ದಾರೆ. ಹೊಸದಾಗಿ ಕೆಲಸಕ್ಕೆ ಜನ್ರನ್ನ ತೆಗೊತಾ ಇಲ್ಲ. ಇದ್ದವ್ರಲ್ಲೆ ಕೆಲವರ್ನ ತೆಗೀತಾ ಇದ್ದಾರೆ" "ನಿಮ್ಮ ಕಂಪನೀಲಿ" "ಹೌದಪ್ಪ, ನಮ್ಮಲ್ಲೂ 2000 ಮಂದಿ ತೆಗೆದ್ರೂ, ಹಂತಹಂತವಾಗಿ ತೆಗೀತಾ ಇದ್ದಾರೆ"

"ನಿಂದೆಂಗ್ಲಾ ಮೊಗ" ನೋವಿನಿಂದ ಕೂಡಿತ್ತು ದನಿ. "ಅಂಗೇನಿಲ್ಲಾ ಬಿಡಪ್ಪಾ, ಹೇಳೊಕಾಗೋದಿಲ್ಲ, ನನ್ನನ್ನೂ ಮುಂದೊಂದು ದಿನ ತೆಗೀಬಹುದು ಅಮೇಕೆ ಹೆಂಗ್ಲಾ ಜೀವ್ನ ಆತಂಕದಿಂದ ಕೇಳಿದರು. ಅದ್ಯಾಕಪ್ಪಾ ನೊಂದುಕೊಳ್ತಿಯಾ, ಕೆಲ್ಸ ಹೋದ್ರೆ ಹೋಯ್ತು ಬಿಡಪ್ಪ, ಭೂಮಿ ಅಂತೂ ನೀವು ಮಾರಿಲ್ವಲ್ಲಾ, ಬೆವರು ಸುರ್ಸಿ ದುಡಿದ್ರಾಯ್ತು ನೀವೇ ಹೇಳ್ತಿದ್ದಲ್ಲಪ್ಪಾ, ಜೀವನ ಅನ್ನೋದು ಜಟಕಾ ಬಂಡಿ, ಬಂಡಿ ಓಡುವಾಗ ಹಳ್ಳಕೊಳ್ಳ ಬತ್ತಾದೆ, ಅವೆಲ್ಲಾ ದಾಟ್ಕಂಡು ಹೋಗೋದೇ ಬದುಕು ಅಂತಾ" ನಾನು ನಿನ್ನ ಮಗ ಕಣಪ್ಪಾ ಎದೆಗುಂದಲ್ಲಾ, ಮೇಲೊಬ್ಬ ದೇವರಿದ್ದಾನೆ. ನಾನು ಡ್ಯೂಟಿಗೆ ಹೊರಡಬೇಕು ಇಡ್ಲಾ ಅಪ್ಪ" ಅಂದ "ಆತು ಮೊಗ" ಫೋನ್ ಕಟ್ ಮಾಡಿ, ಟಿವೀನೂ ಆಫ್ ಮಾಡಿ ತಮ್ಮ ರೂಂಗೆ ಹೋಗಿ ಅಂಗಾತ ಮಲಗಿ ಮೇಲಿನ ತಾರಸೀಯನ್ನೆ ದಿಟ್ಟಿಸುತ್ತಾ ನಿದ್ರೆಗೆ ಜಾರಿದರು. ಗೌಡ ಮಗನ ಜೊತೆ ಮಾತಾಡಿದ್ದನ್ನೆಲ್ಲಾ ಕೇಳಿಸಿಕೊಂಡ ಗೌಡತಿ ಮರುಪ್ರಶ್ನಿಸದೆ ನಿದ್ರೆಗೆ ಜಾರಿದಳು.

* * * *

"ಗೌಡ್ರೆ ಗೌಡ್ರೆ.." ಕೆಂಪ ಒಂದೇ ಸಮ್ನೆ ಕೂಗಾಕಿದ. "ಯಾಕ್ಲಾ ಕೆಂಪ ಹುಚ್ಚು ಬವಾಳಿತರ ಕಿರುಚ್ತಾ ಇದ್ದೀ" ಅಂತ್ಹೇಳಿ ಹೊರಕ್ಕೆ ಬಂದರು. ಏದುಸಿರು ಬಿಡ್ತಿದ್ದ ಕೆಂಪ " ಗೌಡ್ರ ಮೂಲೆ ಮನೆ ಕೇಶವ್ನ ಮಗ ಲಂಡನ್ ಅನ್ನೋ ದೇಸ್ದಾಗ ಇದ್ನಂತಲ್ಲಾ, ಅವ ಕೆಲಸ ಹೋಯ್ತು ಅಂತ್ಲಾ ಟ್ರೈನ್ಗೆ ತಲೆ ಕೊಟ್ಟು ಸತ್ತೊದ್ನಂತೆ, ಬಾಡೀನ ಏರೋಪ್ಲೇನ್‌ನಲ್ಲಿ ಅವ್ನ ಹೆಂಡ್ತಿ ತರ್ತಾರಂತೆ. ಕೆಂಪನ ಮಾತು ಕೇಳಿಸಿಕೊಂಡ ಗೌಡತಿ "ಅಯ್ಯಯ್ಯೋ ಎಂಥಾ ಕೆಲ್ಸ ಮಾಡ್ಕಂಡವನಪ್ಪೋ, ಧೈರ್ಯ ಬ್ಯಾಡವ ಕೆಲ್ಸ ಹೋಯ್ತು ಅಂದ್ರೆ, ಇನ್ನೊಂದ್ಕಡೆ ಹುಡ್ಕದು, ಸಿಗಲಿಲ್ಲವಾ ಹಳ್ಳಿಗೆ ಬಂದು ಕ್ಯಾಮೆ ನೋಡೋಕಾಗಲ್ವಾ, ಈಗಿನ ಹುಡುಗರಿಗೆ ತಮ್ಮ ಮೇಲೇನೆ ನಂಬ್ಕೆ ಹೊಂಟೋಗೈತಿ. ಅದ್ಯಾನೋ ಅಟೊಂದು ಓದ್ಕಂಡು ಹೀಂಗಾ ಮಾಡ್ಕಳ್ಳದು ಇಂತವ್ರನ್ನ ನಾವು ಹೆತ್ಬುಟ್ಟು ಸಾಯೋ ಕಾಲ್ದಲ್ಲಿ ಹೆತ್ತವರು ಸಂಕಟಪಡೋವಂಗೆ ಆಯ್ತದೆ" ಗೋಳಾಡಿದ್ರು ಕೇಶವ್ನ ಮಗ ಸತ್ತೋದುದ್ದು, ಮಾದೇವಪ್ಪನ ಮಗ ಕೆಲ್ಸ ಬಿಟ್ಟು ಅಲ್ಲೇ ಫುಟ್ ಪಾತ್‌ನಲ್ಲಿ ಟೀ-ಕಾಫಿ ಮಾರ್ತಾ ಇದ್ದುದ್ದು ಊರ್ಗೆ ಬರೋಕೆ ಅಡಿಗೆ ಕೂಲಿ ಕೆಲಸ ಮಾಡೋದು, ಅಗಸರ ಬೀದಿ ಕೆಂಗಪ್ಪನ ಮಗ ಅಲ್ಲೇ ಒಂದು ಐರನ್ ಅಂಗಡಿ ಇಟ್ಕಂಡು ನಾನು ಕಂಪನೀಲಿ ಇವ್ನಿ ಹೇಳ್ಕಂಡಿದ್ದು. ಹೀಗೆ ಒಬ್ಬೊಬ್ಬರ ಕತೇನೂ ಇಡೀ ಊರ್ನ ಕತ್ತಲು ಆವರಸಿಕೊಳ್ಳೋ ಮುನ್ನ ಎಲ್ಲರ ಬಾಯಿಗೆ ಎಲೆಅಡಿಕೆಯಾಗಿ ಬಿಟ್ಟಿತ್ತು. ಇಡೀ ರಾತ್ರಿ ನಿದ್ರಿ ಮಾಡದ ಗೌಡ ಬೆಳಿಗ್ಗೆ ಎದ್ದವ್ರೆ ವಿದೇಶದಲ್ಲಿ ಕೆಲ್ಸ ಮಾಡ್ತಾ ಇರೋರ್ನ ತಂದೆತಾಯಿನ್ನೆಲ್ಲಾ ಕೆಂಪಂಗೆ ಹೇಳಿ ತನ್ನ ಮನಿ ಕರೆಸಿದರು. ಎಲ್ಲರ ಮುಖ ಬಾಡಿತ್ತು ದುಃಖದ ಬಾಗಿಲು ಕಣ್ಣೀರಾಗಿ ಹರಿಯುತ್ತಿತ್ತು. ಎಲ್ಲವನ್ನು ಅರಿತ ಮುತ್ಸದ್ದಿ ಗೌಡರು " ಆತು, ಆದದ್ದು ಆತು ಕೇಶವ್ನ ಮಗಂಗೆ ತನ್ನ ಬುದ್ಧಿ ತನ್ನ ಕೈಲಿ ಇಟ್ಕೊಳ್ದೆ ಮಾಡಬಾರ್ದ ಕೆಲ್ಸ ಮಾಡ್ಕಂಡು ಹೆಂಡತಿ ಮಕ್ಕಳನ್ನು, ಹೆತ್ತವರನ್ನು ಅನಾಥ ಮಾಡಿ ಹೋಗ್ಬಿಟ್ಟ ಕೆಲವ್ರಿಗೆ ಕೆಲ್ಸ ಹೋಗೈತಿ ಅಂತಾನು ತಿಳೀತು. ಅವರ್ಗೆಲ್ಲಾ ನಾನೇ ಫೋನು ಮಾಡಿ ಧೈರ್ಯ ಹೇಳ್ತೀನಿ, ಅವ್ರ ಫೋನ್ ನಂಬರ್ ಕೊಡಿ. ಅಂದರು.

ಅಲ್ಲೇ ಕೂತಿದ್ದ ಕೊರಗಜ್ಜ ನಡುಗುವ ದನಿಯಲ್ಲೆ "ಅಲ್ಲಾ ಕಣಪ್ಪ ಪರಮೇಶಿ, ಹಿಂದೆ ಮುಂದೆ ಯೋಚ್ನೆ ಮಾಡ್ದೆ ಹೀಂಗೆ ಮಾಡ್ಕಂಬುಟ್ರೆ ನಮ್ಮಂತೌರ ಗತಿಯೇನು ಅಂತೀನಿ. ಇಲ್ಲಿ ಕೂತೌವ್ರಲ್ಲ, ಅವ್ರಲ್ಲೇ ಎಟೋ ಜನ ಹೊಲ ಮಾರ್ಕಂಡು, ಕಳ್ಕಂಡು ಕೂಂತವ್ರೆ, ಮನೆಯಾನೋ ಮಾಡ್ಕಂಡವ್ರೆ ಮನೆ ಇದ್ರೆ ಸಾಕ! ಒಡಲು ಕೇಳ್ತದಾ. ತಮ್ಮ ಮೊಗ ಬ್ಯಾರೆ ದೇಸ್ದದಲ್ಲೌವ್ನೆ ಮೆರಿತಿದ್ದ ಈ ಬಡ್ಡಿ ಮಂದಿ ಬದುಕು ಎಂಗ್ಲಾ ಆಗೈತಿ". ಎಂದು ಒಂದೇ ಸಮ್ನೆ ಉಸುರಿದ. 'ಕೊರಗಜ್ಜ ನಾನು ಇರೋಗಂಟ ನಮ್ಮೂರ್ನ ಜನಕ್ಕೆ ಹೆಗಲಾಗಿ ಇರ್ತೀನಿ. ಏನೂ ಆಗಾಕಿಲ್ಲ ಸುಮ್ಕಿರು" ಎಂದ ಗೌಡ ಅಷ್ಟರಲ್ಲಿ ಗೌಡ್ರ ಮಗ ಸೂರ್ಯ ಅಮೆರಿಕದಿಂದ ಮೊಗ ಫೋನ್ ಬಂತು. "ಹಲೋ ಮೊಗ" "ಅಪ್ಪ.. ಅಪ್ಪ.. ದನಿಯಲ್ಲಿ ನೋವಿತ್ತು. "ಹೇಳ್ಲಾ ಮೊಗ, ನಿನ್ನ ಕೆಲ್ಸ ಹೋಗೈತಿ, ಏನ್ಮಾಡೋದು ಅಂತ ಫೋನ್ ಮಾಡಿದ್ದಿ ಅಲ್ಲವಾ" "ಅಪ್ಪಾ ನಿಮಗೆ ಹೇಗೆ ಗೊತ್ತಾಯ್ತು" ಗಾಬರಿಯಿಂದ ಕೇಳಿದ "ಮೇಗಲ ಬೀದಿ ಕೇಶವ್ನ ಮಗ ಕೆಲ್ಸ ಹೋಯ್ತು ಅಂತಾ, ರೈಲಿಗೆ ತಲೆಕೊಟ್ಟು ಆತ್ಮಹತ್ಯೆ ಮಾಡ್ಕಂಡೌವ್ನೆ" "ಅಪ್ಪಾ" "ನೀನೇನು ಯೋಚ್ನೆ ಮಾಡ್ಬೇಡ, ನಾಳೀಕೆ ಆ ದೇಸ್ವ ಬಿಟ್ಟು, ನಮ್ಮ ದೇಸಕ್ಕೆ ಬಾ, ಇಡೀ ಪ್ರಪಂಚಾದಾಗೆ ಇರೋ ಕೆಲ್ಸ ಮಾಡ್ಕಂಡು ಜೀವ್ನ ಮಾಡ್ಬೌದು ಅಂದ್ರೆ, ಅದು ನಮ್ಮ ಭಾರತ ಮಾತ್ರ ಕಲಾ, ನೀನೇನು ಕೆಟ್ಟ ಯೋಚ್ನೆ ಮಾಡ್ಬೇಡ. ಇಲ್ಲಿ ನಿನ್ನಂಗೆ ಕೆಲ್ಸ ಕಳ್ಕೊಂಡ ಅಪ್ಪ ಅಮ್ಮಂದಿರು ನನ್ನ ಮುಂದೆ ಬಂದು ಕುಂತೌರೆ, ಅವ್ರೆಗೆಲ್ಲಾ ಏನಾರ ಮಾಡ್ಬೇಕು. ಫೋನ್ ಇಡ್ತೀನಿ" ಅಂತ್ಹೇಳಿ ಫೋನ್ ಕಟ್ ಮಾಡಿದರು. "ಪರಮೇಶಿ ನಿನ್ನ ಮಗಂದು ಕೆಲ್ಸ ಹೋಯ್ತಾ, ಆದ್ರೂ ನಿನ್ನ ಮೆಚ್ಚಬೇಕು ಕಣಾ, ನಿನ್ನ ಮೊಗ ಫೋನ್ ಮಾಡ್ದಾಗ ಅವ್ನಿಗೆ ಧೈರ್ಯ ಹೇಳಿ, ನಿನ್ನೆದುರು ಕುಂತಿರೋರ ಬಗ್ಗೆ ಯೋಚ್ನೆ ಮಾಡ್ತೀಯಲ್ಲಾ, ಈ ಊರ್ನ ಜನ ನಿನ್ನ ಊರ ಮುಖಂಡ ಮಾಡ್ಕಂಡಿರೋದಿಕ್ಕೂ ಗೌರವ ಬಂತು ಕಣಾ" ಎಂದು ಕಣ್ಣರಳಿಸಿ ಕೈ ಮುಗಿದ ಕೊರಗಜ್ಜ. "ನೋಡಿ ನಾನು ನಿಮ್ಗೆ ತಿಳಿಸೋದು ಇಟೆಯಾ, ನೀವು ಯಾನು ಯೋಚ್ನೆ ಮಾಡ್ಬೇಡಿ, ನಿಮ್ಮ ನಿಮ್ಮ ಮಕ್ಳಿಗೆ ಇವತ್ತೆ ಫೋನ್ ಮಾಡಿ ವಿದೇಸದಿಂದ ಊರ್ಗೆ ಬರೋಕೆ ಹೇಳಿ, ಅವ್ರಿಗೆಲ್ಲಾ ಏನಾರೂ ವ್ಯವಸ್ಥೆ ಮಾಡೋಣ. ಆದ್ರೆ ಒಂದು ಕಂಡೀಸನ್ ನಾನು ಯಾವ ಕೆಲ್ಸ ಹೇಳಿದ್ರೂ ಮಾಡ್ಲಿಕೆ ರೆಡಿಯಾಗಿರ್ಬೇಕಷ್ಟೆ ಯಾರೂ ಕೈ ಕೊಟ್ರು ಈ ಭೂಮಿ ತಾಯಿ ಕೈಬುಡಾಕಿಲ್ಲ. ಹೋಗಿ ಹೋಗಿ ಆದಷ್ಟು ಬೇಗ ನಿಮ್ಮ ಮಕ್ಳು ಕರ್ಸೋ ಏರ್ಪಾಡು ಮಾಡಿ." ಎಂದ್ಹೇಳಿ ಪರಮೇಶಿಗೌಡ್ರು ತನ್ನ ಮಗನ ಕೆಲಸ ಹೋದದಕ್ಕೆ ಒಳಗೊಳಗೆ ಆತಂಕ ಇದ್ರೂ ಹೊರ್ಗೆ ತೋರಿಸದೆ, ಒಳ ನಡೆದರು.

* * * *

ಪರಮೇಶಿಗೌಡ್ರು ಅನ್ಕೊಂಡ್ಹಾಗೇನೆ ಎಲ್ಲವೂ ನಡೀತು. ಗುಡ್ಡಳ್ಳಿಯಲ್ಲಿ 25 ಮಂದಿ ಹೊರದೇಶದಲ್ಲಿ ದುಡಿಯುತ್ತಿದ್ದವರಲ್ಲಿ ಓರ್ವ ಕೇಶವ್ನ ಮಗ ದೇವರಪಾದ ಸೇರಿದ್ದ. ಇನ್ನೂ 24 ಮಂದಿಯಲ್ಲಿ 10 ಮಂದಿ ಹೊರದೇಶದ ಮೋಹದಿಂದ ಹೊರಗೆ ಬರ್ದೆ ಅಲ್ಲೆ ಸಣ್ಣ ಉದ್ಯೋಗ ಕಂಡ್ಕೊಂಡು ಬದುಕಿನ ಬಂಡಿ ಸಾಗಿಸುತ್ತಿದ್ದರು. ಉಳಿದ 14 ಮಂದಿ ಪರಮೇಶಿಗೌಡ್ರ ಮಗ ಸೂರ್ಯ ಹೇಳಿದಂತೆ ನಡೆದುಕೊಂಡರು.

ಪರಮೇಶಿಗೌಡ್ರ ಬಳಿ 30 ಎಕರೆ ಜಮೀನಿತ್ತು. ಸೂರ್ಯ ತನ್ನ ಸ್ನೇಹಿತರೊಡಗೂಡಿ ತನಗೆ ಐದು ಎಕರೆ ಜಮೀನು ಇಟ್ಕೊಂಡು ಉಳಿದ ಜಮೀನನ್ನು ವ್ಯವಸಾಯ ಮಾಡುವುದಕ್ಕೋಸ್ಕರ ಸಮಾನವಾಗಿ ಹಂಚಿದ. ಎಲ್ಲರೊಂದಿಗೆ ಚರ್ಚಿಸಿ ಯಾರು ಯಾರು ಯಾವ ಬೆಳೆ ತೆಗೀಬೇಕೆಂದು ತೀರ್ಮಾನಿಸಿದರು. ಅದಕ್ಕೆ ಮೂಲ ಬಂಡವಾಳ, ಟ್ರ್ಯಾಕ್ಟರ್, ಪಂಪ್‌ಸೆಟ್ ಎಲ್ಲವನ್ನು ಒದಗಿಸಿದರು. ಸೂರ್ಯನಿಗೆ ದೂರದರ್ಶಿ ಪರಮೇಶಿಗೌಡ್ರ ಮಾರ್ಗದರ್ಶನ ಅದ್ಭುತವಾಗಿ ಸಿಗುತ್ತಿತ್ತು. ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ, ಹಾಪ್‌ಕಾಮ್ಸ್ ಎಲ್ಲಾ ಅಧಿಕಾರಿಗಳನ್ನು ಭೇಟಿ ಮಾಡಿ ಚರ್ಚಿಸಿ ತನ್ನೂರಿನ ಕೃಷಿ ಚಟುವಟಿಕೆಗೆ ಹೊಸ ಹೊಸ ಆಯಾಮಗಳನ್ನೇ ನೀಡಿದ ಸೂರ್ಯ. ಪ್ರತಿ ಇಲಾಖೆಯಿಂದ ಸರ್ಕಾರದಿಂದ ಬರುವಂತಹ ಎಲ್ಲಾ ರೀತಿಯ ಸಹಕಾರ, ಸಬ್ಸಿಡಿ, ಕೃಷಿ ಉಪಕರಣಗಳನ್ನು ತನ್ನ ಸ್ನೇಹಿತರಿಗೆ ಕೊಡಿಸಿದ. ಇಂಜಿನಿಯರ್ ಆಗಿ ಕೆಲಸ ಮಾಡಬೇಕಾದವರೆಲ್ಲ ನಿಜವಾಗಿಯೂ ಮಣ್ಣಿನ ಮಕ್ಕಳಾಗಿ ಶ್ರಮಪಟ್ಟು ದುಡಿದರು. ಕೇವಲ ಎರಡೇ ವರ್ಷದಲ್ಲಿ ಸೂರ್ಯ 30 ಎಕರೆಯಲ್ಲಿ ಯಾವ ಬೆಳೆ ಇಲ್ಲವೆಂಬ ಪ್ರಶ್ನೆ ಮೂಡುದಂತೆ ಮಾಡಿದ. ದೀರ್ಘಕಾಲದ ಅಡಿಕೆ, ತೆಂಗನ್ನು ತನ್ನ ಹೊಲಕ್ಕೆ ನೆಡಿಸಿದ ಸೂರ್ಯ, ಅಲ್ಪಾವಧಿಯಲ್ಲಿ ಆದಾಯ ಬರುವಂತಹ ವಾಣಿಜ್ಯ ಬೆಳೆಗಳು, ತರಕಾರಿ, ಹೂ,ಹಣ್ಣು ಮುಂತಾದ ಬೆಳೆಗಳನ್ನು ತನ್ನ ಸ್ನೇಹಿತರಿಗೆ ನೀಡಿದ ಜಮೀನಿನಲ್ಲಿ ಬೆಳೆಸಿದ. ತಿಂಗಳಿಗೊಮ್ಮೆ ಎಲ್ಲರೂ ಸೇರಿಕೊಂಡು ತಮ್ಮ ತಮ್ಮ ಬಂಡವಾಳ ಮತ್ತು ಆದಾಯವನ್ನು ಲೆಕ್ಕ ಹಾಕಿ ಇಂತಿಷ್ಟು ಎಂಬಂತೆ ಉಳಿತಾಯ ಯೋಜನೆಯನ್ನು ಮಾಡಿದರು. ಸ್ನೇಹಿತರ ಸಲಹೆಯಂತೆ ಜನಮಿತ್ರ ಸ್ವ ಸಹಾಯ ರೈತ ಸಂಘವನ್ನು ಸ್ಥಾಪಿಸಿ, ಸೂರ್ಯನೇ ಮೊದಲ ಅಧ್ಯಕ್ಷನಾಗಿ ಅವಿರೋಧವಾಗಿ ಆಯ್ಕೆಯಾದನು. ಸಂಘದಡಿಯಲ್ಲಿ ರೈತರಿಗೆ ಆಧುನಿಕ ಬೇಸಾಯ ಪದ್ಧತಿ ತರಬೇತಿ ಕೊಡಿಸಿದ. ಎರಡು ಮೂರು ವರ್ಷಕ್ಕೆ ಸಂಘವು ಸ್ವಂತ ಕಟ್ಟಡ ಹೊಂದಿತು. ವ್ಯವಸಾಯ ಉಪಕರಣಗಳನ್ನು ಖರೀದಿಸಿ ರೈತರಿಗೆ ಕಡಿಮೆ ಬಾಡಿಗೆಯಲ್ಲಿ ನೀಡುವ ವ್ಯವಸ್ಥೆ ಆಯಿತು. ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆಯಿಂದ ಈ ಸಂಘದವರ ಅರ್ಥಾತ್ ಇಂಜಿನಿಯರ್‌ಗಳು ಬೇಸಾಯಗಾರರಾಗಿ ಸಾಧಿಸಿದ ಛಲದಂಕ ಮಲ್ಲರ ಗಾಥೆಯನ್ನು ಪರಿಶೀಲಿಸಿ ರಾಜ್ಯಮಟ್ಟದ ಪ್ರಶಸ್ತಿ ಪುರಸ್ಕಾರಗಳನ್ನು ನೀಡಲಾಯಿತು. ತಾವು ಬೆಳೆದಿದ್ದನ್ನು ನೇರವಾಗಿ ಗ್ರಾಹಕರಿಗೆ ನೀಡುವ ಯೋಜನೆ ತಂದರು. ಮಧ್ಯದಲ್ಲಿ ಬರುವ ದಲ್ಲಾಳಿಗಳಿಗೆ ಹೋಗುವ ಕಮೀಷನ್ ಹಣವೆಲ್ಲವೂ ಯುವ ರೈತರ ಖಾತೆಗೆ ಜಮೆಯಾಗುತ್ತಾ ಬಂದಿತು. ಹೊರದೇಶದಲ್ಲಿ ಬಹಳ ಒತ್ತಡದಲ್ಲಿ ಕೆಲಸ ಮಾಡುತ್ತಿದ್ದವರಿಗೆ ವ್ಯವಸಾಯದಲ್ಲಿ ಹಣ, ವಿಶ್ರಾಂತಿ, ಆದಾಯ ಎಲ್ಲವೂ ದೊರಕಿತು. ಗುಡ್ಡಳ್ಳಿ ತಾಲ್ಲೂಕು, ಜಿಲ್ಲೆಗೆ ಮಾದರಿಯಾಯಿತು. ಬೇರೆ ಬೇರೆ ಜಿಲ್ಲೆಗಳಿಂದ ಯುವ ರೈತರ ದಂಡೆ ಗುಡ್ಡಳ್ಳಿಗೆ ಭೇಟಿ ಕೊಟ್ಟು ಮಾರ್ಗದರ್ಶನ ಪಡೆದರು. ಒಟ್ಟಾರೆ ಹೊಲವನ್ನು ರಿಯಲ್ ಎಸ್ಟೇಟ್‌ನವರಿಗೆ ಮಾರಿ, ತಮ್ಮ ಬದುಕೇ ನೀರ್ಗುಳ್ಳೆಯಾಯಿತು ಅಂದುಕೊಂಡವರಿಗೆ ಪರಮೇಶಿಗೌಡರು ಮತ್ತು ಸೂರ್ಯ ನಿಜವಾದ ದೇವರಾದರು.

* * * *

ಜನಮಿತ್ರ ಸ್ವ ಸಹಾಯ ರೈತ ಸಂಘದ 5ನೇ ವಾರ್ಷಿಕೋತ್ಸವವನ್ನು ಗುಡ್ಡಳ್ಳಿಯಲ್ಲಿ ರಾಜ್ಯದ ಕೃಷಿ ಸಚಿವರ ಸಮ್ಮುಖದಲ್ಲಿ ನಡೆಸಲಾಯಿತು. ಪರಮೇಶಿ ಗೌಡರು ಎದ್ದು ಎಲ್ಲರಿಗೂ ನಮಸ್ಕರಿಸುತ್ತಾ "ನೋಡಿ ಯುವರೈತ ಸಮಾಜದವರೇ, ನನಗೆ ಅನ್ಸುತ್ತೆ ಈ ತಂತ್ರಜ್ಞಾನ, ವಿಜ್ಞಾನ ಬಂದು ನಮ್ಮಂತಹವರ ಉದ್ಯೋಗವನ್ನೆ ತಿನ್ನುತ್ತಿದೆ. ಜೊತೆಗೆ ಈ ರಿಯಲ್ ಎಸ್ಟೇಟ್ ಏಜೆಂಟ್‌ಗಳಂತೂ ಗೆದ್ದಲು ಹುಳಗಳಿಗಿಂತ ಹೆಚ್ಚಾಗಿ ನಮ್ಮಂತಹ ರೈತರ ಬುದ್ಧಿ ಕೆಡಿಸಿ, ನಮ್ಮಗಳ ಒಡಲಿಗೆ ಕೊಳ್ಳಿ ಇಟ್ಟು ಅವರ ಒಡಲನ್ನು ಉಬ್ಬಿಸಿಕೊಳ್ತಾ ಇದ್ದಾರೆ. ಹೀಗೆ ಮುಂದುವರೆದರೆ ಬೇಸಾಯಕ್ಕೆ ಭೂಮಿಯಿಲ್ಲ. ಭೂಮಿ, ಮರ ಗಿಡಗಳಿಲ್ಲದಿದ್ದರೆ ಫಸಲು ಎಲ್ಲಿ, ಫಸಲು ಇಲ್ಲದಿದ್ದರೆ ನಮ್ಮ ಹೊಟ್ಟೆಗೆ ತಿನ್ನುವುದೇನು? ಹೀಗೆ ಮುಂದುವರೆದರೂ ತುತ್ತು ಅನ್ನಕ್ಕೂ ಬ್ಯಾರೆ ದೇಸದವರ ಮುಂದೆ ಕೈ ಒಡ್ಡುವ ಪರಿಸ್ಥಿತಿ ಬಂದಾತು. ಈ ಸರ್ಕಾರದವರಿಗೆ ಬುದ್ಧಿ ಇಲ್ವಾ ಅಂತಾ! ಕೃಷಿ ಸಚಿವರೇ ಇಲ್ಲೇ ಇದ್ದಾರೆ. ಸಾಮಿ ನಾನೊಬ್ಬ ಪೂರ್ಣ ಜ್ಞಾನಿಯಲ್ಲ ಆದ್ರೂ ಒಂದು ಕಿವಿಮಾತು ಸರ್ಕಾರಕ್ಕೆ, ಈ ರಿಯಲ್ ಎಸ್ಟೇಟ್ ಉದ್ಯಮಕ್ಕೆ ಕಡಿವಾಣ ಹಾಕಿ. ಬರಡು ಭೂಮಿಯಲ್ಲಿ ಏನು ಬೇಕಾದರೂ ಮಾಡಿಕೊಳ್ಳಿ, ಫಲವತ್ತಾದ ಭೂಮಿಯನ್ನು ಗ್ರೀನ್ ಬೆಲ್ಟ್ ಎಂದು ಘೋಷಿಸಿ, ಇಂತಹ ಭೂಮಿಯಲ್ಲಿನ ವ್ಯವಸಾಯೇತರ ಚಟುವಟಿಕೆಗೆ ಅವಕಾಶ ನೀಡದೆ, ಕಠಿಣ ಕಾನೂನನ್ನು ತನ್ನಿ. ಮುಂದಿನ ಪೀಳಿಗೆಗೂ ಉಳುವ ಭೂಮಿಯನ್ನು ಉಳಿಸೋಣ. ನಮ್ಮ ಮುಂದಿನ ಮುಗ್ಧ ಪ್ರಜೆಗಳು ಬ್ಯಾರೆ ದೇಸದವ್ರ ಮುಂದೆ ಹೊಟ್ಟೆಗಾಗಿ ಕೈಚಾಚುವಂತೆ ಮಾಡಬೇಡಿ. ಕೈಮುಗಿದು ಕೇಳಿಕೊಳ್ಳುತ್ತೇನೆ ಸಚಿವರೇ, ನಾನು ಮಾತನಾಡು ಬಿಟ್ಟೆ ಅನ್ಸುತ್ತೆ. ನಾವು ನಮಗೆ ಅನ್ನಕೊಡೋ ರೈತ, ದೇಸ ಕಾಯೋ ಸೈನಿಕನಿಗೆ ಗೌರವ ಕೊಡೋದನ್ನು ಕಲೀಬೇಕು" ಎಂದು ನಮಸ್ಕರಿಸಿದರು. ಸಭಾಂಗಣವೇ ಎದ್ದು ನಿಂತು ಕರತಾಡನ ಮಾಡಿದರು. ನಂತರ ಸೂರ್ಯ ಮುಂದಿನ ಉದ್ದೇಶಗಳನ್ನು, ಭೂಮಿ ಮಹತ್ವವನ್ನು ತಿಳಿಸಿದನು. ಸಮಾರಂಭ ಮುಂದುವರೆದು ಕರುಣಾಕರ ನಾನು ಮಾತನಾಡಬೇಕು ಎಂದ. ಸಚಿವರು ನಗುತ್ತಾ ವೇದಿಕೆ ಮೇಲೆ ಕರೆದರು. "ರೈತಬಾಂಧವರೆ, ಸಚಿವರೇ, ಪರಮೇಶಿಗೌಡ್ರೆ ನನ್ನ ಗೆಳೆಯ ಸೂರ್ಯ, ಎಐ ತಂತ್ರಜ್ಞಾನ ಬಂದು ನಮ್ಮ ಉದ್ಯೋಗಗಳನ್ನು ಕಸಿದುಕೊಂಡಿತು. ನಮ್ಮ ಬದುಕು ಇಲ್ಲಿಗೆ ಮುಗಿಯಿತು ಅನ್ಕೊಂಡೋ, ನಮ್ಮಪ್ಪ ಇದ್ದ ಒಂದಿಷ್ಟು ಜಮೀನನ್ನು ರಿಯಲ್‌ಎಸ್ಟೇಟ್‌ನವರಿಗೆ ಮಾರಿದ್ದರು. ಅಲ್ಲಿ ಕೆಲಸವೂ ಹೋಯಿತು, ಇಲ್ಲಿ ಭೂಮಿಯು ಇಲ್ಲಾ, ದಿಕ್ಕೆ ತೋಚದೆ ಇದ್ದ ಪರಿಸ್ಥಿತಿಯಲ್ಲಿ ಪರಮೇಶಿಗೌಡರ ಮಾತನ್ನು ನಂಬಿ ಬಂದೆವು. ಇಂಜಿನಿಯರ್ ಓದಿದ್ದರೂ, ಅಂಜಿಕೆ ಬಿಟ್ಟು ಮಣ್ಣನ್ನು ಹಣೆಗೊತ್ತಿದೆವು. ಇಂದು ವಿದೇಶದಲ್ಲಿದ್ದ ನೆಮ್ಮದಿಗಿಂತ ಹತ್ತು ಪಟ್ಟು ನೆಮ್ಮದಿಯಾಗಿದ್ದೇವೆ. ವಿದೇಶದಲ್ಲಿ ತೃಪ್ತಿಗಾಗಿ ಕಾಯುತ್ತಿದ್ದೆವು, ಇಲ್ಲಿ ಸಂತೃಪ್ತಿ ಇದೆ. ಎಐ ಬಂದು ನಮ್ಮ ಬದುಕನ್ನು ಕಿಂತುಕೊಂಡಾಗ ನಮ್ಮ ಬದುಕು ಕತ್ತಲಾಯಿತೆಂದು ಕೊಂಡ ನಮ್ಮಂತಹ ಯುವಕರಿಗೆ ಪರಮೇಶಿಗೌಡರು ಕತ್ತಲೆಯ ಕಣ್ಣಾಗಿ ಬಂದರು. ನಮ್ಮ ಇಡೀ ಕುಟುಂಬವೇ ಅವರ ಋಣದಲ್ಲಿದೆ ಎಂದರೆ ತಪ್ಪಾಗುವುದಿಲ್ಲ" ಎಂದು ಗದ್ಗದಿತನಾಗಿ ಮಾತು ಮುಗಿಸಿದನು. ಕಡೆಯದಾಗಿ ಕೃಷಿ ಸಚಿವರು ಬಹು ಸಂತಸದಿಂದ ಮಾತನಾಡಿ, ಶಾಸಕರ ಅನುದಾನದಡಿಯಲ್ಲಿ ಜನಮಿತ್ರ ಸ್ವ ಸಹಾಯ ರೈತ ಸಂಘಕ್ಕೆ 10 ಲಕ್ಷ ಅನುದಾನ ನೀಡಿ ಇನ್ನಷ್ಟು ಕೃಷಿ ಉಪಕರಣ ಕೊಳ್ಳಲು ಸಲಹೆ ಕೊಟ್ಟರು. ಸೂರ್ಯ ಮತ್ತು ಪರಮೇಶಿಗೌಡರ ಆನಂದಕ್ಕೆ ಪಾರವೇ ಇರಲಿಲ್ಲ. ರೈತರ ಕಣ್ಣಂಚಿನಲ್ಲಿ ತೊಟ್ಟಿಕ್ಕಿದ ಆನಂದಬಾಷ್ಪದ ಹನಿಗಳು ಭುವಿಗೆ ಮುತ್ತಿಡುತ್ತಿದ್ದವು.

ವಾರಭವಿಷ್ಯ

26.04.2026 ರಿಂದ 2.05.2026

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ: ರವಿ-ಮೇಷ, ಚಂದ್ರ-ಸಿಂಹ, ಕನ್ಯಾ, ತುಲಾ, ಕುಜ-ಮೀನ, ಬುಧ-ಮೀನ, ಗುರು-ಮಿಥುನ, ಶುಕ್ರ-ಮೇಷ, ಶನಿ-ಮೀನ, ರಾಹು-ಕುಂಭ ಮತ್ತು ಕೇತು-ಸಿಂಹ

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ್ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
'ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ'
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ: 9740973224, 9739548720



ಮೇಷ (ಚು,ಚೆ,ಲ,ಲಿ,ಲು,ಲೆ,ಲೊ,ಅ)

ವಾರದ ಆದಿಗೆ ಧನಾಗಮ ನಿರೀಕ್ಷಿತ ಮಟ್ಟದಲ್ಲಿ ಇರದು. ನಿಮಗಾಗದವರ ಮಾತಿನಿಂದ ಇಚ್ಛಿತ ವ್ಯವಹಾರಗಳು ಕುಂಟುತ್ತವೆ. ಔದ್ಯೋಗಿಕ ವಿಷಯಗಳು ಫಲಪ್ರದವಾಗಲು ಇನ್ನೂ ಕಾಲ ಕೂಡಿ ಬಂದಿಲ್ಲ. ಮನೆ ಮಂದಿಯಲ್ಲಿ ಸೌಹಾರ್ದತೆಯ ಕೊರತೆ ಕಂಡು ಬರುವುದು. ಸಾಡೇಸಾತಿ ಶನಿಯ ಪ್ರಭಾವವಿದೆ. ಕೊಡು-ಕೊಳ್ಳುವ ವ್ಯವಹಾರಗಳನ್ನು ನಿಧಾನವಾಗಿ ತೀರ್ಮಾನಿಸಿ.

ಶ್ರೀ ವಿನಾಯಕ ಸ್ತುತಿ. ಶುಭ ಸಂಖ್ಯೆ-1

ವೃಷಭ (ಇ,ಉ,ಎ,ಒ,ವ,ವಿ,ವು,ವೆ,ವೊ)

ಸ್ವತ್ತು ಕ್ರಯ-ವಿಕ್ರಯ ವಿಷಯಗಳಲ್ಲಿ ಆಶಾದಾಯಕ ಸೂಚನೆಗಳಿಂದ ಮಾನಸಿಕ ನೆಮ್ಮದಿ. ಧಾರ್ಮಿಕ ವಿಷಯಗಳಲ್ಲಿ ಆಸಕ್ತಿ. ನಿಮ್ಮ ಸದಾಚಾರ ಸಂಪನ್ನತೆಯಿಂದ ಸಮಾಜದಲ್ಲಿ ಗೌರವಾದರಗಳಿಗೆ ಭಾಜನರಾಗುವಿರಿ. ಉನ್ನತಾಧಿಕಾರಿಗಳ ಭೇಟಿಯಿಂದ ಕೆಲಸ ಕಾರ್ಯಗಳು ಸುಗಮವಾಗಿ ಸಾಗುವುದು. ನೂತನ ವಸ್ತ್ರಾಭರಣ ಖರೀದಿಯಿಂದ ಶ್ರೀಮತಿಗೆ ಸಂತೋಷ.

ಶ್ರೀ ದೇವೀ ದರ್ಶನ. ಶುಭ ಸಂಖ್ಯೆ-6

ಮಿಥುನ (ಕ,ಕಿ,ಕು,ಘ,ಙ,ಛ,ಕೆ,ಕೊ,ಹ)

ವಾರದಾರಂಭಕ್ಕೆ ಆಸ್ತಿ-ಪಾಸ್ತಿ ವಿಷಯಗಳು ಶುಭಫಲವನ್ನು ನೀಡಲಿದೆ. ವಿದ್ಯಾ ಸಂಸ್ಥೆಗಳಿಗೆ ಬಿಡುವಿಲ್ಲದ ಕೆಲಸ ಹಾಗೂ ಆದಾಯ ಬರಹಗಾರರಿಗೆ ಸನ್ಮಾನದ ಹಿರಿಮೆ. ಸಮಯಕ್ಕೆ ಸರಿಯಾಗಿ ಹಣ ಒದಗುವುದು. ವೈಯಕ್ತಿಕ ವಿಷಯಗಳಲ್ಲಿ ದುಡುಕಿ ನಿರ್ಧಾರ ಕೈಗೊಳ್ಳದಿರಿ. ಕೋರ್ಟು ಕಚೇರಿ ಕೆಲಸಗಳಲ್ಲಿ ನಿರಾಶೆಯಾಗಲಿದೆ. ಸಂಬಂಧಿಕರಲ್ಲಿ ಒಡಕಿನ ಮಾತಿನಿಂದ ಬೇಸರ. ನಿಮ್ಮ ಆರೋಗ್ಯದ ಕಡೆ ನಿಗಾ ಇರಲಿ.

ಶ್ರೀ ರಾಮನಾಮ ಜಪಿಸಿ. ಶುಭ ಸಂಖ್ಯೆ-4

ಕಟಕ (ಹೊ,ಹು,ಹೆ,ಡ,ಡಿ,ಡು)

ಈ ವಾರ ಉದ್ಯೋಗ ಸ್ವಂತದ್ದಿರಲಿ, ಬೇರೆಯವರದು ಇರಲಿ ಹೊಸ ಮಜಲನ್ನು ಏರುವಿರಿ. ಜಲಜನ್ಯ ವಸ್ತು ವ್ಯಾಪಾರದಿಂದ ಉತ್ತಮ ಲಾಭವನ್ನು ಗಳಿಸುವಿರಿ. ವಾಕ್ಚಾತುರ್ಯದಿಂದ ನಿಮ್ಮ ಕೆಲಸ ಸಾಧನೆ, ವೈವಾಹಿಕ ಮಾತುಗಳು ಮುಂದೂಡಲ್ಪಡುವುದರಿಂದ ಮಾನಸಿಕ ಒತ್ತಡಕ್ಕೆ ಒಳಗಾಗುವಿರಿ. ಪಶು ಮಾರಾಟದಿಂದ ನಷ್ಟ, ನಿಮ್ಮ ಸ್ಥಾನಕ್ಕೆ ಚ್ಯುತಿ ಉಂಟಾದೀತು. ಅಪರೂಪವಾಗಿ ಧನಲಾಭವಾಗುವುದು.

ಶ್ರೀ ನಿಮಿಷಾಂಬ ದರ್ಶನ. ಶುಭ ಸಂಖ್ಯೆ-8

ಸಿಂಹ (ಮ,ಮಿ,ಮು,ಮೊ,ಮೆ,ಟ,ಟಿ,ಟು,ಟೆ)

ಸಾಮಾಜಿಕ ಹಾಗೂ ಸ್ವಂತದ ವಿಷಯದಲ್ಲಿ ಉಂಟಾಗಿದ್ದ ಬಿಕ್ಕಟ್ಟುಗಳು ನಿವಾರಣೆಯಾಗಲಿವೆ. ಬಂಧು ಬಳಗದವರ ವಿಶ್ವಾಸ ಗಳಿಸಿ ಬೆರೆತು ನಡೆಯುವಿರಿ. ಶುಭ ಮಂಗಳ ಕಾರ್ಯಗಳು ಬೆರೆತು ನಡೆಯುವಿರಿ. ಶುಭ ಮಂಗಳ ಕಾರ್ಯಗಳು ಗೃಹದಲ್ಲಿ ನಡೆಯುವುದು. ಹೊಸ ಒಡಂಬಡಿಕೆಗಳಿಗೆ ಸಹಿ ಹಾಕುವಿರಿ. ಹಲವರಿಗೆ ಉದ್ಯೋಗದಲ್ಲಿ ಬಡ್ತಿ ಹೊಂದುವ ಅವಕಾಶವಿದೆ. ಅನ್ನಪಾನಗಳಲ್ಲಿ ಲೋಪ ಉಂಟಾಗಿ ಆರೋಗ್ಯ ಕೆಡಬಹುದು.

ಶ್ರೀ ರವಿ ಸ್ತುತಿ. ಶುಭ ಸಂಖ್ಯೆ-5

ಕನ್ಯಾ (ಟೊ,ಪ,ಪಿ,ಪು,ಷ,ಣ,ಠ,ಪೆ,ಪೊ)

ವಾರದಾರಂಭಕ್ಕೆ ಲಾಭ ಭಾವದಲ್ಲಿ ಸಂಚರಿಸುವ ಚಂದ್ರನಿಂದ ಹಲವು ಉತ್ತಮ ಫಲಗಳನ್ನು ಅನುಭವಿಸುವಿರಿ. ನೂತನ ವಸ್ತು, ವಾಹನ ಖರೀದಿಸುವ ಯೋಗವಿದೆ. ಹೊಸ ಮಿತ್ರರ ಪರಿಚಯವಾಗುವುದು. ರಾಹು-ಕೇತುಗಳು ಅಶುಭರಿರುವ ಕಾರಣ ಇದೇ ಟ್ರೆಂಡ್ ಮುಂದುವರೆಯುವ ಸೂಚನೆ ಕಡಿಮೆ. ಈ ಗ್ರಹಗಳು ನಿಮ್ಮನ್ನು ತಪ್ಪು ನಿರ್ಧಾರಗಳಿಗೆ ಪ್ರೇರೇಪಿಸುತ್ತಾರೆ. ಪ್ರಮುಖ ಕೆಲಸಗಳು ಅರ್ಧಕ್ಕೆ ಸ್ಥಗಿತವಾಗುವುದು.

ಶ್ರೀ ವೆಂಕಟೇಶ್ವರ ಪೂಜಿಸಿ. ಶುಭ ಸಂಖ್ಯೆ-3

ತುಲಾ (ರ,ರಿ,ರು,ರೆ,ರೊ,ತ,ತಿ,ತು,ತೆ)

ವಾರದಾರಂಭಕ್ಕೆ ಧನ-ಕನಕ, ವಸ್ತು ವಾಹನ ಪ್ರಾಪ್ತಿ. ಉಲ್ಲಾಸಭರಿತರಾಗಿರುತ್ತೀರಿ. ಕಚೇರಿ ಕೆಲಸಗಳಲ್ಲಿ ಮಿತ್ರರ ಸಹಕಾರ ದೊರಕುವುದು. ಒಳಿತು-ಕೆಡುಕುಗಳನ್ನು ನಿರ್ಧರಿಸಲು ಗ್ರಹಗಳ ಸಹಕಾರವಿದೆ. ಕಬ್ಬಿಣ ಕಾದಾಗ ತಟ್ಟಿಕೊ ಎಂಬ ಗಾದೆ ಮಾತಿನಂತೆ ಕಾರ್ಯ ಪ್ರವೃತ್ತರಾಗಿ, ಸಫಲತೆಯನ್ನು ಹೊಂದುವಿರಿ. ಉದ್ಯೋಗ ಅರಸುತ್ತಿರುವವರಿಗೆ ಶುಭ ಸಂದೇಶ ಬರುವುದು. ರಾಹುಗ್ರಹ ಕುಕೃತ್ಯಗಳಿಗೆ ಪ್ರೇರೇಪಿಸಬಹುದು.

ಶ್ರೀ ನೃಸಿಂಹಸ್ವಾಮಿ ಪ್ರಾರ್ಥನೆ. ಶುಭ ಸಂಖ್ಯೆ-2

ವೃಶ್ಚಿಕ (ತೊ,ನ,ನಿ,ನು,ನೆ,ನೊ,ಯು,ಯಿ,ಯ)

ಕೆಲವು ಮಹತ್ವದ ವಿಷಯಗಳು ಮಿಂಚಿ ಹೋದ ಮೇಲೆ ಚಿಂತಿಸಿ ಫಲವಿಲ್ಲ. ತಾಳ್ಮೆಯಿಂದ ಮುನ್ನಡೆಯಿರಿ. ನಿಮಗಾಗದವರು ನಿಮ್ಮ ಮೇಲೆ ಅಭಿಚಾರ ಪ್ರಯೋಗ ಮಾಡಿರುವ ಸಾಧ್ಯತೆ ಇರುತ್ತದೆ. ವಾರದ ಉತ್ತರಾರ್ಧಕ್ಕೆ ಚಂದ್ರ ಬಲದ ಪರಿಣಾಮ ಹಲವು ಕಡೆಯಿಂದ ಧನಾಗಮ, ಹಿತ ಚಿಂತಕರ ಬೆಂಬಲ ದೊರೆಯಲಿದೆ. ಶೇರು ವ್ಯವಹಾರಗಳನ್ನು ಎಚ್ಚರಿಕೆಯಿಂದ ನಿರ್ವಹಿಸಿ. ಕಾಲ ಕಾಲಕ್ಕೆ ಊಟವಿಲ್ಲದೆ ಗ್ಯಾಸ್ ಟ್ರಬಲ್ ಕಾಡಬಹುದು.

ಶ್ರೀ ಸುಬ್ರಹ್ಮಣ್ಯ ಆರಾಧನೆ, ಶುಭ ಸಂಖ್ಯೆ-3

ಧನುಸ್ಸು (ಯೆ,ಯೊ,ಬ,ಬಿ,ಬು,ಧ,ಭ,ಢ,ಬೆ)

ಸಪ್ತಾಹದ ಆದಿಗೆ ವಸ್ತ್ರ, ಭೋಜನ, ಶಯನಾದಿ ಸುಖ. ಉತ್ತಮ ಸ್ತ್ರೀ ಸಂಗ, ಹಳೆಯ ಗೊಂದಲಗಳು ಕ್ರಮೇಣ ನಿವಾರಣೆಯಾಗಲಿವೆ. ಉನ್ನತ ವಿದ್ಯೆಯಲ್ಲಿ ತೊಡಗಿದವರಿಗೆ, ಸಂಶೋಧಕರಿಗೆ ಉತ್ತಮ ಫಲಿತಾಂಶಗಳು ದೊರಕುವುದು. ನ್ಯಾಯಾಲಯ ತಗಾದೆಗಳು ಆಶಾದಾಯಕವಾಗಿದೆ. ಒಡಹುಟ್ಟಿದವರೊಡನೆ ಮಧುರ ಬಾಂಧವ್ಯ ವೃದ್ಧಿಸುವುದು. ಮನೆ ಹಾಗೂ ವಾಹನ ರಿಪೇರಿ ಖರ್ಚುಗಳು ಎದುರಾಗುವುದು.

ಶ್ರೀ ದತ್ತಾತ್ರೇಯರ ಸ್ತುತಿ. ಶುಭ ಸಂಖ್ಯೆ-7

ಮಕರ (ಬೊ,ಜ,ಜೆ,ಖಿ,ಖು,ಖೆ,ಖೊ,ಗ,ಗಿ)

ಆರ್ಥಿಕ ವ್ಯವಹಾರಗಳು ಕೊಂಚ ನಿರಾಶೆಯನ್ನು ಉಂಟು ಮಾಡುತ್ತವೆ. ಕುಟುಂಬ ಸದಸ್ಯರೊಂದಿಗೆ ಕಾರಣವಿಲ್ಲದ ಭಿನ್ನಾಭಿಪ್ರಾಯಗಳು ಉಂಟಾಗಬಹುದು. ನಿರ್ಧರಿಸಿದ ಕಾರ್ಯಗಳು ಸಮಯಕ್ಕೆ ಸರಿಯಾಗಿ ಪೂರ್ಣಗೊಳ್ಳುವುದು. ವಾರ ಮಧ್ಯೆ ದೂರದ ಬಂಧುಗಳ ಆಗಮನ ಸಂತೋಷ ನೀಡುತ್ತದೆ. ಮಕ್ಕಳ ಆರೋಗ್ಯದ ಬಗ್ಗೆ ಗಮನಹರಿಸಬೇಕು. ದೂರ ಪ್ರಯಾಣಗಳನ್ನು ರಾತ್ರಿಯಲ್ಲಿ ಮಾಡದಿರಿ.

ಶ್ರೀ ವಿಷ್ಣು ಸಹಸ್ರನಾಮ ಪಠಿಸಿ. ಶುಭ ಸಂಖ್ಯೆ-6

ಕುಂಭ (ಗು,ಗೆ,ಗೊ,ಸ,ಸಿ,ಸು,ಸೆ,ಸೊ,ದ)

ವಾರದಾರಂಭಕ್ಕೆ ಗೆಳೆಯರ ಮಿಲನ, ಸಂತೋಷ ಕೂಟಗಳು, ಆಹ್ಲಾದಕರ ಸಮಯ, ಗೃಹ ಬಳಕೆ ವಸ್ತುಗಳ ಖರೀದಿಯಿಂದ ಶ್ರೀಮತಿಗೆ ಸಂತೋಷ, ಕೈಗೊಂಡ ಕೆಲಸಗಳು ನೀವಂದುಕೊಂಡ ಸಮಯಕ್ಕೆ ಪೂರ್ಣವಾಗುವುದು. ವಾರ ಮಧ್ಯೆ ನಿಮ್ಮ ವರಮಾನ ಗಣನೀಯವಾಗಿ ಹೆಚ್ಚಲಿದೆ. ಕೈ ಹಿಡಿದು ಖರ್ಚು ಮಾಡಿ. ಭವಿಷ್ಯಕ್ಕೆ ಉಳಿತಾಯವಾಗಲಿ. ಜನ್ಮ ರಾಹು ಕೆಟ್ಟ ಜನರ ಒಡನಾಟ, ಕೆಟ್ಟ ಹವ್ಯಾಸಕ್ಕೆ ಕಾರಣವಾಗುವುದು.

ಶ್ರೀ ಹನುಮಾನ್ ಚಾಲೀಸ ಪಠಿಸಿ. ಶುಭ ಸಂಖ್ಯೆ-9

ಮೀನ (ದಿ,ದು,ಖ,ಝ,ಥ,ತೆ,ದೊ,ಚ,ಚಿ)

ನಿಮ್ಮ ಕನಸುಗಳು ನನಸಾಗಲು ಇನ್ನೂ ಕಾಲ ಪಕ್ವವಾಗಿಲ್ಲ. ಕುಟುಂಬ ಸಮಸ್ಯೆಗಳು ಉಲ್ಬಣಗೊಳ್ಳುವುದು. ನೀವು ಇದನ್ನು ಎಚ್ಚರಿಕೆಯಿಂದ ನಿಭಾಯಿಸಬೇಕು. ವಾರ ಮಧ್ಯೆ ಅಧಿಕಾರಿ ವರ್ಗದವರ ದರ್ಶನ ಫಲಪ್ರದವಾಗುವುದು. ದೇಹ ಸೌಖ್ಯ, ಧನಲಾಭಗಳು ಉಂಟು. ಸಾಡೇಸಾತಿ ಸಮಯ 'ದಂತ ಹೋದರೂ ಪಂಥ ಬಿಡೆ' ಎಂಬ ಹಠ ಒಳ್ಳೆಯದಲ್ಲ. ಅಧಿಕ ಸಂಚಾರಗಳಿಂದ ಶಾರೀರಿಕವಾಗಿ ಬಳಲುವಿರಿ.

ಶ್ರೀ ಗುರ್ವಾಷ್ಟೋತ್ತರ ಪಠಿಸಿ. ಶುಭ ಸಂಖ್ಯೆ-2

ಹಾವು ಕಚ್ಚಿ ವಿದ್ಯಾರ್ಥಿ ಸಾವು



ಕಂಪಲಾಪುರ: ಹಸುವಿಗೆ ಹುಲ್ಲು ಹಾಕಲು ಮೆದೆಯಿಂದ ಹುಲ್ಲನ್ನು ಎಳೆಯುವ ವೇಳೆ ಹಾವು ಕಚ್ಚಿ ಶಾಲಾ ವಿದ್ಯಾರ್ಥಿಯೊಬ್ಬ ಸಾವನ್ನಪ್ಪಿರುವ ಘಟನೆ ಇಂದು ಸಂಭವಿಸಿದೆ.

ಕಂಪಲಾಪುರ ಗ್ರಾಮದ ಕೋಡಿ ಬಸವೇಶ್ವರ ದೇವಾಲಯದ ಬಳಿ ಇರುವ ಶಶಿಕಲಾ ಹಾಗೂ ಮಂಜುನಾಥ್ ಅವರ ಪುತ್ರ ವೆಂಕಟೇಶ್(14) ಸಾವನ್ನಪ್ಪಿರುವ ದುರ್ದೈವಿ.

ಗುರುವಾರ ತನ್ನ ದೊಡ್ಡಮ್ಮನ ಮನೆಯ ಮದುವೆ ಕಾರ್ಯಕ್ರಮಕ್ಕೆ ಚಿಕ್ಕನೇರಳೆ ಸಮೀಪದ ಕೆಸವಿನಕೆರೆ ಗ್ರಾಮಕ್ಕೆ ತಾಯಿ ಶಶಿಕಲಾ ಜೊತೆ ವೆಂಕಟೇಶ್ ತೆರಳಿದ್ದ ನಿನ್ನೆ ಮದುವೆ ಮುಗಿಸಿ ತನ್ನ ದೊಡ್ಡಮ್ಮನ ಮನೆಯಲ್ಲಿ ಉಳಿದುಕೊಂಡಿದ್ದ. ಇಂದು ಬೆಳಿಗ್ಗೆ ಹಸುವಿಗೆ ಹುಲ್ಲು ಹಾಕಲು ಮೆದೆಯಿಂದ ಹುಲ್ಲು ಎಳೆಯುವ ಸಂದರ್ಭದಲ್ಲಿ ಆಕಸ್ಮಿಕವಾಗಿ ವೆಂಕಟೇಶನ ಬಲಗೈ ಬೆರಳಿಗೆ ಹಾವು ಕಚ್ಚಿದೆ.

ರಕ್ತ ಸೋರಿದರು ಮನೆಯವರಿಗೆ ತಿಳಿಸದೆ ಅಂಗಡಿಯಿಂದ ಪ್ಲಾಸ್ಟರ್ ತಂದು ಬೆರಳಿಗೆ ಹಾಕಿಕೊಂಡು ಹಾಗೆಯೇ ಕೈ ತೊಳೆದುಕೊಂಡು ಊಟ ಮಾಡಿದ್ದಾನೆ. ತಕ್ಷಣವೆ ಪ್ರಜ್ಞೆ ತಪ್ಪಿ ಬಿದ್ದಿದ್ದಾನೆ. ಆಗ ಮನೆಯವರು ತಕ್ಷಣ ಪಿರಿಯಾಪಟ್ಟಣ ಸಾರ್ವಜನಿಕ ಆಸ್ಪತ್ರೆಗೆ ಕರ್ಯೆತಂದು ಚಿಕಿತ್ಸೆ ಕೊಡಿಸಿದರು. ಅಷ್ಟರಲ್ಲಿ ಆತ ಸಾವನ್ನಪ್ಪಿದ್ದ.

ಇದ್ದೊಬ್ಬ ಮಗನನ್ನು ಕಳೆದುಕೊಂಡ ಕುಟುಂಬದ ಆಕ್ರಂದನ ಮುಗಿಲು ಮುಟ್ಟಿತ್ತು. ಪಿರಿಯಾಪಟ್ಟಣ ಪೊಲೀಸ್ ಠಾಣೆಯ ಸಹಾಯಕ 'ಇನ್ಸ್‌ಪೆಕ್ಟರ್ ಜಗದೀಶ್ ಸ್ಥಳಕ್ಕೆ ಭೇಟಿ ನೀಡಿ ತನಿಖೆ ನಡೆಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಹೈರಿಗೆಯಲ್ಲಿ ಶ್ರೀರಾಮ ಮಂದಿರ ಉದ್ಘಾಟನೆ



ಶ್ರೀ ಆದಿಚುಂಚನಗಿರಿ ಶಾಖಾ ಮಠ ಮೈಸೂರು ಶ್ರೀ ಸೋಮನಾಥೇಶ್ವರ ಸ್ವಾಮೀಜಿಯವರು ನೂತನವಾಗಿ ನಿರ್ಮಾಣವಾಗಿರುವ ಶ್ರೀರಾಮ ಮಂದಿರವನ್ನು ಉದ್ಘಾಟಿಸಿದರು.

ಹೆಚ್.ಡಿ.ಕೋಟೆ: ತಾಲೂಕಿನ ಹೈರಿಗೆ ಗ್ರಾಮದಲ್ಲಿ ಶ್ರೀರಾಮ ಒಕ್ಕಲಿಗರ ಸೇವಾ ಟ್ರಸ್ಟ್ ವತಿಯಿಂದ ನೂತನವಾಗಿ ನಿರ್ಮಾಣ ಮಾಡಲಾಗಿರುವ ಶ್ರೀರಾಮ ಮಂದಿರವನ್ನು ವಿಶ್ವ ಒಕ್ಕಲಿಗ ಮಹಾ ಸಂಸ್ಥಾನ ಮಠದ ನಿಶ್ಚಲಾನಂದ ಸ್ವಾಮೀಜಿ, ಶ್ರೀ ಶ್ರೀ ಆದಿಚುಂಚನಗಿರಿ ಮೈಸೂರು ಶಾಖಾ ಮಠ ಶ್ರೀ ಶ್ರೀ ಸೋಮನಾಥೇಶ್ವರ ಸ್ವಾಮೀಜಿಯವರು ಉದ್ಘಾಟಿಸಿದರು.

ಬುಧವಾರ 5.30ರ ಬ್ರಾಹ್ಮಿ ಮುಹೂರ್ತದಲ್ಲಿ ಸಕಲೀಕರಣ ಪೂರ್ವಕ ನಾಂದಿ ಮಂಗಲ, ಧ್ವಜಾರೋಹಣ, ವಾದ್ಯ ಪೂಜೆ ನಂತರ ನವಗ್ರಹ ಶಾಂತಿ ಹೋಮ, ಯಾಗ ಮಂಟಪ ಶುದ್ದಿ, ಕಂಕಣ ಬಂಧನ, ಇಂದ್ರ ಪ್ರತಿಷ್ಠೆ ಅಂಕುರಾರ್ಪಣೆ, ವಿನಾಯಕನಿಗೆ ಪಂಚಾಮೃತ ಅಭಿಷೇಕ ಪೂಜೆ, ವೃಷಭ ಲಗ್ನದಲ್ಲಿ ಧ್ವಜಾರೋಹಣ ಬೆಳಿಗ್ಗೆ 9 ರಿಂದ 9.30ವರೆಗೆ ಬೆಳಿಗ್ಗೆ 10 ಗಂಟೆಯಿಂದ ತ್ರಿಕೊಂಡ ಹೋಮ ಮಧ್ಯಾಹ್ನ 2 ಗಂಟೆಗೆ ಶ್ರೀರಾಮ ಆರಾಧನೆ ಪೂಜೆ ನಂತರ ಚತುರ್ದಿಕ್ಕು ದಿಕ್ಕು ಹೋಮ, ಗ್ರಾಮ ಪ್ರದಕ್ಷಿಣೆ ಮತ್ತು ಮಂಡು ಕಫಲವಾಸ್ತು ಹೋಮ, ಸಂಜೆ 7:30 ರಿಂದ ಅನ್ನಪ್ರಸಾದ ವಿನಿಯೋಗ, 23 ಗುರುವಾರ ಸಪ್ತಮಿಯಂದು ಬೆಳಿಗ್ಗೆ 5–30 ರಿಂದ 6–30ಕ್ಕೆ ಶುಭವೇಷ ಲಗ್ನದಲ್ಲಿ ಆಗ್ರೋದಕ ತರುವುದು, ಶ್ರೀರಾಮ ಜನ್ಮಾಭಿಷೇಕ ಪ್ರಾಣ ಪ್ರತಿಷ್ಠೆ ರಾಜೋಪಚಾರ, ಮಹಾಮಂಗಳಾರತಿ ಧ್ವಜಾರೋಹಣ ಕಾರ್ಯಕ್ರಮ ಏರ್ಪಡಿಸಲಾಗಿತ್ತು

ಈ ಎಲ್ಲಾ ಪೂಜಾ ಕೈಂಕಾರಿಗಳನ್ನು ಶ್ರೀ ಭರತೇಶ ಜೋಯಿಸರು ಬಿಡುಗಲು ಮತ್ತು ತಂಡದವರು ನೆರವೇರಿಸಿ ನೆರವೇರಿಸಿದ್ದರು.

ಶ್ರೀ ಶಂಕರ ಜಯಂತಿ ಅಂಗವಾಗಿ ರಥಯಾತ್ರೆ



ತಿ.ನರಸೀಪುರ, ಏ.25– ಶ್ರೀ ಶಂಕರ ಜಯಂತಿ ಅಂಗವಾಗಿ ಹಳೆ ತಿರುಮಕೂಡಲಿನಲ್ಲಿರುವ ಶ್ರೀ ಶಂಕರಾಚಾರ್ಯರ ಮಠದಿಂದ ಮೆರವಣಿಗೆಯನ್ನು ನಡೆಸಲಾಯಿತು. ಮುಖ್ಯಬೀದಿಗಳಲ್ಲಿ ಸಾಗಿದ ಶ್ರೀಶಂಕರಾಚಾರ್ಯರ ರಥಯಾತ್ರೆಯಲ್ಲಿ ಪುರೋಹಿತರ ವೇದಬಳಗ, ಮಹಿಳಾ ಭಜನಾ ತಂಡ, ನಾದಸ್ವರ ಮಂಗಳ ವಾದ್ಯ ಗಮನಸೆಳೆಯಿತು.

ಕಾರ್ಯದರ್ಶಿ ರವಿಕುಮಾರ್, ಖಜಾಂಚಿ ಎಸ್ ಎಸ್ ಪೈಂಟ್ ಮಾಲಿಕ ಗುರುದತ್, ಸಹ ಕಾರ್ಯದರ್ಶಿ ವೆಂಕಟೇಶ್, ಮುರಳಿಧರ್, ಸುರೇಶ್, ನಂಜುಂಡಸ್ವಾಮಿ, ಗಣೇಶ್, ಕೃಷ್ಣ, ಪ್ರಕಾಶ್, ಚೌಡೇಶ್ವರಿ ದೇವಸ್ಥಾನದ ಅರ್ಚಕ ಪಣೀಶ್ ಕುಮಾರ್, ಒಕ್ಕಲಿಗರ ಸಂಘದ ಲಕ್ಷ್ಮಣ ಮತ್ತಿತರಿದ್ದರು.

ಚುನಾವಣಾಧಿಕಾರಿಗೆ ಅರ್ಜಿ ನಮೂನೆ ಸಲ್ಲಿಕೆ



ವರುಣ ವಿಧಾನಸಭಾ ಕ್ಷೇತ್ರದ ಬಿಎಲ್‌ಎ 2, 173 ಅರ್ಜಿ ನಮೂನೆಗಳನ್ನು ಚುನಾವಣಾಧಿಕಾರಿಗಳಿಗೆ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಮಂಡಲದ ಉಸ್ತುವಾರಿಗಳಾದ ಎಸ್.ಮಹದೇವಯ್ಯ ಅಧ್ಯಕ್ಷ ನಾಗರ್ಲೆ ಎನ್.ಎಂ ಮಹದೇವಸ್ವಾಮಿ, ಪ್ರಧಾನ ಕಾರ್ಯದರ್ಶಿ ನಂಜುಂಡಸ್ವಾಮಿ ಬಿಎಲ್‌ಎ 1 ಪುಟ್ಟೇಗೌಡನ ಹುಂಡಿ ಮಹೇಶ್ ಹಾಪ್ ಕಾಮ್ಸ್ ನಿರ್ದೇಶಕರಾದ ಪಿಲ್ಲಳ್ಳಿ ರಾಮಚಂದ್ರ ಹಾಜರಿದ್ದರು

ವಾತ್ಸಲ್ಯ ಪ್ರೌಢಶಾಲೆಗೆ ಶೇ100 ರಷ್ಟು ಫಲಿತಾಂಶ

ಬನ್ನೂರು: ಪಟ್ಟಣದ ಸಮೀಪದ ಯಾಚೇನಹಳ್ಳಿ ಗ್ರಾಮದಲ್ಲಿ ಶ್ರೀ ರಾಮಕೃಷ್ಣ ಸೇವಾ ಕೇಂದ್ರದ ಟ್ರಸ್ಟ್ ವತಿಯಿಂದ ನಡೆಯುತ್ತಿರುವ ವಾತ್ಸಲ್ಯ ಇಂಗ್ಲೀಷ್ ಮೀಡಿಯಂ ಪ್ರೌಢಶಾಲೆಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ 100 ರಷ್ಟು ಫಲಿತಾಂಶ ದೊರೆತಿದ್ದು, ಕನ್ನಡ ಮಾಧ್ಯಮ ಪ್ರೌಢಶಾಲೆಗೆ ಶೇ 97.14 ರಷ್ಟು ಫಲಿತಾಂಶ ದೊರೆತಿದೆ.

ಇಂಗ್ಲೀಷ್ ಮಾಧ್ಯಮದಲ್ಲಿ ನಮ್ರತ 582 ಅಂಕವನ್ನು ಗಳಿಸುವ ಮೂಲಕ ಅತೀ ಹೆಚ್ಚು ಅಂಕವನ್ನು ಪಡೆದ ವಿದ್ಯಾರ್ಥಿನಿಯಾಗಿದ್ದಾರೆ. ಕನ್ನಡ ಮಾಧ್ಯಮದಲ್ಲಿ ತನುಶ್ರೀ 530 ಅಂಕವನ್ನು ಪಡೆದರೆ, ಜಾಹ್ನವಿ 526 ಅಂಕವನ್ನು ಪಡೆದುಕೊಂಡಿದ್ದಾರೆ.ಹೆಚ್ಚು ಅಂಕವನ್ನು ಪಡೆದ ವಿದ್ಯಾರ್ಥಿಗಳನ್ನು, ಶಿಕ್ಷಕ ವೃಂದದವರನ್ನು ಶಾಲೆಯ ಆಡಳಿತ ಮಂಡಳಿಯ ಕಾರ್ಯದರ್ಶಿ ನಾದಾನಂದನಾಥ ಸ್ವಾಮೀಜಿಯವರು ಅಭಿನಂದಿಸಿದ್ದಾರೆ.

ಕಮಲಮ್ಮ ಶಂಕರಪ್ಪ ವಿದ್ಯಾಸಂಸ್ಥೆಗೆ ಶೇ 100 ರಷ್ಟು ಫಲಿತಾಂಶ

ಮಲ್ಕುಂಡಿ: ಸಮೀಪದ ಹೆಡಿಯಾಲ ಗ್ರಾಮದ ಕಮಲಮ್ಮ ಶಂಕರಪ್ಪ ಆಂಗ್ಲ ಮಾಧ್ಯಮ ಪ್ರೌಢಶಾಲಾಗೆ ಎಸ್ ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ100 ರಷ್ಟು ಫಲಿತಾಂಶ ಬಂದಿದೆ ಎಂದು ಸಂಸ್ಥೆಯ ಕಾರ್ಯದರ್ಶಿ ಮಹದೇವಸ್ವಾಮಿ ತಿಳಿಸಿದ್ದಾರೆ. ಪರೀಕ್ಷೆಯಲ್ಲಿ ವಿದ್ಯಾರ್ಥಿಗಳಾದ ರೂಹೇಫಾ ಖಾನಮ್ 538, ಮಹಿನ್ ಲೋಕೇಶ್ 457, ಅನ್ವಿತಾ 439,ತೇಜಸ್ 411,ಕೃಷ್ಣಗೌಡ 364, ಮನಿಶ್ ಗೌಡ 412, ಅಂಕ ಪಡೆದು ಶಾಲೆಗೆ ಕೀರ್ತಿ ತಂದಿದ್ದಾರೆ.

ಮಲ್ಕುಂಡಿ: ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶ್ರೀ ಗುರುಮಲ್ಲೇಶ್ವರ ಪ್ರೌಢಶಾಲೆಯ ವಿಧ್ಯಾರ್ಥಿನಿ ಎಂ ಮಾನಸ 625ಕ್ಕೆ 465 ಅಂಕ ಒಡೆದು ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾಳೆ ಇವರು ಮಲ್ಕುಂಡಿ ಗ್ರಾಮದ ಎಂ.ಎಸ್.ಮಹೇಶ್ ಪುತ್ರಿ

ಪಿ.ಶಮ್ಯ ಹುಣಸೂರು ತಾಲೂಕಿಗೆ ಪ್ರಥಮ



ಪಿ.ಶಮ್ಯ

ಹುಣಸೂರು,ಏ.25– ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಪಲಿತಾಂಶದಲ್ಲಿ ಹುಣಸೂರಿನ ಪ್ರತಿಷ್ಠಿತ ಸಂತ ಜೋಸೆಫರ ಪ್ರೌಢಶಾಲೆ ವಿದ್ಯಾರ್ಥಿನಿ ಪಿ.ಶಮ್ಯ 625ಕ್ಕೆ 621 ಅಂಕಗಳನ್ನು ಪಡೆಯುವ ಮೂಲಕ ತಾಲೂಕಿಗೆ ಟಾಪರ್ ಅಗಿ ಹೊರಹೊಮ್ಮಿದ್ದಾರೆ.

ತಾಲೂಕಿನ ಮರದೂರು ಲಾ ಸಾಲೇಟ್ ವಿದ್ಯಾನಿಕೇತನ್ ಪ್ರೌಢ ಶಾಲೆಯ ಬಿ.ವೈ. ಚಂದನ ಹಾಗೂ ಶಾಸಂಕ್ ತಲಾ 618 ಅಂಕಗಳನ್ನು ಪಡೆದುಕೊಂಡು ತಾಲೂಕು ಮಟ್ಟದ ದ್ವಿತೀಯ ಸ್ಥಾನವನ್ನು ಪಡೆದುಕೊಂಡಿದ್ದಾರೆ. ಸಂತ ಜೋಸೆಫರ ಶಾಲೆಯ ಯಶಸ್ವಿನಿ 615 ಅಂಕಗಳನ್ನು ಪಡೆದು ತೃತೀಯ ಸ್ಥಾನ ಪಡೆದುಕೊಂಡರೆ ಹುಣಸೂರು ಅದರ್ಶ ಶಾಲೆಯ ಹೆಚ್.ಜೆ.ನೀರಿಕ್ಷಾ 614 ಅಂಕಗಳನ್ನು ಪಡೆಯುವ ಮೂಲಕ ನಾಲ್ಕನೆ ಸ್ಥಾನವನ್ನು ಪಡೆದುಕೊಂಡಿದ್ದಾರೆ ಹಾಗೂ ಮರದೂರ್ ಲಾ ಸಾಲೇಟ್ ವಿದ್ಯಾ ಸಂಸ್ಥೆಯ ರಹನಾ ಬಸೀತ್ 613 ಅಂಕಗಳನ್ನು ಪಡೆದುಕೊಳ್ಳುವ ಮೂಲಕ ಐದನೆ ಸ್ಥಾನವನ್ನು ಗಿಟ್ಟಿಸಿಕೊಂಡಿದ್ದಾರೆ.

ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕ ಪಡೆದು ತಾಲೂಕಿಗೆ ಟಾಪರ್ ಅಗಿರುವ ವಿದ್ಯಾರ್ಥಿನಿ ಪಿ.ಶಮ್ಯ ಹುಣಸೂರು ನ್ಯಾಯಾಲಯದ ಅಮೀನ ಪಿ.ಎಸ್.ಪ್ರಭು ಕುಮಾರ್ ಮತ್ತು ಜಲಜೇಶ್ವರಿ ದಂಪತಿಗಳ ಪುತ್ರಿ.

ಟ್ಯಾಲೆಂಟ್ ವಿದ್ಯಾಸಂಸ್ಥೆಗೆ ಶೇ.95 ಫಲಿತಾಂಶ






ಹುಣಸೂರು, ಏ.25– ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ನಗರದ ಟ್ಯಾಲೆಂಟ್ ವಿದ್ಯಾ ಸಂಸ್ಥೆಗೆ ಶೇ.95 ಫಲಿತಾಂಶ ಪಡೆದುಕೊಂಡಿದೆ ಎಂದು ಶಾಲೆಯ ಪ್ರಾಂಶುಪಾಲರಾದ ಮಂಜುನಾಥ್ ತಿಳಿಸಿದ್ದಾರೆ.

ಶಾಲೆಯ ಅದಿತ್ಯ 625ಕ್ಕೆ 605 (97%), ತನಿಷ್ಕ್ ರಾಜ್ 602(96%), ಹೆಚ್.ಅರ್.ಮೋಹನ್ 585(94%), ಪೂರ್ವಿಕಾ 574, (92%), ಪಡೆದುಕೊಂಡು ಶಾಲೆಗೆ ಪ್ರಥಮರೆನಿಸಿ ಕೀರ್ತಿ ತಂದಿದ್ದಾರೆ.

ಪರೀಕ್ಷೆ ಬರೆದಿದ್ದ 82 ವಿದ್ಯಾರ್ಥಿಗಳ ಪೈಕಿ 11 ಉನ್ನತ ಶ್ರೇಣಿ, 24 ಪ್ರಥಮ ದರ್ಜೆ, 43 ದ್ವಿತಿಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ ಎಂದು ತಿಳಿಸಿದರು

ಲಯನ್ ಅಕಾಡೆಮಿ ಶಾಲೆಗೆ ಶೇ.100ರಷ್ಟು ಫಲಿತಾಂಶ


ಸರಗೂರು, ಏ.25– ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಲಯನ್ಸ್ ಅಕಾಡೆಮಿ ಶಾಲೆ ಶೇ.100ರಷ್ಟು ಫಲಿತಾಂಶ ಪಡೆದಿದೆ. ಪರೀಕ್ಷೆ ಬರೆದಿದ್ದ ಎಲ್ಲಾ 53 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದು, 21 ಮಂದಿ ಅತ್ಯುನ್ನತ ಶ್ರೇಣಿ, 30 ಮಂದಿ ಪ್ರಥಮ, ಇಬ್ಬರು ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ತೇರ್ಗಡೆ ಯಾಗಿದ್ದಾರೆ. ಶಾಲೆಯ ವಿದ್ಯಾರ್ಥಿ ಕೌಶಿಕ್ 608 ಅಂಕ ಪಡೆದು ತಾಲೂಕಿಗೆ ದ್ವಿತೀಯ ಸ್ಥಾನ ಪಡೆದಿದ್ದಾನೆ. ಶಾಲೆಯ ವಿದ್ಯಾರ್ಥಿಗಳು ಹಾಗೂ ಶಿಕ್ಷಕ ವರ್ಗವನ್ನು ಶಾಲೆ ಆಡಳಿತ ಮಂಡಳಿ ಅಭಿನಂದಿಸಿದೆ.

ಸಮುದಾಯ ಭವನಕ್ಕೆ ಪಾತ್ರೆಗಳ ಕೊಡುಗೆ



ತಿ.ನರಸೀಪುರ ಪಟ್ಟಣದ ಕನಕ ಸಮುದಾಯ ಭವನಕ್ಕೆ ವಿಜಯ್ ಕುಮಾರ್ ಸ್ಮರಣಾರ್ಥ ಗಂಗಾದೇವಿ ಮತ್ತು ಮಹದೇವಯ್ಯ ಕುಟುಂಬವು 3 ಲಕ್ಷ ರೂಪಾಯಿ ವೆಚ್ಚದಲ್ಲಿ ಅಡುಗೆ ಪಾತ್ರೆಗಳನ್ನು ಕೊಡುಗೆಯಾಗಿ ನೀಡಿತು. ಟೌನ್ ಕುರುಬರ ಸಂಘದ ಅಧ್ಯಕ್ಷ ಮಹದೇವು ಪುಳ್ಳಾರಿ ಗೌಡ, ಯಜಮಾನರಾದ ರಾಜು ಮದ್ದೂರೇಗೌಡ, ಚಿಕ್ಕ ಯಜಮಾನ ರಾಜು, ಸಂಘದ ಉಪಾಧ್ಯಕ್ಷ ಪುರಸಭೆಯ ಮಾಜಿ ಅಧ್ಯಕ್ಷ ಟಿಎಂ ನಂಜುಂಡಸ್ವಾಮಿ, ಕಾರ್ಯದರ್ಶಿ ರವೀಂದ್ರ ಕುಮಾರ್, ಸಹ ಕಾರ್ಯದರ್ಶಿ ಎಂ ಮಹೇಶ್, ನಿರ್ದೇಶಕರಾದ ಗುರುಮಲ್ಲಪ್ಪ, ಸೋಮಶೇಖರ್, ಕಾರ್ ನಾಗ ಮತ್ತಿತರರಿದ್ದಾರೆ.

ಮೂಗೂರು ಶಾಲೆಗೆ ಶೇ95.61 ಫಲಿತಾಂಶ



ಮೂಗೂರು: ಕಳೆದ ಮಾರ್ಚ್‌ನಲ್ಲಿ ನಡೆದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಮೂಗೂರು ಕರ್ನಾಟಕ ಪಬ್ಲಿಕ್ ಶಾಲೆಯ ಪ್ರೌಢಶಾಲಾ ವಿಭಾಗಕ್ಕೆ ಶೇ95.61 ಫಲಿತಾಂಶ ಲಭಿಸಿದೆ. ಪರೀಕ್ಷೆಗೆ ಹಾಜರಾಗಿದ್ದ 114 ವಿದ್ಯಾರ್ಥಿಗಳ ಪೈಕಿ 109 ಉತ್ತೀರ್ಣರಾಗಿದ್ದಾರೆ . 12 ಅತ್ಯುನ್ನತ,47 ಪ್ರಥಮ,.22 ದ್ವಿತೀಯ ,28 ತೃತೀಯ, ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ. ಶ್ರವಂತ್ ಎಂ 602, ವೈಷ್ಣವಿ 598, ಶಿವಪ್ರಸಾದ್ ಯು.598, ಸುಮ 588, ಅಂಕಗಳನ್ನು ಪಡೆದಿದ್ದು, ಕನ್ನಡ ಭಾಷೆ ವಿಷಯದಲ್ಲಿ ಸುಮ, ವೈಷ್ಣವಿ,125ಕ್ಕೆ 125 ಅಂಕ ಪಡೆದಿದ್ದಾರೆ ಎಂದು ಪ್ರೌಢಶಾಲೆಯ ಉಪಪ್ರಾಂಶುಪಾಲರಾದ ಸಿ ಪುಟ್ಟಸ್ವಾಮಿ ತಿಳಿಸಿದ್ದಾರೆ ಶಾಲಾ ಅಧ್ಯಾಪಕ ವೃಂದ ಹಾಗೂ ಶಾಲಾಭಿವೃದ್ಧಿ ಸಮಿತಿ ವಿದ್ಯಾರ್ಥಿಗಳನ್ನು ಅಭಿನಂದಿಸಿದ್ದಾರೆ.

ಮೂರನೇ ಪುಟದಿಂದ

ಮೇ 10ರೊಳಗೆ ನಿರ್ಧರಿಸಿ

ಹುರುಪಿನಿಂದ ಬಹಿರಂಗ ಹೇಳಿಕೆಗಳನ್ನು ನೀಡಿದ್ದನ್ನು ನೀವು ಗಮನಿಸಿದ್ದೀರಿ. ಮುಖ್ಯಮಂತ್ರಿ ಸಿದ್ದರಾಮಯ್ಯ ಸಹ ನುಡಿದಂತೆ ನಡೆದುಕೊಳ್ಳುತ್ತಿಲ್ಲ. ಅಧಿಕಾರ ಹಂಚಿಕೆ ವಿಷಯ ಮುನ್ನೆಲೆಗೆ ಬಂದಾಗಲೆಲ್ಲಾ ಗಮನ ಬೇರೆಡೆ ಸೆಳೆಯಲು ವಿಷಯಾಂತರ ಮಾಡುತ್ತಿದ್ದಾರೆ. ಚಳಿಗಾಲದ ಅಧಿವೇಶನ, ಬಜೆಟ್ ಅಧಿವೇಶನ, ಕೆಲವು ರಾಜ್ಯಗಳ ಹಾಗೂ ಪಂಚ ರಾಜ್ಯಗಳ ವಿಧಾನಸಭಾ ಚುನಾವಣೆ, ಹೀಗೆ ಒಂದಲ್ಲಾ ಒಂದು ನೆಪ ಹೂಡುವ ಮೂಲಕ ನನಗೆ ದಕ್ಕಬೇಕಾದ ಅಧಿ ಕಾರ ಸಿಗದಂತೆ ಮಾಡಲಾಗುತ್ತಿದೆ. ಈಗ ಎಲ್ಲಾ ಅಸ್ತ್ರಗಳು ಪ್ರಯೋಗವಾಗಿವೆ. ಇನ್ನು ಮೇಲಾದರೂ ನನ್ನ ವಿಷಯ ತೆಗೆದುಕೊಳ್ಳಿ, ಮೇ 10ರ ನಂತರ ನಾನು ಈ ವಿಷಯವಾಗಿ ದೆಹಲಿ ಕಡೆ ಬರು ವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಡಿ.ಕೆ.ಸಹೋದರರ ಮಾತುಗಳನ್ನು ಆಲಿಸಿದ ಖರ್ಗೆ, ಪ್ರವಾಸದಲ್ಲಿರುವ ರಾಹುಲ್ ಗಾಂಧಿ ಏ.29ಕ್ಕೆ ಹಿಂತಿರುಗಲಿದ್ದು, ಬಂದ ತಕ್ಷಣ ಕರ್ನಾಟಕ ಕಾಂಗ್ರೆಸ್ ವಿಚಾರ ಪ್ರಸ್ತಾಪಿಸಿ ಪರಿಹಾರ ಕಂಡುಕೊಳ್ಳುವ ಭರವಸೆ ನೀಡಿದ್ದಾರೆ ಎನ್ನಲಾಗಿದೆ.

ಹೈಕೋರ್ಟ್ ಸೂಚನೆ; ಅರ್ಜಿ ವಿಲೇವಾರಿ!

ಅರ್ಥವಾಗುತ್ತವೆ. ಅದೇ ಕಾರಣಕ್ಕಾಗಿ ಪ್ರಕರಣದ ಮೆರಿಟ್ ಮೇಲೆ ವಾದಿಸಲಿಲ್ಲ. ಪ್ರಕರಣದ ಸೂಕ್ಷ್ಮತೆ ಅರ್ಥವಾಗಿದ್ದು, ರಣವೀರ್ ವಿಷಾದ ವ್ಯಕ್ತಪಡಿಸಿದ್ದಾರೆ ಎಂದರು.

ಈ ಹಂತದಲ್ಲಿ ಪೀಠವು ಜನರ ಭಾವನೆಗಳನ್ನು ಕೇಳಿಯಾಗಿದೆ. ಕಾನೂನಾತ್ಮಕವಾಗಿ ಉತ್ತರಿಸಬೇಕು ಎಂದಾದರೆ ಸಾಕಷ್ಟು ತೀರ್ಪುಗಳಿವೆ. ನಾಲ್ಕು ವಾರದಲ್ಲಿ ರಣವೀರ್ ಚಾಮುಂಡಿ ಬೆಟ್ಟಕ್ಕೆ ಭೇಟಿ ನೀಡಬೇಕು ಎಂದರು. ಆಗ ಪೂವಯ್ಯ, ಈ ಎರಡು ನಿರ್ದಿಷ್ಟ ಸಿನಿಮಾಗಳು (ದುರಂಧರ್) ಬಂದ ಮೇಲೆ ಭದ್ರತೆಯ ಸಮಸ್ಯೆ ಹೆಚ್ಚಾಗಿದೆ ಎಂದರು. ಇದಕ್ಕೆ ಪೀಠವು, ಭದ್ರತೆಯು ಸಮಸ್ಯೆ, ಕರ್ನಾಟಕ ಪೊಲೀಸರು ಭದ್ರತೆ ನೋಡಿಕೊಳ್ಳುತ್ತಾರೆ ಎಂದು ಹೇಳಿದರು.

ರಾಜ್ಯ ಹೆಚ್ಚುವರಿ ಸರ್ಕಾರಿ ಅಭಿಯೋಜಕ ಬಿ.ಎನ್. ಜಗದೀಶ್ ಅವರು, ರಣವೀರ್ ಬರುವ ಮಾಹಿತಿಯನ್ನು ಮುಂಚಿತವಾಗಿ ನೀಡಲು ಆದೇಶಿಸಬೇಕು ಎಂದರು. ಎಲ್ಲವನ್ನು ಆಲಿಸಿದ ಪೀಠವು ರಣವೀರ್ ಅಫಿಡವಿಟ್ ಸ್ವೀಕರಿಸಿ, ಅರ್ಜಿ ಇತ್ಯರ್ಥ ಪಡಿಸಲಾಗಿದೆ ಎಂದು ಆದೇಶಿಸಿತು. ಗೋವಾದಲ್ಲಿ ನಡೆದಿದ್ದ ಭಾರತೀಯ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ (ಐಎಫ್‌ಎಫ್‌ಐ) ಕಾಂತಾರ ಚಾಪ್ಟರ್–1 ಚಿತ್ರದ ಚಾಮುಂಡಿ ದೈವಕ್ಕೆ ಅಪಮಾನ ಮಾಡಿದ ಆರೋಪದ ಸಂಬಂಧ ದಾಖಲಾಗಿರುವ ಖಾಸಗಿ ದೂರು ಮತ್ತು ಅದರ ಮುಂದುವರಿದ ಭಾಗವಾಗಿ ಬೆಂಗಳೂರಿನ ಹೈಗ್ರೌಂಡ್ಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ರದ್ದುಪಡಿಸುವಂತೆ ಕೋರಿ ರಣವೀರ್ ಸಿಂಗ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರ ಏಕಸದಸ್ಯ ಪೀಠ ನಡೆಸಿತು.

ಮರುಎಣಿಕೆಗೆ ಹೈಕೋರ್ಟ್ ಆದೇಶ

ಮರು ಎಣಿಕೆ ಹಂತಕ್ಕೆ ಬಂದಿದೆ. ಶೃಂಗೇರಿ ಕ್ಷೇತ್ರದ ಅಂಚೆ ಮತಗಳ ಕುರಿತಾಗಿ ಮಾಜಿ ಶಾಸಕ ಡಿ.ಎನ್. ಜೀವರಾಜ್ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಟಿ.ಡಿ. ರಾಜೇಗೌಡ ಅವರ ಆಯ್ಕೆ ಅಸಿಂಧು ಎಂದು ಪ್ರಶ್ನಿಸಿ, ವಿಶೇಷವಾಗಿ ಅಂಚೆ ಮತಗಳ ಎಣಿಕೆಯಲ್ಲಿ ಅಸಂಗತತೆ ಇದೆ ಎಂದು ಅವರು ಆರೋಪಿಸಿದ್ದರು. ಈ ಅರ್ಜಿಯನ್ನು ಪರಿಶೀಲಿಸಿದ ಹೈಕೋರ್ಟ್, ಅಂಚೆ ಮತಗಳ ಮರು ಎಣಿಕೆ ನಡೆಸುವಂತೆ ಆದೇಶ ನೀಡಿದೆ. ಈ ಮರು ಎಣಿಕೆ ಮೇ 2ರಂದು ನಡೆಯಲಿದೆ. ಚಿಕ್ಕಮಗಳೂರು ನಗರದಲ್ಲಿರುವ IDSG ಕಾಲೇಜಿನಲ್ಲಿ ಬೆಳಗ್ಗೆ 9 ಗಂಟೆಯಿಂದ ಅಂಚೆ ಮತಗಳ ಮರು ಎಣಿಕೆ ಪ್ರಕ್ರಿಯೆ ಆರಂಭವಾಗಲಿದೆ. ಇದಕ್ಕಾಗಿ ಚುನಾವಣಾ ಆಯೋಗ ಈಗಾಗಲೇ ಸಿದ್ಧತೆಗಳನ್ನು ಆರಂಭಿಸಿದೆ. ಹೈಕೋರ್ಟ್ ಆದೇಶದ ಮೇರೆಗೆ ಮರು ಎಣಿಕೆ ನಡೆಯುತ್ತಿರುವುದರಿಂದ, ಈ ಪ್ರಕ್ರಿಯೆ ರಾಜ್ಯದಷ್ಟೇ ಅಲ್ಲ, ರಾಜ್ಯದ ಹೊರಗೂ ಗಮನ ಸೆಳೆದಿದೆ. ಹೀಗಾಗಿ ಶಾಸಕ ಟಿ.ಡಿ. ರಾಜೇಗೌಡಗೆ ಆತಂಕ ಹೆಚ್ಚಾಗಿದೆ.

ಹೈಕೋರ್ಟ್ ಈಗಾಗಲೇ ಏಪ್ರಿಲ್ 6 ರಂದು ಅಂಚೆ ಮತಗಳ ಮರು ಎಣಿಕೆ ಮಾಡಲು ಆದೇಶ ನೀಡಿತ್ತು. ಆದರೆ ಅದೇ ತೀರ್ಪಿಗೆ 2 ವಾರಗಳ ಮಧ್ಯಂತರ ತಡೆ ನೀಡಿತ್ತು. ಆ ಅವಧಿಯಲ್ಲಿ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿಕೊಳ್ಳಲು ಅವಕಾಶ ನೀಡಲಾಗಿತ್ತು. ಆದರೆ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸದ ಕಾರಣ, ಈಗ ಹೈಕೋರ್ಟ್‌ನ ಆದೇಶ ಜಾರಿಗೊಳಿಸಲಾಗುತ್ತಿದೆ. ಇದರಿಂದ ಅಂಚೆ ಮತಗಳ ಮರು ಎಣಿಕೆ ನಡೆಸುವುದು ಕಡ್ಡಾಯವಾಗಿದೆ.

ತರೀಪುರದ ವಿನಾಯಕ ಪ್ರೌಢಶಾಲೆಗೆ ಶೇ.98 ಫಲಿತಾಂಶ

ಮೈಸೂರು: ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲೂಕು ತರೀಪುರದ ವಿನಾಯಕ ಪ್ರೌಢಶಾಲೆಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.98.41 ಫಲಿತಾಂಶ ಬಂದಿದೆ. ಶಾಲೆಯ 63 ವಿದ್ಯಾರ್ಥಿಗಳಲ್ಲಿ 17 ಮಂದಿ ಅತ್ಯುನ್ನತ ಶ್ರೇಣಿ, 31 ಮಂದಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆಂದು ಮುಖ್ಯೋಪಾಧ್ಯಾಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡೆಲ್ಲಿ ವಿರುದ್ಧ ಗೆದ್ದು ವಿಶ್ವದಾಖಲೆ ಬರೆದ ಪಂಜಾಬ್ ಕಿಂಗ್ಸ್



ಪ್ರಿಯಾನ್ಶ್ ಆರ್ಯ–ಪ್ರಭ್ ಸಿಮ್ರಾನ್ ಸಿಂಗ್

ಡೆಲ್ಲಿ, ಏ.25(ವಿವಿಹೆಚ್)– ಕನ್ನಡಿಗ ಕೆ.ಎಲ್.ರಾಹುಲ್ ಸ್ಫೋಟಕ ಶತಕದ ಹೊರತಾಗಿಯೂ, ಬ್ಯಾಟಿಂಗ್‌ನಲ್ಲಿ ಸಾಂಘಿಕ ಪ್ರದರ್ಶನ ತೋರಿದ ಪಂಜಾಬ್ ಕಿಂಗ್ಸ್, ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ 6 ವಿಕೆಟ್‌ಗಳ ಭರ್ಜರಿ ಗೆಲುವು ದಾಖಲಿಸಿತು. ಆ ಮೂಲಕ ಐಪಿಎಲ್ ಇತಿಹಾಸದಲ್ಲಿಯೇ ಅತೀ ದೊಡ್ಡ ಮೊತ್ತವನ್ನು ಯಶಸ್ವಿಯಾಗಿ ಬೆನ್ನತ್ತಿದ ಶ್ರೇಯಸ್ ಅಯ್ಯರ್ ಪಡೆ ವಿಶ್ವದಾಖಲೆ ನಿರ್ಮಿಸಿತು.

ಇಲ್ಲಿನ ಅರುಣ್ ಜೆಟ್ಲಿ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಡೆಲ್ಲಿ ಕ್ಯಾಪಿಟಲ್ಸ್‌ಗೆ ಕೆ.ಎಲ್.ರಾಹುಲ್ ಶತಕ ಹಾಗೂ ನಿತೀಶ್ ರಾಣಾ ಅರ್ಧಶತಕ ಬೃಹತ್ ಮೊತ್ತ ಪೇರಿಸಿದರು. ಕೆ.ಎಲ್.ರಾಹುಲ್ 67 ಎಸೆತಗಳಲ್ಲಿ 16 ಬೌಂಡರಿ, 9 ಸಿಕ್ಸರ್ ಸಹಿತ ಅಜೇಯ 152 ರನ್ ಗಳಿಸಿದರೆ, ನಿತೀಶ್ ರಾಣಾ 44 ಎಸೆತಗಳಲ್ಲಿ 11 ಬೌಂಡರಿ, 4 ಸಿಕ್ಸರ್ ಸಹಿತ 91 ರನ್ ಗಳಿಸಿದರು.

ಉಳಿದಂತೆ ಪಥುಮ್ ನಿಸ್ಸಂಕಾ 11(7), ಡೇವಿಡ್ ಮಿಲ್ಲರ್ ಅಜೇಯ 3(3) ರನ್ ಗಳಿಸಿದರು. ಆ ಮೂಲಕ ಡೆಲ್ಲಿ 20 ಓವರ್‌ಗಳಲ್ಲಿ 2 ವಿಕೆಟ್ ನಷ್ಟಕ್ಕೆ 264 ರನ್ ಕಲೆಹಾಕಿತು. ಪಂಜಾಬ್ ಪರ ಅರ್ಶ್‌ದೀಪ್ ಹಾಗೂ ಜೇವಿಯರ್ ಬಾರ್ಟ್ಲೆಟ್ ಒಂದೊಂದು ವಿಕೆಟ್ ಪಡೆದರು.

ಈ ಅಸಾಧಾರಣ ಮೊತ್ತವನ್ನು ಬೆನ್ನತ್ತಿದ ಪಂಜಾಬ್‌ಗೆ ಭರ್ಜರಿ ಆರಂಭ ಸಿಕ್ಕಿತು. ಪ್ರಿಯಾನ್ಶ್ ಆರ್ಯ 43(17), ಪ್ರಭ್‌ಸಿಮ್ರಾನ್ ಸಿಂಗ್ 76 (29ಎ, 9ಬೌ, 5ಸಿ) ಜೋಡಿ ಕೇವಲ 6.5 ಓವರ್‌ಗಳಲ್ಲಿ 126 ರನ್‌ಗಳ ಜೊತೆಯಾಟವಾಡುವ ಮೂಲಕ ಎಲ್ಲರ ಹುಬ್ಬೇರುವಂತೆ ಮಾಡಿದರು. ಬಳಿಕ ಬಂದ ಕೂಪರ್ ಕೊನೊಲಿ 17(10), ನೆಹಲ್ ವಧೇರಾ 25(15) ರನ್ ಗಳಿಸಿ ಔಟಾದರು.

ಇತ್ತ ನೆಲಕಂಟಿ ನಿಂತು ಮ್ಯಾಚ್ ವಿನ್ನಿಂಗ್ ಕ್ಯಾಮಿಯೋ ಆಟವಾಡಿದ ನಾಯಕ ಶ್ರೇಯಸ್ ಅಯ್ಯರ್ 36 ಎಸೆತಗಳಲ್ಲಿ 3 ಬೌಂಡರಿ, 7 ಭರ್ಜರಿ ಸಿಕ್ಸರ್ ಮೂಲಕ ಅಜೇಯ 71 ರನ್ ಗಳಿಸಿ ತಂಡಕ್ಕೆ ಗೆಲುವು ತಂದುಕೊಟ್ಟರು. ಇವರಿಗೆ ಸಾಥ್ ನೀಡಿದ ಶಶಾಂಕ್ ಸಿಂಗ್ ಅಜೇಯ 19(10) ರನ್ ಗಳಿಸಿದರು. ಇದರೊಂದಿಗೆ ಪಂಜಾಬ್ 18.5 ಓವರ್‌ಗಳಲ್ಲಿ ಕೇವಲ 4 ವಿಕೆಟ್ ಕಳೆದುಕೊಂಡು 265 ರನ್ ಕಲೆಹಾಕಿ ಐತಿಹಾಸಿಕ ಗೆಲುವು ದಾಖಲಿಸಿತು.

ಸೂರ್ಯವಂಶಿ ಶತಕ ವ್ಯರ್ಥ; ಎಸ್‌ಆರ್‌ಹೆಚ್‌ಗೆ 5 ವಿಕೆಟ್ ಗೆಲುವು

ಜೈಪುರ್, ಏ.25(ವಿವಿಹೆಚ್)– ಇಲ್ಲಿನ ಸವಾಯ್ ಮಾನ್‌ಸಿಂಗ್ ಕ್ರೀಡಾಂಗಣದಲ್ಲಿ ನಡೆದ ಐಪಿಎಲ್–2026ರ 36ನೇ ಲೀಗ್ ಪಂದ್ಯದಲ್ಲಿ ರಾಜಸ್ಥಾನ್ ರಾಯಲ್ಸ್ ತಂಡದ ವಿರುದ್ಧ ಸನ್‌ರೈಸರ್ಸ್ ಹೈದರಾಬಾದ್ ತಂಡವು 5 ವಿಕೆಟ್‌ಗಳ ಗೆಲುವು ಸಾಧಿಸಿತು.

ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ರಾಜಸ್ಥಾನ್, ವೈಭವ್ ಸೂರ್ಯವಂಶಿ (103 ರನ್, 37ಎ, 5ಬೌ, 12 ಸಿ) ಹಾಗೂ ಧ್ರುವ್ ಜುರೇಲ್ (51ರನ್, 35 ಎ, 8ಬೌ, 1 ಸಿ) ಬ್ಯಾಟಿಂಗ್ ನೆರವಿನಿಂದ ನಿಗಿದಿತ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 228 ರನ್ ಗಳಿಸಿತು.

ಎಸ್‌ಆರ್‌ಹೆಚ್ ಪರ ಇಶನ್ ಮಲಿಂಗಾ 2, ಪ್ರಫುಲ್ ಹಿಂಗೆ, ಪ್ಯಾಟ್ ಕಮಿನ್ಸ್, ಶಕಿಬ್ ಹುಸೇನ್, ನಿತೀಶ್ ಕುಮಾರ್ ರೆಡ್ಡಿ ತಲಾ ಒಂದೊಂದು ವಿಕೆಟ್ ಪಡೆದರು.

ಈ ಮೊತ್ತ ಬೆನ್ನತ್ತಿದ ಎಸ್‌ಆರ್‌ಹೆಚ್‌ಗೆ ಆರಂಭಿಕ ಆಘಾತ ಎದುರಾಯಿತು. ಟ್ರಾವಿಸ್ ಹೆಡ್ 6(5) ಬೇಗನೆ ವಿಕೆಟ್ ಒಪ್ಪಿಸಿ ಹೊರನಡೆದರು. ಅಭಿಷೇಕ್ ಶರ್ಮಾ (57ರನ್, 29ಎ, 11ಬೌ 1ಸಿ) ಹಾಗೂ ಇಶಾನ್ ಕಿಶನ್ (74ರನ್, 31ಎ 11ಬೌ 3ಸಿ) ತಂಡಕ್ಕೆ ಆಧಾರವಾದರು. ಮಧ್ಯಮ ಕ್ರಮಾಂಕದಲ್ಲಿ ಅಬ್ಬರಿಸಿದ ಹೆನ್ರಿಚ್ ಕ್ಲಾಸೆನ್ 29(24), ನಿತೀಶ್ ಕುಮಾರ್ ರೆಡ್ಡಿ 36(18) ತಂಡದ ಗೆಲುವನ್ನು ಬಹುತೇಕ ಖಚಿತಗೊಳಿಸಿದರು.

ಕೊನೆಯಲ್ಲಿ ಸಲಿಲ್ ಅರೋರ ಅಜೇಯ 8(3), ಅನಿಕೇತ್ ವರ್ಮಾ ಅಜೇಯ 1(1) ರನ್ ಗಳಿಸಿ ಗೆಲುವು ತಂದುಕೊಟ್ಟರು. ಆ ಮೂಲಕ ಎಚ್‌ಆರ್‌ಹೆಚ್ 18.3 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 229 ರನ್ ಗಳಿಸಿ ಗೆಲುವಿನ ನಗೆ ಬೀರಿತು. ಆರ್‌ಆರ್ ಪರ ಜೋಫ್ರಾ ಆರ್ಚರ್, ಬ್ರಿಜೇಶ್ ಶರ್ಮಾ ತಲಾ 2, ಫೆರಿರಾ 1 ವಿಕೆಟ್ ಪಡೆದರು.

ಮೈಸೂರಲ್ಲಿ ಹೀಟ್ ಸ್ಟ್ರೋಕ್‌ಗೆ ಶ್ವಾನ ಬಲಿ

ಸಾಮಾನ್ಯ ಕಾರಣಗಳು: ಮಧ್ಯಾಹ್ನದ ಬಿಸಿಲಿನ ಸಮಯದಲ್ಲಿ ಶ್ವಾನಗಳು ಓಡಾಡುವುದು, ನೆರಳು ಮತ್ತು ಗಾಳಿಯ ಕೊರತೆ ಉಂಟಾಗುವುದು. ನಿಲ್ಲಿಸಿದ ವಾಹನಗಳ ಒಳಗೆ ಬಿಡುವುದು ಚಪ್ಪಟೆ ಮುಖದ ತಳಿಗಳು (ಪಗ್‌ಗಳು, ಬುಲ್‌ಡಾಗ್‌ಗಳು), ಬೊಜ್ಜು ಮತ್ತು ಹಿರಿಯ ಶ್ವಾನಗಳಿಗೆ ಹೆಚ್ಚಿನ ಅಪಾಯ ತಂದೊಡ್ಡಲಿದೆ.

ಸಾಕುಪ್ರಾಣಿಗಳ ಬಗ್ಗೆ ಗಮನಿಸಬೇಕಾದ ಅಂಶಗಳು ಯಾವುದೇ ಅನಾರೋಗ್ಯ ಸಮಸ್ಯೆಯಾದರೂ ಆರಂಭಿಕ ಗುರುತಿಸುವಿಕೆಯಿಂದ ಜೀವ ಉಳಿಸಲು ಬಹುತೇಕ ಸಹಕಾರಿ. ಅತಿಯಾದ ಉಸಿರುಗಟ್ಟುವಿಕೆ, ಜೊಲ್ಲು ಸುರಿಸುವಿಕೆ, ಅತಿಯಾದ ಕೆಂಪು ಒಸಡು ಅಥವಾ ನಾಲಿಗೆ, ವಾಂತಿ ಅಥವಾ ಅತಿಸಾರ, ದೌರ್ಬಲ್ಯ, ದಿಗ್ಭ್ರಮೆ ಅಥವಾ ಕುಸಿತ, ಕ್ಷಿಪ್ರ ಹೃದಯ ಬಡಿತ, ತೀವ್ರತರವಾದ ಪ್ರಕರಣಗಳಲ್ಲಿ ರೋಗಗ್ರಸ್ತವಾಗುವಿಕೆಗಳು ಅಥವಾ ಪ್ರಜ್ಞಾಹೀನತೆಯಂತಹ ಅಂಶಗಳ ಬಗ್ಗೆ ಗಮನ ನೀಡಬೇಕು.

ಪ್ರಥಮ ಚಿಕಿತ್ಸೆ: ಶಾಖದ ಹೊಡೆತಕ್ಕೆ ತುತ್ತಾಗಿರುವ ಶಂಕೆ ಬಂದಲ್ಲಿ ಶ್ವಾನವನ್ನು ನೆರಳಿನ ಮತ್ತು ತಂಪಾದ ಪ್ರದೇಶಕ್ಕೆ ತಕ್ಷಣ ಸ್ಥಳಾಂತರಿಸಬೇಕು. ದೇಹದ ಮೇಲೆ ತಂಪಾದ (ಐಸ್ ಅಲ್ಲ) ನೀರನ್ನು ಸುರಿಯಬೇಕು. ಕುತ್ತಿಗೆ, ಹೊಟ್ಟೆ ಮತ್ತು ಪಂಜಗಳ ಮೇಲೆ ಒದ್ದೆಯಾದ ಟವೆಲ್‌ಗಳನ್ನು ಇರಿಸಬೇಕು. ಫ್ಯಾನ್ ಬಳಸಿ ಅಥವಾ ಉತ್ತಮ ಗಾಳಿಯನ್ನು ಖಚಿತಪಡಿಸಿಕೊಳ್ಳಬೇಕು. ಸ್ವಲ್ಪ ಪ್ರಮಾಣದ ನೀರನ್ನು ನೀಡಿ (ಬಲವಂತವಾಗಿಯಲ್ಲ). ತಡಮಾಡದೆ ಹತ್ತಿರದ ಪಶುವೈದ್ಯಕೀಯ ಆಸ್ಪತ್ರೆಗೆ ಕರೆದೊಯ್ಯಬೇಕು. ಯಾವುದೇ ಕಾರಣಕ್ಕೂ ಐಸ್ ಅಥವಾ ತಣ್ಣನೆಯ ನೀರನ್ನು ಬಳಸಬೇಡಿ, ಏಕೆಂದರೆ ಇದು ಸ್ಥಿತಿಯನ್ನು ಇನ್ನಷ್ಟು ಹದಗೆಡಿಸಬಹುದು.

ಬೆಳಗ್ಗೆ ಅಥವಾ ಸಂಜೆ ತಡವಾಗಿ ಶ್ವಾನಗಳನ್ನು ವಾಕ್‌ಗೆ ಕರೆದುಕೊಂಡು ಹೋಗುವುದು ಸೂಕ್ತವಾಗುತ್ತದೆ. ಅವುಗಳ ವಿಶ್ರಾಂತಿಗೆ ನೆರಳಿನ ಜಾಗವನ್ನು ಕಲ್ಪಿಸಬೇಕು. ತುರ್ತು ಪರಿಸ್ಥಿತಿಯಲ್ಲಿ ಶ್ರೀ ಪೆಟ್ ಆಸ್ಪತ್ರೆ 24/7 ಆಂಬ್ಯುಲೆನ್ಸ್ ಸೇವೆಯನ್ನು ಪಡೆದುಕೊಳ್ಳಬಹುದು (ಮೊ.ಸಂ. 63628 55844) ಎಂದು ಪ್ರಕಟಣೆ ತಿಳಿಸಿದೆ.

ಸಹಕಾರ ಸಭೆಯಲ್ಲಿ ಭಾಗಿ



ಬೆಂಗಳೂರಿನಲ್ಲಿನ ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದಲ್ಲಿ ನಡೆದ ರಾಜ್ಯಮಟ್ಟದ ವಿಚಾರ ಸಂಕಿರಣದಲ್ಲಿ ಮೈಸೂರಿನ ದಿ ಮೈಸೂರು ಕೋಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಜೆ.ಯೋಗೇಶ್, ನಿರ್ದೇಶಕರಾದ ಎನ್.ಯೋಗಾನಂದ್, ಆರ್.ಸೋಮಣ್ಣ, ಪಡುವಾರಹಳ್ಳಿ ಎಂ.ರಾಮಕೃಷ್ಣ, ಕಾರ್ಯದರ್ಶಿ ಕೆ.ಹರ್ಷಿತ್ ಗೌಡ, ಮಹಾಮಂಡಳದ ನಿರ್ದೇಶಕ ಕೋದಂಡರಾಮಣ್ಣ ಪಾಲ್ಗೊಂಡಿದ್ದರು.

ಸ್ಮಾರಕಕ್ಕೆ ಜಾಗ ನೀಡಿದ್ದನ್ನು ಪ್ರಶ್ನಿಸಿ ವಿವಾದ ಮೈಮೇಲೆಳೆದುಕೊಂಡ ನಟ ಚೇತನ್

ರಾಜ್‌ಕುಮಾರ್ ಅಭಿಮಾನಿಗಳಿಂದ ಚೇತನ್ ಮನೆಗೆ ಮುತ್ತಿಗೆ; ಆಕ್ರೋಶ

ಕ್ಷಮೆಯಾಚಿಸಿ ಸ್ಪಷ್ಟನೆ ನೀಡಿದ ಚೇತನ್: ಕ್ಷಮೆಗೂ ಅರ್ಹನಲ್ಲ ಎಂದು ಸಾರಾ ಗೋವಿಂದ್ ಕಿಡಿ



ಬೆಂಗಳೂರು: ವರನಟ ಡಾ.ರಾಜ್‌ಕುಮಾರ್ ಅವರ ಸ್ಮಾರಕ ಜಾಗದ ವಿಚಾರವಾಗಿ ಆಕ್ಷೇಪ ವ್ಯಕ್ತಪಡಿಸಿದ ನಟ ಚೇತನ್ ಅಹಿಂಸಾ ಕನ್ನಡಿಗರ ಆಕ್ರೋಶಕ್ಕೆ ತುತ್ತಾಗಿದ್ದು, ಅವರ ಬೆಂಗಳೂರು ನಿವಾಸದ ಮುಂದೆ ಹೈಡ್ರಾಮಾವೇ ನಡೆದಿದೆ.

ನಾವು ರಾಜ್‌ಕುಮಾರ್ ಅವರನ್ನು ಒಬ್ಬ ಶ್ರೇಷ್ಠ ಕಲಾವಿದ ಎಂದು ಗೌರವಿಸುತ್ತೇವೆ. ಆದರೆ, 2006ರಲ್ಲಿ ಬೆಂಗಳೂರಿನ ಕೇಂದ್ರ ಭಾಗದಲ್ಲಿ ಈ ನಟನ ಸ್ಮಾರಕ ಸಂಕೀರ್ಣ ಕ್ಕಾಗಿ 2.5 ಎಕರೆ ಭೂಮಿಯನ್ನು ನೀಡಿದ್ದು ತಿಳುವಳಿಕೆಯ ನಿರ್ಧಾರವಾಗಿತ್ತೇ ಎಂಬುದನ್ನು ಪ್ರಶ್ನಿಸಬೇಕು. 21ನೇ ಶತಮಾನದ ಭಾರತದಲ್ಲಿ ಪ್ರಮುಖ ಹೋರಾಟವೇ ಭೂಮಿ. ಇದನ್ನು ಸರ್ಕಾರವು ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡು ಹಾಗೂ ಸಾರ್ವಜನಿಕ ಉಪಯೋಗಕ್ಕೆ ತಕ್ಕಂತೆ ಹಂಚಬೇಕು; ಮತಗಳ ಲಾಭದ ಅವಕಾಶವಾದಿ ಉದ್ದೇಶದಿಂದ ಅಲ್ಲ' ಎಂದು ಟ್ವೀಟ್ ಮಾಡಿ ಚೇತನ್ ಆಕ್ರೋಶಕ್ಕೆ ಗುರಿಯಾಗಿದ್ದಾರೆ.

ಈ ಹಿಂದೆ ಸಾಕಷ್ಟು ವಿಚಾರಗಳಲ್ಲಿ ವಿವಾದಾತ್ಮಕ ಹೇಳಿಕೆಗಳನ್ನು ನೀಡಿ ಸುದ್ದಿಯಾಗುತ್ತಿದ್ದ ನಟ ಚೇತನ್ ಅಹಿಂಸಾ, ಇದೀಗ ಡಾ.ರಾಜ್ ಕುಮಾರ್ ಅವರ ಕುರಿತು ಹೇಳಿಕೆ ನೀಡಿರುವುದರಿಂದ ಸಿಟ್ಟಿಗೆದ್ದಿರುವ ಕನ್ನಡಪರ ಸಂಘಟನೆಗಳು ಮತ್ತು ಡಾ.ರಾಜ್ ಅಭಿಮಾನಿಗಳ ಸಂಘದ ಸದಸ್ಯರು ಚೇತನ್ ಮನೆಗೆ ಮುತ್ತಿಗೆ ಹಾಕಿ, ಘೋಷಣೆ ಕೂಗಿದ್ದಾರೆ.

ಸರಿಯಾದ ಪಾಠ ಕಲಿಸುತ್ತೇವೆ: ಡಾ.ರಾಜ್‌ಕುಮಾರ್ ಸಂಘದ ಅಧ್ಯಕ್ಷರಾಗಿದ್ದ ನಿರ್ಮಾಪಕ ಸಾರಾ ಗೋವಿಂದು, ಚೇತನ್ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದಾರೆ.

ಆತನಿಗೆ ಒದೆ ಬೀಳುವುದು ಖಂಡಿತ. ಕ್ಷಮೆ ಕೇಳುವುದಕ್ಕೂ ಸಹ ಅವನಿಗೆ ಯೋಗ್ಯತೆ ಇಲ್ಲ. ಕರ್ನಾಟಕಕ್ಕೆ ಅವನ ಕೊಡುಗೆ ಏನು? ಎಷ್ಟು ಸಿನಿಮಾ ಮಾಡಿದ್ದಾನೆ ಅವನು? ತಿರ್ಕೊಂಡು ತಿಂತಿದ್ದಾನೆ ಹಾದಿ ಬೀದಿಯಲ್ಲಿ ಬೇಡಿಕೊಂಡು ತಿನ್ನುತ್ತಿರುವ ನೀನು ಮೇರು ನಟರ ಬಗ್ಗೆ ಮಾತನಾಡುತ್ತೀಯಾ. ಕೈಯಲ್ಲಿ ಮಾಡೋಕೆ ಕೆಲಸ ಇಲ್ಲ, ಮೊದಲು ಕೆಲಸ ಹುಡುಕಿಕೊ. ನಾವು ಸರ್ಕಾರದ ಮೇಲೆ ಒತ್ತಡ ಹಾಕುತ್ತೀವಿ, ಆತನನ್ನು ಈ ಕೂಡಲೇ ರಾಜ್ಯದಿಂದ ಹೊರಗೆ ಹಾಕಬೇಕು. ಅಣ್ಣಾವ್ರ ಸ್ಮಾರಕದ ಜಾಗ ನಮಗೆಲ್ಲ ದೇವಸ್ಥಾನ. ಸ್ಮಾರಕವನ್ನು ಕಾಂಪ್ಲೆಕ್ಸ್ ಅಂತಿಯಲ್ಲ, ಅಲ್ಲಿ ಯಾವ ಕಮರ್ಷಿಯಲ್ ಚಟುವಟಿಕೆ ನಡೆಯುತ್ತಿದೆ? ಸರ್ಕಾರ ಕೂಡಲೆ ಈ ವಿಚಾರದಲ್ಲಿ ಮಧ್ಯ ಪ್ರವೇಶ ಮಾಡಬೇಕು. ಚೇತನ್‌ಗೆ ಅಣ್ಣಾವ್ರ ಅಭಿಮಾನಿಗಳು ಸರಿಯಾದ ಪಾಠ ಕಲಿಸ್ತೀವಿ ಎಂದು ಎಚ್ಚರಿಸಿದ್ದಾರೆ.

ಪೊಲೀಸ್‌ಗೆ ದೂರು: ರಾಜ್‌ಕುಮಾರ್ ಅವರ ಸ್ಮಾರಕದ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿದ್ದಾರೆ ಎಂದು ಆರೋಪಿಸಿ, ಬೆಂಗಳೂರಿನ ಬಸವೇಶ್ವರನಗರ ಪೊಲೀಸ್ ಠಾಣೆಯಲ್ಲಿ ಚೇತನ್ ವಿರುದ್ಧ ರಾಜ್‌ಕುಮಾರ್ ಅಭಿಮಾನಿಗಳು ದೂರು ದಾಖಲಿಸಿದ್ದಾರೆ. ಅಣ್ಣಾವ್ರು ಕನ್ನಡ ಭಾಷೆ, ಕಲೆ ಮತ್ತು ನಾಡಿಗೆ ನೀಡಿದ ಕೊಡುಗೆಯನ್ನು ಅರಿಯದೆ ಚೇತನ್ ಇಂತಹ ಹೇಳಿಕೆ ನೀಡುತ್ತಿದ್ದಾರೆ ಎಂದು ಕಿಡಿಕಾರಿದ್ದಾರೆ.

ಚೇತನ್ ಕ್ಷಮೆಯಾಚನೆ: ಅಣ್ಣಾವ್ರ ಅಭಿಮಾನಿಗಳು ನಟ ಚೇತನ್ ಮನೆಗೆ ಮುತ್ತಿಗೆ ಹಾಕಿ ಘೋಷಣೆ ಕೂಗುತ್ತಲೇ ಪೊಲೀಸರ ಸಮ್ಮುಖದಲ್ಲಿ ಹೊರಗೆ ಬಂದ ನಟ ಚೇತನ್ ಹೋರಾಟಗಾರರ ಕ್ಷಮೆಯಾಚಿಸಿದ್ದಾರೆ. ನನ್ನ ಮಾತುಗಳಿಂದ ಕನ್ನಡಿಗರ ಮತ್ತು ಡಾ.ರಾಜ್‌ಕುಮಾರ್ ಅಭಿಮಾನಿಗಳಿಗೆ ನೋವಾಗಿದ್ದರೆ ಕ್ಷಮೆ ಕೇಳುತ್ತೇನೆ. ಯಾರಿಗೂ ನೋವುಂಟು ಮಾಡುವ ಉದ್ದೇಶ ನನಗಿರಲಿಲ್ಲ. ನಾನೂ ಕೂಡ ಡಾ.ರಾಜ್‌ಕುಮಾರ್ ಅವರ ಅಭಿಮಾನಿ. ಆದರೆ ಸಮಾಜದಲ್ಲಿ ಜಾಗೃತಿಯಾಗಬೇಕು. ಒಂದು ಉತ್ತಮ ಪ್ರಜಾಪ್ರಭುತ್ವ ಕಟ್ಟಬೇಕು. ರಾಜ್‌ಕುಮಾರ್ ಅವರು ಕಂಡ ಕನಸಿನ ಚಿತ್ರರಂಗವನ್ನು ನಾವೂ ಕೂಡ ಕಟ್ಟಬೇಕು. ಅದು ನನ್ನ ಉದ್ದೇಶವಾಗಿತ್ತು ಎಂದು ಸ್ಪಷ್ಟನೆ ನೀಡಿದ್ದಾರೆ.

ಜೈಲಲ್ಲಿ ಒಂದೆಡೆ 'ಸಿಗ್ನಲ್' ಸಿಕ್ತಿದೆ! 'ಧಂ'ಗೆ ಗಾಂಜಾ ಮಾದರಿ ಟೀ ಸೊಪ್ಪು ಬಳಕೆ!!

ಬಂಧಿಖಾನೆ ಡಿಜಿಪಿ ಅಲೋಕ್ ಕುಮಾರ್ ದಿಢೀರ್ ಭೇಟಿ ವೇಳೆ ಮೈಸೂರು ಜೈಲಲ್ಲಿ ಕಂಡು ಬಂದ ಅಚ್ಚರಿ ಸಂಗತಿ



ಮೈಸೂರು, ಏ.25(ಎಂಟಿವೈ)–ಬಂಧಿಖಾನೆ ಪೊಲೀಸ್ ಮಹಾನಿರ್ದೇಶಕ ಅಲೋಕ್‌ಕುಮಾರ್ ಮೈಸೂರಿನ ಕೇಂದ್ರ ಕಾರಾಗೃಹಕ್ಕೆ ಶುಕ್ರವಾರ ರಾತ್ರಿ ದಿಢೀರ್ ಭೇಟಿ ನೀಡಿ ಪರಿಶೀಲಿಸಿದರು. ಸಂದರ್ಶಕರ ಕೂಲಂಕುಶವಾಗಿ ಪರಿಶೀಲಿಸಿ, ಅಕ್ರಮವಾಗಿ ಯಾವುದೇ ವಸ್ತುಗಳನ್ನು ಒಳ ಸಾಗಿಸದಂತೆ ಕಟ್ಟೆಚರ ವಹಿಸುವಂತೆ ಸೂಚಿಸಿದ್ದಾರೆ.

ಕಾರಾಗೃಹಗಳಲ್ಲಿ ಅಕ್ರಮ ಚಟುವಟಿಕೆಗಳಿಗೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಹಲವು ಕಠಿಣ ಕ್ರಮ ಕೈಗೊಂಡಿರುವ ಡಿಜಿಪಿ ಅಲೋಕ್ ಕುಮಾರ್, ಗಾಂಜಾ, ಮಾದಕ ವಸ್ತುಗಳಿಗೆ ಬ್ರೇಕ್ ಹಾಕಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದ್ದಾರೆ. ಖುದ್ದು, ಕಾರಾಗೃಹದಲ್ಲಿನ ಪರಿಸ್ಥಿತಿ ಅರಿಯಲು ಕಳೆದ ರಾತ್ರಿ 7.15ಕ್ಕೆ ಮೈಸೂರು ಕೇಂದ್ರ ಕಾರಾಗೃಹಕ್ಕೆ ದಿಢೀರ್ ಭೇಟಿ ನೀಡಿ, ರಾತ್ರಿ 9.15ರವರೆಗೂ ಪರಿಶೀಲನೆ ನಡೆಸಿದರು. ಕಾರಾಗೃಹದ ಸಜಾ ವಿಭಾಗ, ವಿಚಾರಣಾ ವಿಭಾಗ, ಆಸ್ಪತ್ರೆ, ಭದ್ರತಾ ವಿಭಾಗ, ಪಾಕಶಾಲೆ, ಉದ್ಯಮ ವಿಭಾಗ ಸೇರಿದಂತೆ ವಿವಿಧ ವಿಭಾಗಗಳಲ್ಲಿ ಪರಿಶೀಲನೆ ನಡೆಸಿ, ಖೈದಿಗಳಿಗೆ ನಿಯಮ ಉಲ್ಲಂಘಿಸದಂತೆ ಎಚ್ಚರಿಕೆ ನೀಡಿದರು.

ಆಕ್ಷೇಪಾರ್ಹ ವಸ್ತು ಪತ್ತೆ: ಪರಿಶೀಲನೆ ವೇಳೆ ಸೆಲ್ ನಂ.12ರ ಬಾತ್ ರೂಮ್ ಹಲಗೆ ಪಟ್ಟಿಯ ಮೇಲೆ ಮಣ್ಣಿನ ಕೊಳವೆ ಪತ್ತೆಯಾಗಿದೆ. ಸೆಲ್ ನಂ.21ರಲ್ಲಿ ವಿಚಾರಣಾಧೀನ ಖೈದಿ ವಿಜಯ್ ಅಲಿಯಾಸ್ ಸೊಪ್ಪು ಬ್ಯಾಗ್‌ನಲ್ಲಿ 30 ಗ್ರಾಂ ಒಣ ಎಲೆಗಳ ಪುಡಿ, ಅರ್ಧ ತುಂಡಾದ ಒಂದು ಸ್ಟೀಲ್ ಚಮಚ, ಒಂದು ಮಣ್ಣಿನ ಕೊಳವೆ ಪತ್ತೆಯಾಗಿದೆ. ಅದೇ ಸೆಲ್‌ನ ಬಾತ್ ರೂಮ್ ಬಳಿ ಉಜ್ಜಿ ಮೊನಚು ಮಾಡಿದ ಸ್ಥಿತಿಯಲ್ಲಿದ್ದ ಒಂದು ಸ್ಟೀಲ್ ಚಮಚ ಪತ್ತೆಯಾಗಿದೆ. ಈ ಎಲ್ಲವನ್ನು ಪರಿಶೀಲಿಸಿದ ಡಿಜಿಪಿ ಅಲೋಕ್ ಕುಮಾರ್ ಅವರು ದೂರು ದಾಖಲಿಸುವಂತೆ ಸೂಚನೆ ನೀಡಿದರು.

ಕಟ್ಟೆಚ್ಚರಕ್ಕೆ ಕ್ರಮ: ಮೈಸೂರು ಕಾರಾಗೃಹದಲ್ಲಿ ಅಳವಡಿಸಿರುವ 58 ಸಿಸಿ ಕ್ಯಾಮರಾಗಳನ್ನು ಎಐ ಕ್ಯಾಮರಾಗಳಾಗಿ ಶೀಘ್ರವೇ ಪರಿವರ್ತಿಸಬೇಕು. ಇದು ಅಹಿತಕರ ಘಟನೆ ಅಥವಾ ಅಕ್ರಮ ವಸ್ತುಗಳ ಸಾಗಾಣಿಕೆ ಪತ್ತೆಗೆ ಸಹಕಾರಿಯಾಗುತ್ತದೆ ಎಂದು ಸಲಹೆ ನೀಡಿದರು.

ಜಾಮರ್: ಕಾರಾಗೃಹದಲ್ಲಿ ನಾಲ್ಕು ಜಾಮರ್‌ಗಳಿದ್ದರೂ ಕೆಲವೆಡೆ ಸಿಗ್ನಲ್ ಸಿಗುತ್ತಿರುವ ಬಗ್ಗೆ ಪ್ರಶ್ನಿಸಿದರು. ಈ ವೇಳೆ ಕಾರಾಗೃಹದ ಮುಖ್ಯ ಅಧೀಕ್ಷಕ ವಿ.ಶೇಷುಮೂರ್ತಿ, ಕಾರಾಗೃಹದ ಆವರಣದಲ್ಲಿ ಹೊಸದಾಗಿ ಕಟ್ಟಿರುವ ಕಲ್ ಬಿಲ್ಡಿಂಗ್ ಬಳಿ ನೆಟ್‌ವರ್ಕ್ ಸಿಗುತ್ತಿದೆ. ಜಾಮರ್ ಕಂಪನಿಯವರನ್ನು ಕರೆತಂದು ಪರಿಶೀಲಿಸಲಾಗಿದೆ. ಇನ್ನು ಎರಡು ಜಾಮರ್ ಅಳವಡಿಸುವಂತೆ ಕಂಪನಿಯವರು ತಿಳಿಸಿದ್ದಾರೆ ಎಂದು ಮಾಹಿತಿ ನೀಡಿದರು. ಇದಕ್ಕೆ ಶೀಘ್ರ ಕ್ರಮಕ್ಕೆ ಡಿಜಿಪಿ ಸೂಚಿಸಿದರು.

ಕಾರಾಗೃಹದ ಒಳಗೆ ನಿಷೇಧಿತ ಯಾವುದೇ ವಸ್ತುಗಳು ಬರದಂತೆ ಎಚ್ಚರಿಕೆ ವಹಿಸಬೇಕು. ಸಂದರ್ಶಕರು ತರುವ ವಸ್ತುಗಳನ್ನು ಕೂಲಂಕುಷವಾಗಿ ತಪಾಸಣೆ ಮಾಡಬೇಕು. ಅಲ್ಲದೆ, ಆಗಾಗ ಕಾರಾಗೃಹದ ಎಲ್ಲಾ ಸೆಲ್‌ಗಳಲ್ಲೂ ತಪಾಸಣೆ ನಡೆಸುವಂತೆ ಆದೇಶಿಸಿದರು.

ಈ ಸಂದರ್ಭದಲ್ಲಿ ಡಿಸಿಪಿ ಡಾ.ಹರ್ಷ ಪ್ರಿಯಂವದ, ಎನ್‌ಆರ್ ಎಸಿಪಿ ಮ್ಯಾಥ್ಯೂ ಥಾಮಸ್, ಸಿಸಿಬಿ ಎಸಿಪಿ ಷರೀಫ್ ರಾವುತರ್, ಮಂಡಿ ಇನ್ಸ್‌ಪೆಕ್ಟರ್ ದಿವಾಕರ್, ಒಂದು ಶ್ವಾನದಳ, ಒಂದು ಮೆಟಲ್ ಡಿಟೆಕ್ಟಿವ್ ತಂಡ, ಪ್ಯಾಂಥರ್ಸ್ ಪಡೆಯ 55 ಸಿಬ್ಬಂದಿ ಸೇರಿದಂತೆ ತಪಾಸಣಾ ಕಾರ್ಯಾಚರಣೆಯಲ್ಲಿ 65 ಮಂದಿ ಸಿಬ್ಬಂದಿ ಪಾಲ್ಗೊಂಡಿದ್ದರು.

ಗಾಂಜಾ ಬದಲಿಗೆ ಟೀ ಸೊಪ್ಪಿನ ಹೊಗೆ

ಗಾಂಜಾ ಹಾಗೂ ಮಾದಕ ವಸ್ತು ಸೇವನೆಗೆ ದಾಸರಾಗಿರುವವರು ಇದೀಗ ಪರ್ಯಾಯ ಮಾರ್ಗ ಕಂಡುಕೊಂಡಂತೆ ಭಾಸವಾಗುತ್ತಿದೆ. ಖೈದಿಯೊಬ್ಬನ ಬಳಿ ಕ್ಯಾಂಟೀನ್‌ನಲ್ಲಿ ಬಳಸಿ, ಬೀಸಾಡಿದ ಟೀ ಸೊಪ್ಪು ಸಿಕ್ಕಿದೆ. ಇದನ್ನು ಒಣಗಿಸಿ, ಮರದ ಒಣ ಎಲೆಗಳ ಪುಡಿಯೊಂದಿಗೆ ಮಿಶ್ರಣ ಮಾಡಿ, ಮಣ್ಣಿನ ಕೊಳವೆಯಲ್ಲಿ ಗಾಂಜಾ ಮಾದರಿ ಸೇವಿಸುತ್ತಿರುವ ಶಂಕೆ ವ್ಯಕ್ತವಾಗಿದೆ. ಹೀಗೆ ವಶಕ್ಕೆ ಪಡೆದ ಪುಡಿಯನ್ನು ಎಫ್‌ಎಸ್‌ಎಲ್‌ಗೆ ರವಾನಿಸಲಾಗಿದೆ.

ಕಟ್ಟುನಿಟ್ಟಿನ ತಪಾಸಣೆಗೆ ಸೂಚಿಸಿದ್ದೇನೆ

ಮೈಸೂರು ಕೇಂದ್ರ ಕಾರಾಗೃಹಕ್ಕೆ ಕಳೆದ ರಾತ್ರಿ ಅನಿರೀಕ್ಷಿತ ಭೇಟಿ ನೀಡಿ ತಪಾಸಣೆ ನಡೆಸಲಾಗಿದೆ. ಈ ವೇಳೆ ದೊಡ್ಡ ಪ್ರಮಾಣದ ಯಾವುದೇ ವಸ್ತುಗಳು ಸಿಕ್ಕಿಲ್ಲ. ಮೊನಚು ಮಾಡಿದ ಸ್ಟೀಲ್ ಚಮಚ, ಒಣ ಎಲೆಯ ಪುಡಿ, ಮಣ್ಣಿನ ಕೊಳವೆಯಷ್ಟೇ ಸಿಕ್ಕಿದೆ. ಆಗಾಗ ತಪಾಸಣೆ ನಡೆಸುವಂತೆ, ಅಕ್ರಮವಾಗಿ ಯಾವುದೇ ವಸ್ತುಗಳ ಸಾಗಾಟಕ್ಕೆ ಕಡಿವಾಣ ಹಾಕುವಂತೆ ಸೂಚನೆ ನೀಡಲಾಗಿದೆ. ಜೊತೆಗೆ ಭದ್ರತೆ ಇನ್ನಷ್ಟು ಬಿಗಿಗೊಳಿಸುವಂತೆ ಸೂಚಿಸಲಾಗಿದೆ.

– ಅಲೋಕ್ ಕುಮಾರ್, ಪೊಲೀಸ್ ಮಹಾನಿರ್ದೇಶಕರು, ಬಂಧಿಖಾನೆ

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಪಳ್ಳಿಚಟ್ಟಂಬಿ (ಕ) + ಪಳ್ಳಿಚಟ್ಟಂಬಿ (ತ)	2+2 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ರೆಬೆಲ್ (ತೆ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಡಕಾಯಿಟ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಕೋಟಿಗೊಬ್ಬ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕೋಟಿಗೊಬ್ಬ (ಕ)	4 ಪ್ರದರ್ಶನಗಳು
ರಾಜಕಮಲ್	
ಲವ್ ಇನ್ಶೂರೆನ್ಸ್ ಕಂಪನಿ (ತೆ)	4 ಪ್ರದರ್ಶನಗಳು
ಸಂಗಂ	
ಕೋಟಿಗೊಬ್ಬ (ಕ)	4 ಪ್ರದರ್ಶನಗಳು
ಲಿಡೋ	
ಮಾಣಿಕ್ಯ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಪುನೀತ್ ನಿವಾಸ (ಕ)	4 ಪ್ರದರ್ಶನಗಳು

ಏ.29 ರಂದು ವರಕೋಡು ಶ್ರೀ ಬೀರೇಶ್ವರಸ್ವಾಮಿ ದೇವಸ್ಥಾನದಲ್ಲಿ ಮಂಡಲಪೂಜೆ, ಮಹಾದ್ವಾರ ಪ್ರತಿಷ್ಠಾಪನಾ ಮಹೋತ್ಸವ



ಮೈಸೂರು,ಏ.25–ತಾಲೂಕಿನ ವರುಣಾ ಹೋಬಳಿಯ ವರಕೋಡು ಗ್ರಾಮದ ಶ್ರೀ ಬೀರೇಶ್ವರಸ್ವಾಮಿ ದೇವಾಲಯದಲ್ಲಿ ಏ.29 ರಂದು 48ನೇ ದಿನದ ಮಂಡಲಪೂಜೆ ಹಾಗೂ ಮಹಾದ್ವಾರ ಪ್ರತಿಷ್ಠಾಪನಾ ಮಹೋತ್ಸವವನ್ನು ಹಮ್ಮಿಕೊಳ್ಳಲಾಗಿದೆ.

ಏ.29 ರಂದು ಬೆಳಗ್ಗೆ 6.10 ರಿಂದ ಮಂಡಲಪೂಜೆ ಹಾಗೂ ಹೋಮ ನಡೆಯಲಿದೆ. ಬೆಳಗ್ಗೆ 7 ಗಂಟೆಗೆ ಪೂರ್ಣಕುಂಭ ಮೆರವಣಿಗೆಯು ವರಕೋಡು ಕಲ್ಯಾಣಿಯಿಂದ ಹೊರಟು ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಾಗಿ ನೂತನ ಶ್ರೀ ಬೀರೇಶ್ವರಸ್ವಾಮಿ ದೇಗುಲ ತಲುಪಲಿದೆ.

ಮೆರವಣಿಗೆಯಲ್ಲಿ ನಂದಿಧ್ವಜ, ಪೂಜಾ ಕುಣಿತ, ಬಸವ ಸತ್ತಿಗೆ, ಸೂರಿಪಾನಿ, ವೀರಮಕ್ಕಳ ಕುಣಿತ, ವೀರಗಾಸೆ ಕುಣಿತ, ಮಲೆಮಹದೇಶ್ವರರ ಬೀಸು ಕಂಸಾಳೆ, ವಾದ್ಯಮೇಳ, ತಮಟೆ ವಾದ್ಯ ಸೇರಿದಂತೆ ವಿವಿಧ ಜಾನಪದ ಕಲಾತಂಡಗಳು ಸಾಗಲಿವೆ.


ಬೆಳಗ್ಗೆ 8 ರಿಂದ ಪ್ರಸಾದ ವಿನಿಯೋಗ ಹಾಗೂ ಅನ್ನ ಸಂತರ್ಪಣೆ ಕಾರ್ಯಕ್ರಮ ನಡೆಯಲಿದೆ. ರಾತ್ರಿ 8.30ಕ್ಕೆ ಶ್ರೀ ಬೀರೇಶ್ವರ ಕಲಾ ತಂಡದಿಂದ ಕುರುಕ್ಷೇತ್ರ ಅಥವಾ ಧರ್ಮರಾಜ್ಯ ಸ್ಥಾಪನೆ ಎಂಬ ಪೌರಾಣಿಕ ನಾಟಕ ಏರ್ಪಡಿಸಲಾಗಿದೆ. ಅಂದು ಡಾ.ಮಧುಸೂಧನ್ ಮತ್ತು ತಂಡದಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಯಲಿದೆ.

ಕಾರ್ಯಕ್ರಮದಲ್ಲಿ ಕಾಗಿನೆಲೆ ಮಹಾಸಂಸ್ಥಾನ ಮಠದ ಶ್ರೀ ನಿರಂಜನಾನಂದಪುರಿ ಮಹಾಸ್ವಾಮೀಜಿ, ಕೆ.ಆರ್.ನಗರ ಕಾಗಿನೆಲೆ ಮಹಾಸಂಸ್ಥಾನ ಮಠದ ಶ್ರೀ ಶಿವಾನಂದಪುರಿ ಸ್ವಾಮೀಜಿ, ವರಕೋಡು ಗಡಿ ಗುರುಮಠದ ಗುರುಗಳಾದ ಗುರುಸ್ವಾಮಿ, ಗುರುದೇವು ಹಾಗೂ ವರಕೋಡು ಗಡಿಯ ಗುಡ್ಡಪ್ಪಂದಿರು, ಸಿದ್ಧಾರೂಢ ಮಠದ ಭಕ್ತಮಂಡಳಿ ದಿವ್ಯಸಾನಿಧ್ಯ ವಹಿಸಲಿದ್ದಾರೆ.

ದೇವಸ್ಥಾನದ ಮಹಾದ್ವಾರ ಉದ್ಘಾಟನಾ ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ನೆರವೇರಿಸಲಿದ್ದು, ಈ ವೇಳೆ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಿಧಾನಪರಿಷತ್ ಸದಸ್ಯರು, ವರುಣ ಕ್ಷೇತ್ರದ ಆಶ್ರಯ ಸಮಿತಿ ಅಧ್ಯಕ್ಷರಾದ ಡಾ. ಯತೀಂದ್ರ ಸಿದ್ದರಾಮಯ್ಯ ವಹಿಸಲಿದ್ದಾರೆ.

ಕಾರ್ಯಕ್ರಮದಲ್ಲಿ ಶ್ರೀ ಬೀರೇಶ್ವರಸ್ವಾಮಿ ದೇವರ ಗಡಿ ಗ್ರಾಮದ ಯಜಮಾನರು, ಬೀರೇಶ್ವರ ದೇವಸ್ಥಾನದ ಒಕ್ಕಲುದಾರರು ಹಾಗೂ ದುದ್ದಗೆರೆ, ಬಿದರಹಳ್ಳಿಹುಂಡಿ, ವರಕೋಡು, ಬಡಗಲಹುಂಡಿ, ಮೂಡಲಹುಂಡಿ, ಕೆಂಪೇಗೌಡನಹುಂಡಿ, ಹೊಸಹುಂಡಿ, ಬೊಂತಗಳ್ಳಿ ಗಡಿಯ ಗ್ರಾಮದ ಯಜಮಾನರು, ಗ್ರಾಮಸ್ಥರು ಭಾಗಿಯಾಗಲಿದ್ದಾರೆ.

ಸಶಸ್ತ್ರ ಮೀಸಲು ಪಡೆ ಪೊಲೀಸರಿಗೆ ಯೋಗ ಶಿಬಿರ



ಮೈಸೂರಿನ ಜ್ಯೋತಿನಗರದಲ್ಲಿರುವ ಜಿಲ್ಲಾ ಸಶಸ್ತ್ರ ಮೀಸಲು ಪಡೆಯ ಕವಾಯತು ಮೈದಾನದಲ್ಲಿ ಸಶಸ್ತ್ರ ಮೀಸಲು ಪಡೆಯ ಸಿಬ್ಬಂದಿಗೆ ಯೋಗ ಶಿಬಿರ ಆಯೋಜಿಸಲಾಗಿತ್ತು.

ಮೈಸೂರು, ಏ.25(ಎಂಟಿವೈ)– ಒತ್ತಡ ನಿವಾರಣೆಗಾಗಿ ಮೈಸೂರು ಜಿಲ್ಲಾ ಸಶಸ್ತ್ರ ಮೀಸಲು ಪಡೆಯ ಪೊಲೀಸರಿಗೆ ಆಯೋಜಿಸಿದ್ದ ಯೋಗ ಶಿಬಿರದಲ್ಲಿ 200ಕ್ಕೂ ಹೆಚ್ಚು ಸಿಬ್ಬಂದಿ ಪಾಲ್ಗೊಂಡು, ವಿವಿಧ ಆಸನ ಅಭ್ಯಾಸ ಮಾಡಿದರು.

ಮೈಸೂರಿನ ಜ್ಯೋತಿನಗರದಲ್ಲಿರುವ ಜಿಲ್ಲಾ ಸಶಸ್ತ್ರ ಮೀಸಲು ಪಡೆಯ ಕವಾಯತು ಮೈದಾನದಲ್ಲಿ ಶನಿವಾರ ಬೆಳಗ್ಗೆ ಆಯೋಜಿಸಿದ್ದ ಈ ಶಿಬಿರದಲ್ಲಿ ಯೋಗ ಶಿಕ್ಷಕ ಪಶುಪತಿ, ಜಿಲ್ಲಾ ಸಶಸ್ತ್ರ ಮೀಸಲು ಪಡೆಯ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಒತ್ತಡ ನಿವಾರಣೆ ಹಾಗೂ ದೈಹಿಕ ಮತ್ತು ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಲು ಕೆಲ ಆಸನ ಮಾಡಬೇಕೆಂದು ವಿವರಣೆ ನೀಡಿ, ಪ್ರತಿದಿನ ಯೋಗಾಭ್ಯಾಸ ಮಾಡುವುದರಿಂದ ಆಗುವ ಉಪಯೋಗಗಳ ಬಗ್ಗೆ ಮಾಹಿತಿ ನೀಡಿದರು. ಬಳಿಕ ವಿವಿಧ ಆಸನಗಳನ್ನು ಹೇಳಿಕೊಟ್ಟರು.

ಅಪರ ಪೊಲೀಸ್ ಅಧೀಕ್ಷಕ (ಅಪರಾಧ) ನಾಗೇಶ್ ನಿರ್ದೇಶನದಂತೆ ಆಯೋಜಿಸಿದ್ದ ಯೋಗ ಶಿಬಿರದಲ್ಲಿ ಜಿಲ್ಲಾ ಸಶಸ್ತ್ರ ಮೀಸಲು ಪಡೆ ಡಿವೈಎಸ್ಪಿ ವೀರಣ್ಣ, ಡಿಎಆರ್ ಇನ್ಸ್‌ಪೆಕ್ಟರ್ ಸುಬ್ರಹ್ಮಣ್ಯ ಹಾಗೂ ಅಧಿಕಾರಿಗಳು, ಸಿಬ್ಬಂದಿಗಳು ಪಾಲ್ಗೊಂಡಿದ್ದರು.

ಮೈಸೂರಲ್ಲಿ ಹೋಮ್ ಸ್ಟೇ, ರೆಸಾರ್ಟ್ ಮಾಲೀಕರ ಸಭೆ; ನಿಯಮ ಪಾಲನೆಗೆ ಪೊಲೀಸ್ ಆಯುಕ್ತರ ಸೂಚನೆ

ಕೊಡಗಿನ ಹೋಂ ಸ್ಟೇನಲ್ಲಿ ವಿದೇಶಿ ಮಹಿಳೆ ಮೇಲೆ ಲೈಂಗಿಕ ದೌರ್ಜನ್ಯ ಪ್ರಕರಣದ ಹಿನ್ನೆಲೆಯಲ್ಲಿ ಮುನ್ನೆಚ್ಚರಿಕೆ



ಮೈಸೂರಿನ ಪೊಲೀಸ್ ಆಯುಕ್ತರ ಕಚೇರಿಯಲ್ಲಿ ನಡೆದ ರೆಸಾರ್ಟ್ ಹಾಗೂ ಹೋಮ್ ಸ್ಟೇ ಮಾಲೀಕರ ಸಭೆಯಲ್ಲಿ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ನಿಯಮ ಪಾಲಿಸುವಂತೆ ಸೂಚಿಸಿದರು.

ಮೈಸೂರು, ಏ.25(ಎಂಟಿವೈ)– ಕೊಡಗು ಜಿಲ್ಲೆಯ ಕುಟ್ಟದ ಹೋಮ್ ಸ್ಟೇನಲ್ಲಿ ವಿದೇಶಿ ಮಹಿಳೆ ಮೇಲೆ ನಡೆದ ಲೈಂಗಿಕ ದೌರ್ಜನ್ಯ ಪ್ರಕರಣದ ಹಿನ್ನೆಲೆಯಲ್ಲಿ ಮೈಸೂರಲ್ಲಿ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಹೋಮ್ ಸ್ಟೇ ಹಾಗೂ ರೆಸಾರ್ಟ್ ಮಾಲೀಕರೊಂದಿಗೆ ಸಭೆ ನಡೆಸಿ, ಕಡ್ಡಾಯ ನಿಯಮ ಪಾಲನೆ ಮಾಡುವಂತೆ ಸೂಚನೆ ನೀಡಿದರು.

ಮೈಸೂರು ಹಾಗೂ ಹೊರ ವಲಯದ ರೆಸಾರ್ಟ್ ಹಾಗೂ ಹೋಮ್ ಸ್ಟೇಗಳಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಮುಂಜಾಗ್ರತಾ ಕ್ರಮವಾಗಿ ಪೊಲೀಸರು ಸಭೆ ನಡೆಸಿ, ರೆಸಾರ್ಟ್, ಹೋಮ್ ಸ್ಟೇ ಮಾಲೀಕರು ಕಡ್ಡಾಯವಾಗಿ ಕೆಲ ಸೂಚನೆ ಪಾಲಿಸುವಂತೆ ಆದೇಶಿಸಿದ್ದಾರೆ.

ಮೈಸೂರು ಪೊಲೀಸ್ ಆಯುಕ್ತರ ಕಚೇರಿ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಮೈಸೂರಿನ ವಿವಿಧೆಡೆ ಕಾರ್ಯಾಚರಿಸುತ್ತಿರುವ 25 ಹೋಮ್ ಸ್ಟೇ ಹಾಗೂ ರೆಸಾರ್ಟ್ ಮಾಲೀಕರು ಭಾಗವಹಿಸಿದ್ದರು. ಈ ವೇಳೆ ಸೀಮಾ ಲಾಟ್ಕರ್ ಮಾತನಾಡಿ, ಮೈಸೂರು ನಗರ ವ್ಯಾಪ್ತಿಯಲ್ಲಿರುವ ರೆಸಾರ್ಟ್ ಮತ್ತು ಹೋಮ್ ಸ್ಟೇಗಳು ಅಧಿಕೃತ ಪರವಾನಗಿ ಹೊಂದಿರಬೇಕು. ಬರುವ ಪ್ರವಾಸಿಗರ ಸುರಕ್ಷತೆಗೆ ಅಗತ್ಯ ಕ್ರಮ ಕೈಗೊಳ್ಳಬೇಕು. ಕಡ್ಡಾಯವಾಗಿ ಸಿಸಿ ಕ್ಯಾಮರಾ ಅಳವಡಿಸಿರಬೇಕು. ಕೆಲಸಗಾರರ ಪೂರ್ವಾಪರ ತಿಳಿದುಕೊಂಡಿರಬೇಕು. ಕೆಲಸಗಾರರ ಹಿನ್ನೆಲೆ ಕುರಿತಂತೆ ಪೊಲೀಸ್ ಕ್ಲಿಯರೆನ್ಸ್ ಪ್ರಮಾಣಪತ್ರ ಕಡ್ಡಾಯವಾಗಿ ತರಿಸಿಕೊಂಡಿರಬೇಕು. ಪ್ರವಾಸಿಗರ ವಿಳಾಸ ದೃಢೀಕರಿಸುವ ಅಗತ್ಯ ದಾಖಲೆ ಪಡೆದುಕೊಂಡಿರಬೇಕು. ಯಾವುದೇ ಕಾರಣಕ್ಕೂ ನಿಯಮ ಉಲ್ಲಂಘಿಸಬಾರದು. ನಿಯಮ ಗಾಳಿಗೆ ತೂರಿದರೆ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಕೆ ನೀಡಿದರು.

ಈ ಸಭೆಯಲ್ಲಿ ಡಿಸಿಪಿ ಡಾ. ಹರ್ಷ ಪ್ರಿಯಂವದ, ಎಸಿಪಿಗಳು ಹಾಗೂ ಎಲ್ಲಾ ಠಾಣೆಯ ಇನ್ಸ್‌ಪೆಕ್ಟರ್‌ಗಳು ಉಪಸ್ಥಿತರಿದ್ದರು.

ವಿದೇಶಿ ಪ್ರವಾಸಿಗರು ಫಾರಂ–ಸಿ ಭರ್ತಿ ಕಡ್ಡಾಯ

ಮುಂಜಾಗ್ರತಾ ಕ್ರಮವಾಗಿ ಮೈಸೂರಿನಲ್ಲಿರುವ ಹೋಮ್ ಸ್ಟೇ, ರೆಸಾರ್ಟ್ ಮಾಲೀಕರ ಸಭೆ ನಡೆಸಲಾಗಿದೆ. ಪ್ರವಾಸಿಗರ ಸುರಕ್ಷತೆಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಲಾಗಿದೆ. ಕಡ್ಡಾಯ ಲೈಸೆನ್ಸ್ ಹೊಂದಿರಬೇಕು. ವಿದೇಶಿ ಪ್ರವಾಸಿಗರು ಬಂದರೆ ಫಾರಂ–ಸಿ ಕಡ್ಡಾಯವಾಗಿ ಭರ್ತಿ ಮಾಡುವಂತೆ ಆದೇಶಿಸಲಾಗಿದೆ. ಅಲ್ಲದೆ, ಪ್ರವಾಸೋದ್ಯಮ ಇಲಾಖೆಗೆ ಪತ್ರ ಬರೆದು ಮೈಸೂರು ನಗರ ವ್ಯಾಪ್ತಿಯಲ್ಲಿ ಎಷ್ಟು ಹೋಮ್ ಸ್ಟೇ, ರೆಸಾರ್ಟ್‌ಗಳಿಗೆ ಅನುಮತಿ ನೀಡಲಾಗಿದೆ ಎಂಬ ಮಾಹಿತಿ ಕೇಳಲು ನಿರ್ಧರಿಸಲಾಗಿದೆ.

– ಸೀಮಾ ಲಾಟ್ಕರ್, ಆಯುಕ್ತರು, ಮೈಸೂರು ನಗರ

ಭಾಗ್ಯ ಜ್ಯೋತಿ ಶಾಲೆಗೆ ಶೇ.100 ಫಲಿತಾಂಶ


ರಚನಾ


ಗೌತಮಿ


ದೀಪಕ್


ಕಶ್ಯಫ್ ಶರೀನ್


ದಿವ್ಯಶ್ರೀ

ಮೈಸೂರು, ಏ.25– ಮೈಸೂರಿನ ರಾಘವೇಂದ್ರ ನಗರದ ಭಾಗ್ಯ ಜ್ಯೋತಿ ಶಾಲೆಯು 2025–26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.100ರಷ್ಟು ಫಲಿತಾಂಶ ಸಾಧಿಸಿದೆ.

ಪರೀಕ್ಷೆಗೆ ಹಾಜರಾದ 58 ವಿದ್ಯಾರ್ಥಿಗಳಲ್ಲಿ 23 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿ, 32 ವಿದ್ಯಾರ್ಥಿಗಳು ಪ್ರಥಮ ಶ್ರೇಣಿ ಹಾಗೂ 3 ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.

ರಚನಾ ಎನ್ 616 ಅಂಕಗಳೊಂದಿಗೆ ಶಾಲೆಯ ಟಾಪರ್ ಆಗಿದ್ದು, ಗೌತಮಿ ಸಿಂಗ್ ವಿ(612), ದೀಪಕ್ ಕುಮಾರ್ ಯು. (611), ಕಶ್ಯಫ್ ಶರೀನ್(608), ದಿವ್ಯಶ್ರೀ ಎನ್.(600) ಸೇರಿದಂತೆ ಅನೇಕ ವಿದ್ಯಾರ್ಥಿಗಳು ಅತ್ಯುತ್ತಮ ಅಂಕಗಳನ್ನು ಗಳಿಸಿದ್ದಾರೆ.

ಎಲ್ಲ ವಿದ್ಯಾರ್ಥಿಗಳನ್ನು ಶಾಲೆಯ ಆಡಳಿತ ಮಂಡಳಿಯವರು, ಪ್ರಾಂಶುಪಾಲರಾದ ಷಡಕ್ಷರಿ ಎಸ್., ಮುಖ್ಯ ಶಿಕ್ಷಕಿ ಚಿತ್ರ ಎನ್.ಬಿ. ಹಾಗೂ ಶಿಕ್ಷಕರು ಅಭಿನಂದಿಸಿದ್ದಾರೆ.

ಮಹಿಳಾ ಮೀಸಲು ಮಸೂದೆ ಸೋಲಿಗೆ ಬಿಜೆಪಿಯೇ ಕಾರಣ

ನಗರ ಪಾಲಿಕೆ ಮಾಜಿ ಸದಸ್ಯ ಕೆ.ವಿ. ಮಲ್ಲೇಶ್ ಆರೋಪ


ಕೆ.ವಿ.ಮಲ್ಲೇಶ್

ಮೈಸೂರು, ಏ. 25– ಲೋಕಸಭೆಯಲ್ಲಿ ಮಹಿಳಾ ಮೀಸಲು ಮಸೂದೆಗೆ ಸೋಲಾಗಲು ಕೇಂದ್ರದ ಎನ್‌ಡಿಎ ಸರಕಾರವೇ ನೇರ ಕಾರಣ ಎಂದು ನಗರ ಪಾಲಿಕೆ ಮಾಜಿ ಸದಸ್ಯ ಕೆ.ವಿ. ಮಲ್ಲೇಶ್ ಆರೋಪಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಮಹಿಳಾ ಮೀಸಲು ಕಾಯಿದೆ–2023ಕ್ಕೆ ತಿದ್ದುಪಡಿ ತರುವ ಉದ್ದೇಶದಿಂದ ಏ.16ರಿಂದ 18ರವರೆಗೆ ಕೇಂದ್ರ ಸರಕಾರ ವಿಶೇಷ ಅಧಿವೇಶನವನ್ನು ಕರೆದಿತ್ತು. ಆದರೆ, ಈ ತಿದ್ದುಪಡಿ ಮಸೂದೆಯ ಜತೆಗೆ ವಿವಾದಾತ್ಮಕವಾಗಿರುವ ಲೋಕಸಭೆ ಮತ್ತು ವಿಧಾನಸಭೆಗಳ ಕ್ಷೇತ್ರ ಮರುವಿಂಗಡಣೆಯ ಮಸೂದೆಗಳನ್ನು ಮಂಡಿಸುವ ಮೂಲಕ ತನ್ನ ಅಜೆಂಡಾವನ್ನು ಜಾರಿಗೊಳಿಸುವ ಹುನ್ನಾರ ನಡೆಸಿತ್ತು.

ಕೇಂದ್ರ ಸರಕಾರದ ಈ ಕುತಂತ್ರದ ಬಲೆಯೊಳಗೆ ಸಿಲುಕಿದ ವಿರೋಧ ಪಕ್ಷಗಳು ಮಹಿಳಾ ಮೀಸಲು ಪರವಾಗಿದ್ದರೂ ಮತ ಚಲಾಯಿಸದಂತೆ ಆಯಿತು. ಆ ಮೂಲಕ ಬಿಜೆಪಿ ತನ್ನ ಕುತಂತ್ರ ಬುದ್ಧಿಯಲ್ಲಿ ಯಶ ಸಾಧಿಸಿತು. ಕೇಂದ್ರದ ಈ ಕುತಂತ್ರವನ್ನು ನೋಡಿಯೇ ಪ್ರಿಯಾಂಕ ಗಾಂಧಿ ಅವರು ಸಂಸತ್‌ನಲ್ಲಿ "ಪ್ರಸ್ತುತ ಚಾಣಕ್ಯ ಇದ್ದಿದ್ದರೆ ಕೇಂದ್ರ ಗೃಹಮಂತ್ರಿಗಳ ಕುತಂತ್ರವನ್ನು ಕಂಡು ದಂಗಾಗಿ ಹೋಗುತ್ತಿದ್ದರು' ಎಂದು ಹೇಳಿದ್ದು.

ನಿಜಕ್ಕೂ ಕೇಂದ್ರ ಸರಕಾರಕ್ಕೆ ಮಹಿಳಾ ಮೀಸಲು ಜಾರಿಗೊಳಿಸುವ ಸದುದ್ದೇಶವಿದ್ದರೆ ತಿದ್ದುಪಡಿ ಮಸೂದೆಯನ್ನು ಪ್ರತ್ಯೇಕವಾಗಿ ಮಂಡಿಸಲಿ. ಅದು ಬಿಟ್ಟು ಕ್ಷೇತ್ರ ಮರುವಿಂಗಡಣೆಗಳ ಮಸೂದೆಯನ್ನು ಜತೆಗೆ ಸೇರಿಸಿ ಮಂಡಿಸುವುದೇಕೆ ಮಹಿಳಾ ಮೀಸಲಾತಿಯ ವಿಷಯವನ್ನು ಕ್ಷೇತ್ರ ಮರುವಿಂಗಡಣೆಯ ಜತೆಗೆ ತಳುಕುಹಾಕಿರುವುದು ಅತ್ಯಂತ ಕಳವಳಕಾರಿ ಸಂಗತಿ ಎಂದು ಅಭಿಪ್ರಾಯಪಟ್ಟಿದ್ದಾರೆ.

ಡಾ. ಅಂಬೇಡ್ಕರ್ ಹೋರಾಟದ ಫಲವಾಗಿ 1932ರಿಂದಲೇ ಶೋಷಿತರಿಗೆ ಮೀಸಲಾತಿ ಲಭ್ಯ

ಅಕ್ಕ ಐಎಎಸ್ ಅಕಾಡೆಮಿ ಸಂಸ್ಥಾಪಕ ಡಾ. ಶಿವಕುಮಾರ್ ಸ್ಮರಣೆ



ಮೈಸೂರಿನ ತಿಲಕ್‌ನಗರದಲ್ಲಿರುವ ರಾಜಕುಮಾರಿ ದೊಡ್ಡಮ್ಮಣ್ಣಿ ಆಶ್ರಮದ ಆವರಣದಲ್ಲಿ ಅಂಧರ ಸ್ನೇಹ ಬಳಗದ ವತಿಯಿಂದ ಶನಿವಾರ ನಡೆದ ಬುದ್ಧ, ಬಸವ ಹಾಗೂ ಅಂಬೇಡ್ಕರ್ ಜಯಂತಿ ಕಾರ್ಯಕ್ರಮವನ್ನು ಅಕ್ಕ ಐಎಎಸ್ ಅಕಾಡೆಮಿಯ ಸಂಸ್ಥಾಪಕ ಡಾ.ಶಿವಕುಮಾರ್ ಉದ್ಘಾಟಿಸಿದರು.

ಮೈಸೂರು, ಏ.25(ಎಂಟಿವೈ)– ದುಂಡುಮೇಜಿನ ಸಭೆಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರು ಪ.ಜಾತಿ, ಪ.ಪಂಗಡಕ್ಕೆ ಮೀಸಲಾತಿಗಾಗಿ ಹೋರಾಟ ಮಾಡಿದ ಫಲವಾಗಿ ಶೋಷಿತ ಸಮುದಾಯಕ್ಕೆ 1932ರಿಂದಲೇ ಉದ್ಯೋಗದಲ್ಲಿ ಮೀಸಲಾತಿ ದೊರೆಯುವಂತಾಯಿತು ಎಂದು ಅಕ್ಕ ಐಎಎಸ್ ಅಕಾಡೆಮಿಯ ಸಂಸ್ಥಾಪಕ ಡಾ.ಶಿವಕುಮಾರ್ ತಿಳಿಸಿದ್ದಾರೆ.

ಮೈಸೂರಿನ ತಿಲಕ್‌ನಗರದಲ್ಲಿರುವ ರಾಜಕುಮಾರಿ ದೊಡ್ಡಮ್ಮಣ್ಣಿ ಆಶ್ರಮದ ಆವರಣದಲ್ಲಿ ಅಂಧರ ಸ್ನೇಹ ಬಳಗದ ವತಿಯಿಂದ ಶನಿವಾರ ನಡೆದ ಬುದ್ಧ, ಬಸವ ಹಾಗೂ ಅಂಬೇಡ್ಕರ್ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಡಾ.ಬಿ.ಆರ್ ಅಂಬೇಡ್ಕರ್ ಅವರ ಹೋರಾಟದ ಫಲವಾಗಿ ಬ್ರಿಟಿಷ್ ಸರ್ಕಾರ ಅಸ್ಪೃಶ್ಯರಿಗೆ ಸರ್ಕಾರಿ ಸೌಲಭ್ಯ, ಶಾಲಾ–ಕಾಲೇಜು ಸೌಲಭ್ಯಗಳ ಒದಗಿಸಿಕೊಟ್ಟಿತು. ಇದರಿಂದ ಹಿಂದುಳಿದವರು, ಅಸ್ಪೃಶ್ಯರು ವೈದ್ಯ, ಶಿಕ್ಷಕ, ಕಲೆಕ್ಟರ್ ಆಗಲು ಸಾಧ್ಯವಾಯಿತು. ಭಾರತೀಯರಿಗೆ ಅಂಬೇಡ್ಕರ್ ಅವರು ಶಿಕ್ಷಣ ಕೊಡಿಸಿ, ಉದ್ಯೋಗದಲ್ಲಿ ಸ್ವಾತಂತ್ರ್ಯವನ್ನು ಕೊಟ್ಟರು ಎಂದರು.

ಈ ಹಿಂದೆ ಬ್ರಾಹ್ಮಣ ಮಹಿಳೆಯಾಗಿರಲಿ, ಅಸ್ಪೃಶ್ಯ ಮಹಿಳೆಯಾಗಿರಲಿ ಅವರಿಗೆ ಸ್ವಾತಂತ್ರ್ಯವಿರಲಿಲ್ಲ. ಅವರನ್ನು ಸಂಪೂರ್ಣವಾಗಿ ಗಂಡಸರ ಅಡಿಯಾಳನ್ನಾಗಿ ಮಾಡಲಾಗಿತ್ತು. ಅದಕ್ಕಾಗಿ ಮಹಿಳೆಯರಿಗಾಗಿ ಅಂಬೇಡ್ಕರ್ ಅವರು ಹಿಂದೂ ಕೋಡ್ ಬಿಲ್ ತಯಾರು ಮಾಡಿದ್ದರು. ಅವರ ಈ ಹೋರಾಟದ ಫಲದಿಂದ ಮಹಿಳೆಯರು ಸೌಲಭ್ಯ ಪಡೆಯುತ್ತಿದ್ದಾರೆ. ಮೊದಲ ಬಾರಿಗೆ ಮಹಿಳೆಯರ ಸ್ವಾತಂತ್ರ್ಯಕ್ಕಾಗಿ ಬುದ್ಧ ಧ್ವನಿ ಎತ್ತಿದ್ದರು. ನಂತರ ಬಸವಣ್ಣ, ಜ್ಯೋತಿ ಬಾ ಫುಲೆ ಹೋರಾಡಿದ್ದರು. ಬ್ರಿಟಿಷರ ಕಾಲದಲ್ಲಿ 1942, 1943 ಹಾಗೂ ಬಳಿಕ 1953ರಲ್ಲಿ ಅಂಬೇಡ್ಕರ್ ಅವರು ಕಾರ್ಮಿಕ ಮಂತ್ರಿಯಾಗಿ ಮೂರು ಖಾತೆಗಳನ್ನು ನಿಭಾಯಿಸುತ್ತಿದ್ದರು. ಈ ಸಂದರ್ಭದಲ್ಲೇ ಕಾರ್ಮಿಕರಿಗೆ ಹಲವು ಕಾನೂನು ಜಾರಿಗೆ ತಂದು ಕಾರ್ಮಿಕರ ಹಿತ ಕಾಪಾಡಿದರು ಎಂದು ತಿಳಿಸಿದರು.


ಕಾರ್ಯಕ್ರಮದಲ್ಲಿ ಸಾಮಾಜಿಕ ಹೋರಾಟಗಾರ ಅಹಿಂದ ಜವರಪ್ಪ, ಸಂಗೀತ ವಿದ್ವಾಂಸ ಮಾನಯ್ಯ, ಸಿದ್ದರಾಜು ಸೇರಿದಂತೆ ಇತರರು ಉಪಸ್ಥಿತರಿದ್ದರು.

'ಮೈಸೂರು ಮಿತ್ರ' ವರದಿ ಫಲಶ್ರುತಿ

ಕೆಎಸ್‌ಐಸಿಯ ರಹಸ್ಯ 'ವಿಐಪಿ ಕೌಂಟರ್' ಬಂದ್

ಸರದಿ ಸಾಲಿನಲ್ಲಿ ನಿಂತ ಎಲ್ಲಾ ಮಹಿಳೆಯರಿಗೂ ಮೈಸೂರು ಸಿಲ್ಕ್ ಸೀರೆ ಭಾಗ್ಯ!

- ಜನರಲ್ ಮ್ಯಾನೇಜರ್‌ರಿಂದ ಶಿಫಾರಸು ಸ್ಥಗಿತ
- ಈಗ ಶಾಸಕರು, ಮಂತ್ರಿಗಳ ಶಿಫಾರಸು ಪತ್ರ ಸರದಿ!
- ಮೈಸೂರು ಸಿಲ್ಕ್ ಸೀರೆ ಬೇಕಿದ್ದರೆ ಎಲ್ಲರೂ ಸರದಿ ಸಾಲಿನಲ್ಲಿ ನಿಲ್ಲಲೇಬೇಕು



ಮೈಸೂರು, ಏ.25(ಬಿಎಲ್‌ಯು)– ಮೈಸೂರಿನ ಮಾನಂದವಾಡಿ ರಸ್ತೆಯ ಕೆಎಸ್‌ಐಸಿಯಲ್ಲಿ ಮೈಸೂರು ಸಿಲ್ಕ್ ಸೀರೆಗೆ ವ್ಯವಸ್ಥೆ ಮಾಡಲಾಗಿದ್ದ ಸೀಕ್ರೆಟ್ ವಿಐಪಿ ಕೌಂಟರ್ ಅನ್ನು ಬಂದ್ ಮಾಡಲಾಗಿದೆ.

ಮೈಸೂರು ಸಿಲ್ಕ್ ಸೀರೆಗಾಗಿ ಬಡ ಹಾಗೂ ಮಧ್ಯಮ ವರ್ಗದವರು ಮುಂಜಾನೆ 5 ಗಂಟೆಗೆ ಸರದಿ ಸಾಲಿನಲ್ಲಿ ಗಂಟೆ ಗಟ್ಟಲೆ ನಿಂತು ಸೀರೆ ಖರೀದಿ ಮಾಡುತ್ತಿದ್ದಾರೆ.

ಆದರೆ ಕೆಎಸ್‌ಐಸಿಯ ಶತಮಾನೋತ್ಸವ ಭವನದಲ್ಲಿ ಸೀಕ್ರೆಟ್ ಆಗಿ ತೆರೆದಿದ್ದ ವಿಐಪಿ ಕೌಂಟರ್‌ನಲ್ಲಿ ಪ್ರತಿ ದಿನ ಮಧ್ಯಾಹ್ನ 3 ಗಂಟೆಗೆ ಪ್ರಭಾವಿಗಳಿಗೆ ಮಾತ್ರ ಮೈಸೂರು ಸಿಲ್ಕ್ ಸೀರೆ ಮಾರಾಟ ಮಾಡಲಾಗುತ್ತಿತ್ತು ಬೆಂಗಳೂರಿನಲ್ಲಿರುವ ಕೆಎಸ್‌ಐಸಿ ಜನರಲ್ ಮ್ಯಾನೇಜರ್ ಅವರಿಂದ ಶಿಫಾರಸು ತಂದವರು ತಮಗೆ ಇಷ್ಟ ಬಂದ ಸೀರೆ ಖರೀದಿ ಮಾಡುತ್ತಿದ್ದರು.

ಈ ಸಂಬಂಧ 'ಮೈಸೂರು ಮಿತ್ರ'ನ ಏಪ್ರಿಲ್ 23ರ ಸಂಚಿಕೆಯಲ್ಲಿ 'ಮೈಸೂರು ಸಿಲ್ಕ್ ಸೀರೆ ಖರೀದಿಗೆ ಪ್ರಭಾವಿಗಳಿಗೆ ರಹಸ್ಯ ಮಾರ್ಗ' ಶೀರ್ಷಿಕೆಯಡಿ ವರದಿ ಪ್ರಕಟವಾಗಿತ್ತು.

'ಮಿತ್ರ'ನ ವರದಿ ಪ್ರಕಟವಾದ ಮಾರನೇ ದಿನ ಅಂದರೆ ಏಪ್ರಿಲ್ 24ರಂದೇ ವಿಐಪಿ ಕೌಂಟರ್ ಅನ್ನು ಮುಚ್ಚಿದ್ದಾರೆ. ಜನರಲ್ ಮ್ಯಾನೇಜರ್ ಕೂಡ ಶಿಫಾರಸು ಮಾಡುವುದನ್ನು ಸ್ಥಗಿತಗೊಳಿಸಿದ್ದಾರೆ.

ಆದರೂ ಇಂದಿಗೂ ಕೆಲವು ಪ್ರಭಾವಿಗಳು, ಮಂತ್ರಿಗಳು, ಶಾಸಕರು ಸೇರಿದಂತೆ ಇತರರಿಂದ ಶಿಫಾರಸು ಪತ್ರ ತರುತ್ತಿದ್ದಾರೆ. ಈ ವೇಳೆ 'ಮೈಸೂರು ಮಿತ್ರ'ದಲ್ಲಿ ಪ್ರಕಟವಾಗಿರುವ ಸುದ್ದಿಯನ್ನು ಉಲ್ಲೇಖಿಸುತ್ತಿರುವ ಅಧಿಕಾರಿಗಳು ವಿಐಪಿ ಕೌಂಟರ್ ಮುಚ್ಚಿರುವ ವಿಚಾರ ತಿಳಿಸುತ್ತಿದ್ದಾರೆ. ನಿಮಗೆ ಸೀರೆ ಬೇಕಿದ್ದರೆ ಎಲ್ಲರಂತೆ ನೀವೂ ಸರದಿ ಸಾಲಿನಲ್ಲಿ ನಿಂತು ಸೀರೆ ಖರೀದಿಸಿ ಎಂದು ಸಮಜಾಯಿಷಿ ನೀಡುತ್ತಿದ್ದಾರೆ.

ವಿಐಪಿ ಕೌಂಟರ್ ಮುಚ್ಚಿರುವ ಪರಿಣಾಮ ಇಂದು ಸರದಿ ಸಾಲಿನಲ್ಲಿ ನಿಂತಿದ್ದ ಎಲ್ಲರಿಗೂ ಮೈಸೂರು ಸಿಲ್ಕ್ ಸೀರೆ ದೊರೆತಿದೆ. ವಿಐಪಿ ಕೌಂಟರ್ ತೆರೆದಿದ್ದಾಗ ಸರದಿ ಸಾಲಿನಲ್ಲಿ ನಿಂತ ಅರ್ಧದಷ್ಟು ಮಹಿಳೆಯರಿಗೆ ಸೀರೆ ದೊರೆಯದೆ ನಿರಾಶೆಯಿಂದ ವಾಪಸ್ಸಾಗುತ್ತಿದ್ದರು.